23 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 23 | ಸಂಚಿಕೆ 333 | ನವದೆಹಲಿ | ಬೆಲೆ ₹10 | ಜೂನ್ 8 2026, ಸೋಮವಾರ

## ಒಳಪುಟಗಳಲ್ಲಿ

ಮಾತುಕತೆ ಮೂಲಕವೇ ಗಡಿವಿವಾದ ಇತ್ಯರ್ಥ-ನೇಪಾಳ ವಿದೇಶಾಂಗ ಸಚಿವ ಶಿಶಿರ್ ಖನಾಲ್ ಇಂಗಿತ - ಪು.4

ಬೆಂಗಳೂರಿನಲ್ಲಿ ರೌಡಿಸಂಗೆ ಕಡಿವಾಣ ಹಾಕಲು ಆಂಟಿ ರೌಡಿಸಂ ಸ್ಕ್ವಾಡ್- ಪ್ರತಿ ವಲಯ, ಠಾಣೆಮಟ್ಟದಲ್ಲಿ ತಂಡ ರಚನೆಗೆ ಡಿಜಿ ಐಜಿಪಿ ಡಾ.ಎಂ.ಎ.ಸಲೀಂ ಸುತ್ತೋಲೆ - ಪು.5

# ಯುದ್ಧದ ಪರಿಣಾಮ ಗೃಹಬಳಕೆ ಎಲ್‌ಪಿಜಿ ಸಿಲಿಂಡರ್ ಮತ್ತೆ ಏರಿಕೆ

**ಮೂರು ತಿಂಗಳಲ್ಲಿ ಎರಡನೇ ಬಾರಿ ಹೆಚ್ಚಳ**

**942 ರೂ. ತಲುಪಿದ ಪ್ರತಿ ಸಿಲಿಂಡರ್ ಬೆಲೆ**



ನವದೆಹಲಿ, ಜೂ.7: ದೇಶದ ಜನಸಾಮಾನ್ಯರಿಗೆ ಮತ್ತೊಮ್ಮೆ ಬೆಲೆ ಏರಿಕೆಯ ಬಿಸಿ ತಟ್ಟಿದೆ. ಗೃಹಬಳಕೆಯ 14.2 ಕೆಜಿ ಎಲ್‌ಪಿಜಿ ಸಿಲಿಂಡರ್ ಬೆಲೆಯನ್ನು ಪ್ರತಿ ಸಿಲಿಂಡರ್‌ಗೆ 29 ರೂ. ಏರಿಕೆಯಾಗಿದೆ.

ಜಾಗತಿಕ ಇಂಧನ ಮಾರುಕಟ್ಟೆಯಲ್ಲಿನ ಏರಿಳಿತ ಮತ್ತು ಪಶ್ಚಿಮ ಏಷ್ಯಾ ಸಂಘರ್ಷದ ಹಿನ್ನೆಲೆಯಲ್ಲಿ ತೈಲ ಕಂಪನಿಗಳು ಈ ನಿರ್ಧಾರ ಕೈಗೊಂಡಿದ್ದು ಶನಿವಾರದಿಂದಲೇ ಹೊಸ ದರಗಳು ಜಾರಿಗೆ ಬಂದಿವೆ.

ಕಳೆದ ಮೂರು ತಿಂಗಳಲ್ಲಿ ಅಡುಗೆ ಅನಿಲ ದರ ಹೆಚ್ಚಳವಾಗಿರುವುದು ಇದು ಎರಡನೇ ಬಾರಿಯಾಗಿದೆ. ಇದಕ್ಕೂ ಮುನ್ನ ಮಾರ್ಚ್ 7 ರಂದು ಸಿಲಿಂಡರ್ ಬೆಲೆಯಲ್ಲಿ 60 ರೂ. ಏರಿಕೆ ಮಾಡಲಾಗಿತ್ತು. ಇದರೊಂದಿಗೆ ದೆಹಲಿಯಲ್ಲಿ ಇದುವರೆಗೆ 913 ಇದ್ದ ಸಿಲಿಂಡರ್ ಬೆಲೆ ಈಗ 942 ರೂ. ತಲುಪಿದೆ.

ಜೂನ್ 1 ರಂದೇ 19 ಕೆಜಿಯ ವಾಣಿಜ್ಯ ಸಿಲಿಂಡರ್ ಬೆಲೆಯನ್ನು 42 ರೂ. ರಷ್ಟು ಹೆಚ್ಚಿಸಲಾಗಿತ್ತು. ಜಾಗತಿಕ ಮಾರುಕಟ್ಟೆಯ ಏರಿಳಿತದಿಂದಾಗಿ ಇತ್ತೀಚಿನ ವಾರಗಳಲ್ಲಿ ಪೆಟ್ರೋಲ್, ಡೀಸೆಲ್ ಮತ್ತು ಸಿಎನ್‌ಜಿ ದರಗಳಲ್ಲೂ ಸಹ ಏರಿಕೆ ಕಂಡುಬಂದಿದೆ.

ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧ ಮತ್ತು ರಾಜತಾಂತ್ರಿಕ ಬಿಕ್ಕಟ್ಟುಗಳಿಂದಾಗಿ ಜಾಗತಿಕ ಇಂಧನ ಮಾರುಕಟ್ಟೆಯಲ್ಲಿ ತಲ್ಲಣ ಉಂಟಾಗಿದೆ. ಇದು ಕಚ್ಚಾ ತೈಲ ಮತ್ತು ಅನಿಲದ ಆಮದು ವೆಚ್ಚವನ್ನು ಗಣನೀಯವಾಗಿ ಹೆಚ್ಚಿಸಿದೆ.

ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಲೆಗಳು ಏರಿದ್ದರೂ, ದೇಶೀಯ ಮಾರುಕಟ್ಟೆಯಲ್ಲಿ ತೈಲ ಕಂಪನಿಗಳು ಸಬ್ಸಿಡಿ ದರದ ಸಿಲಿಂಡರ್‌ಗಳನ್ನು ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದ್ದವು.

ಇದರಿಂದ ಉಂಟಾಗುತ್ತಿದ್ದ ನಷ್ಟವನ್ನು ಭಾಗಶಃ ಸರಿದೂಗಿಸಲು ಈ ಬೆಲೆ ಏರಿಕೆ ಮಾಡಲಾಗಿದೆ.

ಪೆಟ್ರೋಲಿಯಂ ಸಚಿವಾಲಯದ ಜಂಟಿ ಕಾರ್ಯದರ್ಶಿ ಸುಜಾತಾ ಶರ್ಮಾ ಅವರ ಪ್ರಕಾರ, ಸದ್ಯಕ್ಕೆ ದೇಶೀಯ ಅಡುಗೆ ಅನಿಲದ ಮೇಲಿನ ಅಂಡರ್ ರಿಕವರಿ (ಸರ್ಕಾರ/ಕಂಪನಿಗಳು ಭರಿಸುತ್ತಿರುವ ನಷ್ಟದ ಪ್ರಮಾಣ) ಇನ್ನೂ ಸಿಲಿಂಡರ್‌ಗೆ 700 ರೂ. ಆಸುಪಾಸಿನಲ್ಲಿದೆ.

# ಮೆಟ್ರೋದಲ್ಲಿ ಪ್ರಯಾಣಿಸಿದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್

## ಸಾರ್ವಜನಿಕರ ಜೊತೆ ಮಾತುಕತೆ, ಮಗುವಿಗೆ ಚಾಕೊಲೇಟ್ ನೀಡಿ ಸೆಲ್ಫಿ ಕ್ಲಿಕ್ಕಿಸಿಕೊಂಡ ಸಿಎಂ



ಬೆಂಗಳೂರು, ಜೂ.7: ಸಹ ಪ್ರಯಾಣಿಕರೊಂದಿಗೆ ಕುಶಲೋಪರಿ, ಚಿಕ್ಕ ಮಗುವಿಗೆ ಚಾಕಲೇಟ್ ಕೊಟ್ಟು, ಯುವಕ ಯುವತಿಯರೊಂದಿಗೆ ಸೆಲ್ಫಿ... ಇವಿಷ್ಟೂ ಸಿಎಂ ಡಿ.ಕೆ. ಶಿವಕುಮಾರ್ ಅವರು ಭಾನುವಾರ ಮೆಟ್ರೋ ಪ್ರಯಾಣದ ಸುಂದರ ಚಿತ್ರಣ.

ಮುಖ್ಯಮಂತ್ರಿಯಾದ ನಂತರ ಮೊದಲ ಬಾರಿಗೆ ತವರು ಕ್ಷೇತ್ರದ ಜನರ ಭೇಟಿಗೆ ಹೊರಟ ಸಿಎಂ ಡಿ. ಕೆ.ಶಿವಕುಮಾರ್ ಅವರು ಜೀರೋ ಟ್ರಾಫಿಕ್‌ನಿಂದ ಸಾರ್ವಜನಿಕರಿಗೆ ತೊಂದರೆಯಾಗುವುದನ್ನು ತಪ್ಪಿಸಲು ವಿಧಾನಸೌಧದಿಂದ ಬಳಿಯಿಂದ ಕನಕಪುರ ರಸ್ತೆವರೆಗೂ ಮೆಟ್ರೋ ಮೂಲಕ ಪ್ರಯಾಣ ಬೆಳೆಸಿದರು.

> **ಗ್ಯಾಸ್, ಡೀಸೆಲ್ ಬೆಲೆ ಏರಿಕೆ ಗಾಬರಿಯಾಗುತ್ತದೆ. ಅದಕ್ಕೆ ಪ್ರತ್ಯೇಕ ವರದಿ ಕೇಳಿದ್ದೇನೆ. ಇದಕ್ಕಿಂತ ಇಂಡಸ್ಟ್ರಿಯಲ್ ಗ್ಯಾಸ್ ಬೆಲೆ, ಡೀಸೆಲ್ ಬೆಲೆ ಗಾಬರಿ ಆಗುವಂತೆ ಏರಿಕೆ ಮಾಡಿದ್ದಾರೆ. ವರದಿ ತೆಗೆದುಕೊಳ್ಳುತ್ತಿದ್ದೇನೆ. ಸೋಮವಾರ ಇದರ ಬಗ್ಗೆ ಮಾತನಾಡುತ್ತೇನೆ.**
> –ಡಿ.ಕೆ. ಶಿವಕುಮಾರ್, ಮುಖ್ಯಮಂತ್ರಿ

ಡಾ. ಬಿ.ಆರ್.ಅಂಬೇಡ್ಕರ್ ಮೆಟ್ರೋ ನಿಲ್ದಾಣದಲ್ಲಿ ಕೆಲಹೊತ್ತು ದಿನಪತ್ರಿಕೆಗಳ ಮೇಲೆ ಕಣ್ಣಾಡಿಸಿದ ಸಿಎಂ ನಂತರ ಮೆಟ್ರೋ ಪ್ರಯಾಣಿಕರಿಗೆ ಹಸ್ತಲಾಘವ ಮಾಡಿದರು. ಯುವಕ ಯುವತಿಯರು "ನಮ್ಮ ಸಿಎಂ" ಎಂದು ಹುಮ್ಮಸ್ಸಿನಿಂದ ಮಾತನಾಡಿಸಿ ಹಸ್ತಲಾಘವ ಮಾಡಿದರು. ಅನೇಕರು ಮುಖ್ಯಮಂತ್ರಿಗಳ ಜೊತೆ ಸೆಲ್ಫಿ ತೆಗೆದುಕೊಂಡು ಸಂಭ್ರಮಿಸಿದರು.

ಮೆಟ್ರೋ ಪ್ರಯಾಣ ಹೇಗನಿಸುತ್ತದೆ ಎಂದು ಸಿಎಂ ಯುವತಿಯೊಬ್ಬರನ್ನು ಕೇಳಿದಾಗ, "ಮೆಟ್ರೋ ರೈಲು ಪ್ರಯಾಣದಿಂದ ಸಾಕಷ್ಟು ಸಮಯ ಉಳಿಯುತ್ತಿದೆ"ಎಂದು ಉತ್ತರಿಸಿದರು. ಇದೇ ವೇಳೆ ಮಗುವಿಗೆ ಚಾಕೊಲೇಟ್ ನೀಡಿ ಅವರ ಪೋಷಕರ ಜೊತೆ ಸೆಲ್ಫಿ ತೆಗೆದುಕೊಂಡರು. ಮಗುವೊಂದು ನನಗೂ ಫೋಟೋ ಕೊಡಿ ಎಂದಾಗ ಸ್ವತಃ ಮುಖ್ಯಮಂತ್ರಿಗಳೇ ಮೊಬೈಲ್ ಪಡೆದುಕೊಂಡು ಸೆಲ್ಫಿ ಕೊಟ್ಟರು.

ಹಿರಿಯ ನಾಗರಿಕರೊಬ್ಬರು ಡಿ.ಕೆ.ಶಿವಕುಮಾರ್ ಅವರನ್ನು ಕಂಡೊಡನೆ "ನಿಮ್ಮನ್ನು ಮೆಟ್ರೋ ರೈಲಿನಲ್ಲಿ ನೋಡಿ ತುಂಬಾ ಸಂತೋಷವಾಯಿತು. ಒಳ್ಳೆಯದಾಗಲಿ" ಎಂದು ಹಾರೈಸಿದರು. ವಿದೇಶಿ ಪ್ರವಾಸಿಗರಿಗೆ ಮೆಟ್ರೋ ಪ್ರಯಾಣ ಅನುಭವ ಹೇಗಿದೆ ಎಂದು ಕೇಳಿ ತಿಳಿದುಕೊಂಡರು. ಯುವತಿಯೋರ್ವರಿಗೆ "ಏನು ಓದುತ್ತಿದ್ದೀರಿ? ಎಲ್ಲಿ? ಎಲ್ಲಿ ವಾಸ ಮಾಡುತ್ತಿದ್ದೀರಿ ಎಂದು ಮಾಹಿತಿ ಪಡೆದು. ಚೆನ್ನಾಗಿ ಓದಬೇಕು. ಭಾರತವನ್ನು ಕರ್ನಾಟಕದ ಮೂಲಕ ನೋಡಲಾಗುತ್ತಿದೆ. ಸಿಕ್ಕ ಅವಕಾಶ ಬಳಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

### ಕ್ಷೇತ್ರದ ಸಮಸ್ಯೆ ಆಲಿಸಲು ಪ್ರತ್ಯೇಕ ಅಧಿಕಾರಿ ನೇಮಕ

ಡಾ.ಬಿ.ಆರ್.ಅಂಬೇಡ್ಕರ್ ನಿಲ್ದಾಣದ ಬಳಿ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಸಿಎಂ ಡಿ.ಕೆ.ಶಿವಕುಮಾರ್ ಅವರು, "ನನ್ನ ಕ್ಷೇತ್ರದ ಜನ ದೊಡ್ಡಾಲಹಳ್ಳಿಯಿಂದ ನನ್ನನ್ನು ಇಲ್ಲಿಯವರೆಗೆ ಕರೆತಂದಿದ್ದಾರೆ. ಕ್ಷೇತ್ರದ ಜನರು ನನ್ನನ್ನು ಭೇಟಿಯಾಗಬೇಕು ಎಂದು ಕೇಳುತ್ತಿದ್ದರು. ಅದಕ್ಕೆ ನನ್ನ ಕ್ಷೇತ್ರ, ನನ್ನ ಜನತೆ ಭೇಟಿಯಾಗುತ್ತಿದ್ದೇನೆ" ಎಂದು ಡಿ.ಕೆ. ಶಿವಕುಮಾರ್ ಹೇಳಿದರು. ನನ್ನ ಕ್ಷೇತ್ರದ ಜನತೆಯ ಸಮಸ್ಯೆ, ಕುಂದುಕೊರತೆಗಳನ್ನು ಆಲಿಸಲು ಪ್ರತ್ಯೇಕ ಅಧಿಕಾರಿಗಳನ್ನು ನೇಮಕ ಮಾಡುತ್ತೇನೆ. ನನ್ನ ಕ್ಷೇತ್ರದ ಜನತೆ ಎಂದೂ ತೊಂದರೆ ಕೊಟ್ಟವರಲ್ಲ. ಅವರವರ ಕೆಲಸ ನೋಡಿಕೊಂಡು ಹೋಗುತ್ತಿದ್ದಾರೆ. ನನ್ನ ಕ್ಷೇತ್ರದ ಜನಕ್ಕೆ ರಾಜಕೀಯ, ಪ್ರಜ್ಞೆಯಿದೆ. ನನ್ನಿಂದ ಅಪೇಕ್ಷೆ ಮಾಡದೇ ಹೋದರೂ ನಾನು ಅವರ ಸೇವೆ ಮಾಡಬೇಕಿರುವುದು ನನ್ನ ಕರ್ತವ್ಯ" ಎಂದರು. "ನನ್ನ ಜನರಿಗೆ ಕೃತಜ್ಞತೆ ಸಲ್ಲಿಸಬೇಕು. ಅವರ ಭಾವನೆ, ಶ್ರಮಕ್ಕೆ ತಕ್ಕ ಫಲ ಸಿಗಬೇಕು. ಸಾತನೂರು ಕ್ಷೇತ್ರ, ದೊಡ್ಡಾಲಹಳ್ಳಿ ಜಿಲ್ಲಾ ಪಂಚಾಯತಿ, ಕನಕಪುರದ ಜನ ನನ್ನ ಭೇಟಿ ಮಾಡಬೇಕು ಎಂದು ಹೇಳುತ್ತಿದ್ದರು. ಅವರಿಗೆ ಸಮಯ ನೀಡುವುದಕ್ಕೆ ಆಗಿರಲಿಲ್ಲ. ಯಾರೂ ಬೆಂಗಳೂರಿಗೆ ಬರಬೇಡಿ ಅಂತ ಮನವಿ ಮಾಡಿದ್ದೆ. ಆದ ಕಾರಣಕ್ಕೆ ಕ್ಷೇತ್ರಕ್ಕೆ ಭೇಟಿ ನೀಡುತ್ತಿದ್ದೇನೆ" ಎಂದರು.

"ನನ್ನ ಕ್ಷೇತ್ರದ ಜನ ವಿಧಾನಸೌಧದ ಮೆಟ್ಟಿಲು ಹತ್ತಿಸಿದ್ದಾರೆ. ಕಳೆದ 40 ವರ್ಷಗಳಿಂದ ಬೆಳೆಸಿದ್ದಾರೆ ಮೊದಲು ಅವರಿಗೆ ಕೃತಜ್ಞತೆ ಸಲ್ಲಿಸಬೇಕಾಗಿರೋದು ನನ್ನ ಕರ್ತವ್ಯ. ಅದಕ್ಕೆ ಎಲ್ಲಾ ಕೆಲಸ ಮುಗಿಸಿ ಜನರ ಭೇಟಿಗೆ ಹೋಗುತ್ತಿದ್ದೇನೆ" ಎಂದು ಹೇಳಿದರು.

# ಸಾಮಾನ್ಯ ಜನರ ಅಡುಗೆಮನೆ ಸುಡಲು ಮುನ್ನುಡಿ ಬರೆಯುತ್ತಿರುವ ದರ ಏರಿಕೆ

- ಎಲ್‌ಪಿಜಿ ದರ ಹೆಚ್ಚಳಕ್ಕೆ ಕೇಂದ್ರ ಸರ್ಕಾರದ ವಿರುದ್ಧ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಾಗ್ದಾಳಿ
- ಇಂಧನ ಪೂರೈಕೆ ಕುರಿತ ಕಾರ್ಯತಂತ್ರ ಏನಾಯಿತು ಎಂದು ಪ್ರಶ್ನೆ



ನವದೆಹಲಿ, ಜೂ.7: ಎಲ್‌ಪಿಜಿ ಸಿಲಿಂಡರ್ ಬೆಲೆ ಏರಿಕೆಯ ವಿರುದ್ಧ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಮೇಲೆ ವಾಗ್ದಾಳಿ ನಡೆಸಿದ್ದಾರೆ. ಅಡುಗೆ ಅನಿಲ ದರದಲ್ಲಿ ನಿರಂತರವಾಗಿ ಆಗುತ್ತಿರುವ ಹೆಚ್ಚಳವು ಸಾಮಾನ್ಯ ಕುಟುಂಬಗಳ ಮೇಲೆ ಭರಿಸಲಾಗದ ಹೊರೆಯಾಗಿದೆ ಎಂದು ಆರೋಪಿಸಿರುವ ಅವರು, ಕೇಂದ್ರದ ಇಂಧನ ಮತ್ತು ಕಲ್ಯಾಣ ನೀತಿಗಳ ಪರಿಣಾಮಕಾರಿತ್ವದ ಬಗ್ಗೆ ಪ್ರಶ್ನೆಗಳನ್ನು ಎತ್ತಿದ್ದಾರೆ.

ಸಾಮಾಜಿಕ ಮಾಧ್ಯಮದಲ್ಲಿ ಹೇಳಿಕೆ ಹಾಕಿರುವ ಖರ್ಗೆ, ಗಗನಕ್ಕೇರುತ್ತಿರುವ ಎಲ್‌ಪಿಜಿ ಬೆಲೆಗಳು "ಸಾಮಾನ್ಯ ನಾಗರಿಕರ ಅಡುಗೆಮನೆಗಳನ್ನು ಸುಡಲು ಮುನ್ನುಡಿ ಬರೆಯುತ್ತಿವೆ" ಎಂದು ಪ್ರತಿಪಾದಿಸಿದ್ದಾರೆ ಮತ್ತು ದೇಶೀಯ ಅಡುಗೆ ಇಂಧನವನ್ನು ಸಾಮಾನ್ಯ ಜನರಿಗೆ ದಕ್ಕದಂತೆ ಮಾಡುತ್ತಿರುವುದಾಗಿ ಸರ್ಕಾರದ ವಿರುದ್ಧ ಆರೋಪ ಮಾಡಿದ್ದಾರೆ. ಕಳೆದ ನಾಲ್ಕು ತಿಂಗಳಲ್ಲಿ ದೇಶೀಯ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆ 89 ರೂ.ಗಳಷ್ಟು ಹೆಚ್ಚಾಗಿದೆ ಎಂದು ಬೆಟ್ಟು ಮಾಡಿರುವ ಅವರು, ನಿರಂತರ ಹಣದುಬ್ಬರದ ಒತ್ತಡದ ಸಮಯದಲ್ಲಿ ಈ ಹೆಚ್ಚಳವು ಕುಟುಂಬದ ಬಜೆಟ್‌ಗೆ ಭಾರಿ ಪೆಟ್ಟು ನೀಡುತ್ತಿದೆ ಎಂದು ವಾದಿಸಿದ್ದಾರೆ.

"ದೇಶೀಯ ಎಲ್‌ಪಿಜಿಯ ಗಗನಕ್ಕೇರುತ್ತಿರುವ ಬೆಲೆಗಳು ಸಾಮಾನ್ಯ ನಾಗರಿಕರ ಅಡುಗೆಮನೆಗಳನ್ನು ಸುಡುವ ಭೀತಿ ಮೂಡಿಸುತ್ತಿವೆ," ಎಂದು ಖರ್ಗೆ ಹೇಳಿದ್ದಾರೆ. ಇದರೊಂದಿಗೆ ಇಂಧನ ಲಭ್ಯತೆ, ಕಲ್ಯಾಣ ಯೋಜನೆಗಳ ಅನುಷ್ಠಾನ ಮತ್ತು ಪ್ರಸ್ತುತ ಆಡಳಿತಾವಧಿಯಲ್ಲಿ ಎಲ್‌ಪಿಜಿ ಬೆಲೆಗಳ ಒಟ್ಟಾರೆ ಪಥದ ಬಗ್ಗೆ ಸರ್ಕಾರಕ್ಕೆ ಸರಣಿ ಪ್ರಶ್ನೆಗಳನ್ನು ಹಾಕಿದ್ದಾರೆ.

ಸಂಸತ್ತಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ನೀಡಿದ ಹೇಳಿಕೆಗಳನ್ನು ಉಲ್ಲೇಖಿಸಿದ ಖರ್ಗೆ, ಪಶ್ಚಿಮ ಏಷ್ಯಾ ಯುದ್ಧಕ್ಕೆ ಪ್ರತಿಕ್ರಿಯೆಯಾಗಿ 41 ದೇಶಗಳಿಂದ ಇಂಧನ ಪೂರೈಕೆಯನ್ನು ಭಾರತವು ವೈವಿಧ್ಯಗೊಳಿಸುತ್ತಿದೆ ಎಂದು ಸರ್ಕಾರ ಹೇಳಿಕೊಂಡಿದ್ದ ಕಾರ್ಯತಂತ್ರ ಏನಾಯಿತು ಎಂದು ಪ್ರಶ್ನಿಸಿದ್ದಾರೆ. ಪ್ರಧಾನಿ ಮೋದಿ ಅವರು ಭಾರತವು 41 ದೇಶಗಳಿಂದ ಇಂಧನ ಪೂರೈಕೆಯನ್ನು ಪಡೆಯುತ್ತಿದೆ ಎಂದು ದೊಡ್ಡ ಮಟ್ಟದ ಹಕ್ಕುಗಳನ್ನು ಮಂಡಿಸಿದ್ದರು. ಆ ಕಾರ್ಯತಂತ್ರಕ್ಕೆ ಏನಾಯಿತು? ಗ್ರಾಮೀಣ ಪ್ರದೇಶಗಳಲ್ಲಿ ಇಂದಿಗೂ ಎಲ್‌ಪಿಜಿ ಕೊರತೆ ಏಕೆ ಇದೆ ಎಂದು ಅವರು ಕೇಳಿದ್ದಾರೆ.

### ಉಜ್ವಲಾ ಯೋಜನೆ ಅಂಕಿಅಂಶ ತೆರೆದಿಟ್ಟ ಖರ್ಗೆ

**ಪ್ರಧಾನ್ ಮಂತ್ರಿ ಉಜ್ವಲ ಯೋಜನೆಯ ಅಂಕಿ–ಅಂಶಗಳನ್ನು ಉಲ್ಲೇಖಿಸಿದ ಖರ್ಗೆ, ಹೆಚ್ಚಿನ ವೆಚ್ಚದ ಕಾರಣದಿಂದಾಗಿ ಯೋಜನೆಯ ಫಲಾನುಭವಿ ಕುಟುಂಬಗಳು ತಮ್ಮ ಎಲ್‌ಪಿಜಿ ಸಿಲಿಂಡರ್‌ಗಳನ್ನು ನಿಯಮಿತವಾಗಿ ಮರುಪೂರಣ (ರೀಫಿಲ್) ಮಾಡಲು ಸಾಧ್ಯವಾಗುತ್ತಿಲ್ಲ ಎಂದು ವಾದಿಸಿದ್ದಾರೆ. ಅವರ ಪ್ರಕಾರ, 2025–26ರ ಅವಧಿಯಲ್ಲಿ ಈ ಯೋಜನೆಯಡಿ 5.56 ಕೋಟಿ ಕುಟುಂಬಗಳು ಕೇವಲ ಒಂದು ಬಾರಿ ಮಾತ್ರ ರೀಫಿಲ್ ಮಾಡಿಸಿಕೊಂಡಿವೆ ಅಥವಾ ಸಿಲಿಂಡರ್ ಅನ್ನು ರೀಫಿಲ್ ಮಾಡಿಸಿಯೇ ಇಲ್ಲ. ಇನ್ನು 3.30 ಕೋಟಿ ಕುಟುಂಬಗಳು ಒಂದೇ ಒಂದು ರೀಫಿಲ್ ಅನ್ನು ಸಹ ಖರೀದಿಸಿಲ್ಲ. ಇದು ಪಶ್ಚಿಮ ಏಷ್ಯಾದ ಬಿಕ್ಕಟ್ಟಿಗಿಂತ ಮುಂಚಿನ ಪರಿಸ್ಥಿತಿ. ಇದು ಎಲ್‌ಪಿಜಿಯನ್ನು ಅನೇಕರಿಗೆ ಕೈಗೆಟುಕದಂತೆ ಮಾಡಿದ ಮೋದಿ ಸರ್ಕಾರದ ನೀತಿಗಳ ಫಲಿತಾಂಶವಲ್ಲವೇ ಎಂದು ಹೇಳಿದ್ದಾರೆ.**

### ಬಿಜೆಪಿ ನಾಯಕರು ಪ್ರತಿಭಟಿಸುತ್ತಿಲ್ಲ ಏಕೆ?

ಹಣದುಬ್ಬರದ ವಿಷಯದಲ್ಲಿ ಭಾರತೀಯ ಜನತಾ ಪಕ್ಷವು ಇಬ್ಬಂದಿ ನೀತಿ ಅನುಸರಿಸುತ್ತಿದೆ. ಹಿಂದಿನ ಸರ್ಕಾರಗಳ ಅವಧಿಯಲ್ಲಿ ಬೆಲೆ ಏರಿಕೆ ವಿರುದ್ಧ ಬಿಜೆಪಿ ನಾಯಕರು ಪದೇಪದೇ ಪ್ರತಿಭಟನೆ ನಡೆಸುತ್ತಿದ್ದರು, ಆದರೆ ಕಳೆದ ಒಂದು ದಶಕದಲ್ಲಿ ಎಲ್‌ಪಿಜಿ ಬೆಲೆಯಲ್ಲಿ ಗಣನೀಯ ಹೆಚ್ಚಳವಾಗಿದ್ದರೂ ಈಗ ಮೌನವಾಗಿದ್ದಾರೆ. ಕಳೆದ 12 ವರ್ಷಗಳಲ್ಲಿ ಮೋದಿ ಸರ್ಕಾರವು ದೇಶೀಯ ಎಲ್‌ಪಿಜಿ ಬೆಲೆಯನ್ನು 530 ರೂ.ಗಳಷ್ಟು ಹೆಚ್ಚಿಸಿರುವುದು ನಿಜವಲ್ಲವೇ? ಬಿಜೆಪಿ ನಾಯಕರು ಈಗ ಏಕೆ ಎಲ್‌ಪಿಜಿ ಸಿಲಿಂಡರ್‌ಗಳೊಂದಿಗೆ ಬೀದಿಯಲ್ಲಿ ಕುಳಿತು ಪ್ರತಿಭಟನೆ ನಡೆಸುತ್ತಿಲ್ಲ ಎಂದು ಮಲ್ಲಿಕಾರ್ಜುನ ಖರ್ಗೆ ಪ್ರಶ್ನಿಸಿದ್ದಾರೆ.

# 6 ಐಎಎಸ್, ಇಬ್ಬರು ಹಿರಿಯ ಐಪಿಎಸ್ ಅಧಿಕಾರಿಗಳ ವರ್ಗಾವಣೆ

**ಬೆಂಗಳೂರು, ಜೂ.7:** ಆಡಳಿತ ಯಂತ್ರಕ್ಕೆ ಚುರುಕು ಮುಟ್ಟಿಸುವ ಸಲುವಾಗಿ ಸರ್ಕಾರ ಮೇಜರ್ ಸರ್ಜರಿ ಮಾಡಿದ್ದು, ಆರು ಐಎಎಸ್ ಹಾಗೂ ಇಬ್ಬರು ಐಪಿಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಆದೇಶಿಸಿದೆ.


**ಐಎಎಸ್ ವರ್ಗಾವಣೆ:** ಅಂಜುಮ್ ಪರ್ವೇಜ್ ಅವರನ್ನು ಬೆಂಗಳೂರಿನ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ. ಮುನೀಶ್ ಮೌದ್ಗಿಲ್, ಬೃಹತ್ ಬೆಂಗಳೂರು ಪ್ರಾಧಿಕಾರದ ವಿಶೇಷ ಕಮಿಷನರ್ (ಆಡಳಿತ, ಕಂದಾಯ ಮತ್ತು ಐಟಿ) ಆಗಿರುವ ಇವರಿಗೆ ನೂತನವಾಗಿ ಸೃಷ್ಟಿಸಲಾದ 'ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ (ಕಾರ್ಯಕ್ರಮ ಮತ್ತು ಯೋಜನೆ ಅನುಷ್ಠಾನ)' ಹುದ್ದೆಯ ಹೆಚ್ಚುವರಿ ಪ್ರಭಾರ ಜವಾಬ್ದಾರಿಯನ್ನು ನೀಡಲಾಗಿದೆ. ದೀಪಾ ಚೋಳನ್ ಅವರನ್ನು ಸಾರಿಗೆ ಇಲಾಖೆಯ ಕಾರ್ಯದರ್ಶಿಯಾಗಿ ವರ್ಗಾಯಿಸಲಾಗಿದೆ. ಕಾವೇರಿ ಬಿ.ಬಿ ಅವರನ್ನು ನಗರಾಭಿವೃದ್ಧಿ ಇಲಾಖೆಯ (ನಗರಾಭಿವೃದ್ಧಿ ಮತ್ತು ಪುರಸಭೆಗಳು) ನೂತನ ಕಾರ್ಯದರ್ಶಿಯಾಗಿ ನೇಮಕ ಮಾಡಲಾಗಿದೆ. ಡಾ. ವೆಂಕಟೇಶ್ ಎಂ.ವಿ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಕಾರ್ಯದರ್ಶಿಯಾಗಿದ್ದ ಇವರನ್ನು ಸಹಕಾರ ಸಂಘಗಳ ನಿಬಂಧಕರಾಗಿ) ವರ್ಗಾಯಿಸಲಾಗಿದೆ.

ಡಾ. ಸೆಲ್ವಮಣಿ ಆರ್. ಅವರನ್ನು ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತರಾಗಿ ನೇಮಕ ಮಾಡಲಾಗಿದೆ. ಇವರು ಯೋಗೀಶ್ ಎಂ.ಎಲ್. ಅವರ ಸ್ಥಾನಕ್ಕೆ ನಿಯೋಜನೆಗೊಂಡಿದ್ದಾರೆ.

ಸರ್ಕಾರದ ಹೊಸ ಆದೇಶದ ಪ್ರಕಾರ, ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ (ಕಾರ್ಯಕ್ರಮ ಮತ್ತು ಯೋಜನೆ ಅನುಷ್ಠಾನ) ಹುದ್ದೆಯನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿ ಕೇಡರ್ ಹುದ್ದೆಗೆ ಸಮಾನ ಸ್ಥಾನಮಾನ ಎಂದು ಘೋಷಿಸಲಾಗಿದೆ. ಹಾಗೆಯೇ, ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತರ ಹುದ್ದೆಯನ್ನು ಪೌರಾಡಳಿತ ನಿರ್ದೇಶಕರ ಹುದ್ದೆಗೆ ಸಮಾನ ಜವಾಬ್ದಾರಿಯ ಕೇಡರ್ ಎಂದು ಘೋಷಿಸಲಾಗಿದೆ.

**ಐಪಿಎಸ್‌ಗಳ ವರ್ಗಾವಣೆ:** ಡಾ. ಪ್ರಣಬ್ ಮೊಹಂತಿ, ಅವರನ್ನು ಆಂತರಿಕ ಭದ್ರತಾ ವಿಭಾಗದ ಡಿಜಿಪಿ ಹುದ್ದೆಯಿಂದ ಅಪರಾಧ ತನಿಖಾ ಇಲಾಖೆ ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳ ವಿಭಾಗದ ಮುಖ್ಯಸ್ಥರನ್ನಾಗಿ ನೇಮಿಸಲಾಗಿದೆ. ಇದರ ಜೊತೆಗೆ ಇವರಿಗೆ ಸೈಬರ್ ಕ್ರೈಮ್ ವಿಭಾಗದ ಡಿಜಿಪಿ ಹುದ್ದೆಯ ಹೆಚ್ಚುವರಿ ಜವಾಬ್ದಾರಿಯನ್ನೂ ವಹಿಸಲಾಗಿದೆ. ಡಾ. ಚಂದ್ರಗುಪ್ತ, ಐಪಿಎಸ್ ಅವರನ್ನು ಭದ್ರತಾ ವಿಭಾಗದ (ಗುಪ್ತಚರ) ಐಜಿಪಿ ಹುದ್ದೆಯಿಂದ ಇನ್‌ಸ್ಪೆಕ್ಟರ್ ಜನರಲ್ ಆಫ್ ಪೊಲೀಸ್ ಗುಪ್ತಚರ ವಿಭಾಗ, ಬೆಂಗಳೂರು ಹುದ್ದೆಗೆ ವರ್ಗಾವಣೆ ಮಾಡಲಾಗಿದೆ. ಲಭೂ ರಾಮ್, ಅವರ ವರ್ಗಾವಣೆಯಿಂದ ತೆರವಾದ ಸ್ಥಾನಕ್ಕೆ ಇವರನ್ನು ನೇಮಕ ಮಾಡಲಾಗಿದೆ. ಈ ಆದೇಶವು ತಕ್ಷಣದಿಂದಲೇ ಜಾರಿಗೆ ಬರಲಿದೆ.

# ದೆಹಲಿಯಲ್ಲಿ 40 ಡಿ.ಸೆ.ತಲುಪಿದ ತಾಪಮಾನ



**ನವದೆಹಲಿ, ಜೂ.6:** ಬಿಸಿಲಿನ ಝಳದಿಂದ ಸ್ವಲ್ಪ ವಿಶ್ರಾಂತಿ ಪಡೆದ ನಂತರ, ದೆಹಲಿಯಲ್ಲಿ ತಾಪಮಾನ ಮತ್ತೆ ಏರಿಕೆಯಾಗಿ ಶನಿವಾರ 40°C ತಲುಪಿದ್ದು, ಮತ್ತಷ್ಟು ಏರಿಕೆಯಾಗುವ ನಿರೀಕ್ಷೆಯಿದೆ ಎಂದು ಭಾರತ ಹವಾಮಾನ ಇಲಾಖೆ ತಿಳಿಸಿದೆ.

ರಾಷ್ಟ್ರ ರಾಜಧಾನಿಯಲ್ಲಿ ಮುಂದಿನ ಮೂರು ದಿನಗಳಲ್ಲಿ ಗರಿಷ್ಠ ತಾಪಮಾನ ಕ್ರಮೇಣ ಏರಿಕೆಯಾಗಿ 42°C ಗರಿಷ್ಠ ಮಟ್ಟವನ್ನು ತಲುಪುವ ನಿರೀಕ್ಷೆಯಿದೆ ಎಂದು ಐಎಂಡಿ ಅಧಿಕಾರಿಗಳು ತಿಳಿಸಿದ್ದಾರೆ. ಮುಂದಿನ 3–4 ದಿನಗಳಲ್ಲಿ ನಗರದ ಕನಿಷ್ಠ ತಾಪಮಾನವು 3–5°C ರಷ್ಟು ಹೆಚ್ಚಾಗುವ ಸಾಧ್ಯತೆ ಇದ್ದು, ಬುಧವಾರದಿಂದ ಮತ್ತೆ 30°C ದಾಟುವ ಸಾಧ್ಯತೆ ಇದೆ. ದೆಹಲಿಯ ಮೂಲ ಹವಾಮಾನ ಕೇಂದ್ರವಾದ ಸಫ್ದರ್ ಜಂಗ್‌ನಲ್ಲಿ ಗರಿಷ್ಠ ತಾಪಮಾನ 40°C ದಾಖಲಾಗಿದ್ದು, ಕಳೆದ 24 ಗಂಟೆಗಳಲ್ಲಿ 4.2°C ಹೆಚ್ಚಾಗಿದೆ. ನಗರದ ಕನಿಷ್ಠ ತಾಪಮಾನವು 26.4°C ರಷ್ಟು ಇಳಿದಿದ್ದು, ಇದು ಸಾಮಾನ್ಯಕ್ಕಿಂತ 1.2°C ಕಡಿಮೆಯಾಗಿದೆ. ಹವಾಮಾನ ಇಲಾಖೆ ಭಾನುವಾರ ಭಾಗಶಃ ಆಕಾಶದಲ್ಲಿ ಮಳೆಯಾಗುವ ಮುನ್ಸೂಚನೆ ನೀಡಿಲ್ಲ.

# ಸಿಬಿಎಸ್‌ಇ 9 - 10 ನೇ ತರಗತಿಗೆ ತೃತೀಯ ಭಾಷೆ ಸೇರ್ಪಡೆ ರದ್ದು ಮಾಡಿ: ಪ್ರಧಾನಿಗೆ ಪತ್ರ

**ಸಂಸದೀಯ ಸ್ಥಾಯಿ ಸಮಿತಿ ಅಧ್ಯಕ್ಷ ದಿಗ್ವಿಜಯ ಸಿಂಗ್ ಬರೆದಿರುವ ಪತ್ರ ಹಂಚಿಕೊಂಡ ಜೈರಾಮ್ ರಮೇಶ್**

**ಸಿಬಿಎಸ್‌ಇ ಆಡಳಿತ ಮಂಡಳಿ ನಿರ್ಧಾರಕ್ಕೆ ವಿರುದ್ಧವಾಗಿ ಜಾರಿ ಎಂದು ಆರೋಪ**


**ನವದೆಹಲಿ, ಜೂ.7:** 9 ಮತ್ತು 10 ನೇ ತರಗತಿಗಳಿಗೆ ಕೇಂದ್ರ ಮಾಧ್ಯಮಿಕ ಶಿಕ್ಷಣ ಮಂಡಳಿಯ (ಸಿಬಿಎಸ್‌ಇ) ಪಠ್ಯಕ್ರಮದಲ್ಲಿ ತೃತೀಯ ಭಾಷೆಯ ಅನಿಯಂತ್ರಿತ ಮತ್ತು ಯೋಜಿತವಲ್ಲದ" ಪರಿಚಯ ಎಂದು ಹಿರಿಯ ಕಾಂಗ್ರೆಸ್ ನಾಯಕ ಮತ್ತು ಶಿಕ್ಷಣ, ಕೌಶಲ್ಯ ಅಭಿವೃದ್ಧಿ, ಮಹಿಳೆಯರು, ಮಕ್ಕಳು, ಯುವಜನರು ಮತ್ತು ಕ್ರೀಡೆಗಳ ಸಂಸದೀಯ ಸ್ಥಾಯಿ ಸಮಿತಿ ಅಧ್ಯಕ್ಷ ದಿಗ್ವಿಜಯ ಸಿಂಗ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದಾರೆ.

ಈ ಬೆಳವಣಿಗೆಯನ್ನು ಕಾಂಗ್ರೆಸ್ ಸಂವಹನ ಉಸ್ತುವಾರಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ಭಾನುವಾರ ಸಾಮಾಜಿಕ ಮಾಧ್ಯಮ ವೇದಿಕೆ ಎಕ್ಸ್‌ನಲ್ಲಿ ಮಾಹಿತಿ ಬಹಿರಂಗಪಡಿಸಿದ್ದಾರೆ.

ಸ್ಥಾಪಿತ ಶೈಕ್ಷಣಿಕ ಯೋಜನಾ ಮಾನದಂಡಗಳನ್ನು ಉಲ್ಲಂಘಿಸಿ ಮತ್ತು ಸಿಬಿಎಸ್‌ಇ ಆಡಳಿತ ಮಂಡಳಿಯು ಈಗಾಗಲೇ ತೆಗೆದುಕೊಂಡ ನಿರ್ಧಾರಗಳಿಗೆ ವಿರುದ್ಧವಾಗಿ ಇದನ್ನು ಜಾರಿಗೆ ತರಲಾಗಿದೆ ಎಂದು ಆರೋಪಿಸಿ ಸಿಂಗ್ ಪ್ರಧಾನಿಯನ್ನು ಮಧ್ಯಪ್ರವೇಶಿಸುವಂತೆ ಒತ್ತಾಯಿಸಿದ್ದಾರೆ ಎಂದು ರಮೇಶ್ ಹೇಳಿದರು.

"ಶಿಕ್ಷಣದ ಸಂಸದೀಯ ಸ್ಥಾಯಿ ಸಮಿತಿಯ ಅಧ್ಯಕ್ಷ ಮತ್ತು ಹಿರಿಯ ಕಾಂಗ್ರೆಸ್ ನಾಯಕ ದಿಗ್ವಿಜಯ ಸಿಂಗ್ ಅವರು 9 ಮತ್ತು 10 ನೇ ತರಗತಿಯ ಸಿಬಿಎಸ್‌ಇ ಪಠ್ಯಕ್ರಮಕ್ಕೆ ಅನಿಯಂತ್ರಿತ, ಯೋಜಿತವಲ್ಲದ ಮೂರನೇ ಭಾಷೆಯನ್ನು ಸೇರಿಸುವುದನ್ನು ನಿಲ್ಲಿಸುವಂತೆ ಪ್ರಧಾನಿಗೆ ಪತ್ರ ಬರೆದಿದ್ದಾರೆ – ಇದು ಸಿಬಿಎಸ್‌ಇ ಆಡಳಿತ ಮಂಡಳಿಯ ಸ್ವಂತ ನಿರ್ಧಾರ ಮತ್ತು ಶೈಕ್ಷಣಿಕ ಯೋಜನೆಯ ಎಲ್ಲಾ ಮಾನದಂಡಗಳಿಗೆ ನೇರ ವಿರುದ್ಧವಾಗಿದೆ" ಎಂದು ರಮೇಶ್ ತಮ್ಮ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ದೇಶಾದ್ಯಂತ ಲಕ್ಷಾಂತರ ವಿದ್ಯಾರ್ಥಿಗಳ ಮೇಲೆ ಪರಿಣಾಮ ಬೀರುವ ಪ್ರಮುಖ ಪಠ್ಯಕ್ರಮ ಬದಲಾವಣೆಗಳನ್ನು ವಿದ್ಯಾರ್ಥಿಗಳು, ಪೋಷಕರು, ಶಿಕ್ಷಕರು, ರಾಜ್ಯ ಸರ್ಕಾರಗಳು ಮತ್ತು ಶಿಕ್ಷಣ ತಜ್ಞರು ಸೇರಿದಂತೆ ಪಾಲುದಾರರೊಂದಿಗೆ ಸಾಕಷ್ಟು ಸಮಾಲೋಚನೆಯ ನಂತರವೇ ಪರಿಚಯಿಸಬೇಕು ಎಂದು ಕಾಂಗ್ರೆಸ್ ವಾದಿಸಿದೆ. ಪರೀಕ್ಷೆ ಮತ್ತು ಪಠ್ಯಕ್ರಮ ರಚನೆಗಳಲ್ಲಿನ ಹಠಾತ್ ಬದಲಾವಣೆಗಳು ವಿದ್ಯಾರ್ಥಿಗಳಲ್ಲಿ ಗೊಂದಲವನ್ನು ಉಂಟುಮಾಡಬಹುದು ಮತ್ತು ಈಗಾಗಲೇ ಮಂಡಳಿಯ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಿರುವ ಶಾಲೆಗಳ ಮೇಲೆ ಹೆಚ್ಚುವರಿ ಶೈಕ್ಷಣಿಕ ಹೊರೆ ಹೇರಬಹುದು ಎಂದು ಪಕ್ಷದ ನಾಯಕರು ಸಮರ್ಥಿಸಿಕೊಂಡಿದ್ದಾರೆ.



ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) 2020 ರಲ್ಲಿ ಒಳಗೊಂಡಿರುವ ಭಾಷಾ ನಿಬಂಧನೆಗಳ ಅನುಷ್ಠಾನದ ಕುರಿತು ರಾಜಕೀಯ ಚರ್ಚೆಗಳು ನಡೆಯುತ್ತಿರುವ ನಡುವೆ ಈ ವಿಷಯವು ಬಂದಿದೆ. ನೀತಿಯು ಬಹುಭಾಷಾ ಕಲಿಕೆಯನ್ನು ಪ್ರತಿಪಾದಿಸುತ್ತದೆ ಮತ್ತು ಮೂರು ಭಾಷೆಗಳ ಅಧ್ಯಯನವನ್ನು ಪ್ರೋತ್ಸಾಹಿಸುತ್ತದೆಯಾದರೂ, ಹಲವಾರು ವಿರೋಧ ಪಕ್ಷಗಳು ಮತ್ತು ರಾಜ್ಯ ಸರ್ಕಾರಗಳು ಭಾಷಾ ನೀತಿಗಳನ್ನು ಹೇಗೆ ಕಾರ್ಯಗತಗೊಳಿಸಲಾಗುತ್ತಿದೆ ಎಂಬುದರ ಬಗ್ಗೆ ಕಳವಳ ವ್ಯಕ್ತಪಡಿಸಿವೆ, ವಿಶೇಷವಾಗಿ ವ್ಯಾಪಕ ಸಮಾಲೋಚನೆಯಿಲ್ಲದೆ ಬದಲಾವಣೆಗಳನ್ನು ಪರಿಚಯಿಸಿದಾಗ.

ಭಾರತ ಮತ್ತು ವಿದೇಶಗಳಲ್ಲಿನ 30,000 ಕ್ಕೂ ಹೆಚ್ಚು ಶಾಲೆಗಳೊಂದಿಗೆ ಸಂಯೋಜಿತವಾಗಿರುವ CBSE, ರಾಷ್ಟ್ರೀಯ ಶಿಕ್ಷಣ ಆದ್ಯತೆಗಳು ಮತ್ತು ನೀತಿ ಉದ್ದೇಶಗಳಿಗೆ ಅನುಗುಣವಾಗಿ ನಿಯತಕಾಲಿಕವಾಗಿ ತನ್ನ ಪಠ್ಯಕ್ರಮವನ್ನು ಪರಿಷ್ಕರಿಸುತ್ತದೆ. ಆದಾಗ್ಯೂ, ವಿರೋಧ ಪಕ್ಷದ ನಾಯಕರು ಪದೇ ಪದೇ ಪಠ್ಯಕ್ರಮ ಸುಧಾರಣೆಗಳಲ್ಲಿ ಹೆಚ್ಚಿನ ಪಾರದರ್ಶಕತೆ ಮತ್ತು ಮುಂಗಡ ಯೋಜನೆಗಾಗಿ ಕರೆ ನೀಡಿದ್ದಾರೆ, ವಿಶೇಷವಾಗಿ ಮಾಧ್ಯಮಿಕ ಮತ್ತು ಹಿರಿಯ ಮಾಧ್ಯಮಿಕ ವಿದ್ಯಾರ್ಥಿಗಳ ಮೇಲೆ ಪರಿಣಾಮ ಬೀರುವಂತಹವುಗಳು.

ಸಂಸದೀಯ ಸ್ಥಾಯಿ ಸಮಿತಿ ಅಧ್ಯಕ್ಷರ ಇತ್ತೀಚಿನ ಹಸ್ತಕ್ಷೇಪವು ಭಾಷಾ ಶಿಕ್ಷಣ ಮತ್ತು NEP ಚೌಕಟ್ಟಿನ ಅಡಿಯಲ್ಲಿ ಸುಧಾರಣೆಗಳ ಅನುಷ್ಠಾನದ ಕುರಿತು ನಡೆಯುತ್ತಿರುವ ಚರ್ಚೆಯನ್ನು ತೀವ್ರಗೊಳಿಸುವ ನಿರೀಕ್ಷೆಯಿದೆ.

## ನಿತ್ಯ ಪಂಚಾಂಗ 8.06.2026 ಸೋಮವಾರ



ಶ್ರೀಶಕ 1949 ಶ್ರೀ ಪರಾಭವ ನಾಮ ಸಂವತ್ಸರ, ಉತ್ತರಾಯಣ–ವಸಂತ/ಗ್ರೀಷ್ಮ ಋತು, ಚಾಂದ್ರಮಾನ, ವೈಶಾಖ ಅಧಿಕ ಜ್ಯೇಷ್ಠ ಮಾಸ ಅಧಿಕ ಜ್ಯೇಷ್ಠ ಬಹುಳ, ಅಷ್ಟಮಿ, ಪೂರ್ವಾಭಾದ್ರ ನಕ್ಷತ್ರ, ವಿಶ್ವ ಸಾಗರ ದಿನಾಚರಣೆ

| ದಿನ | ರಾಹುಕಾಲ | ಯಮಗಂಡ | ಗುಳಿಕಕಾಲ |
|---|---|---|---|
| ವಾರ | ರಾಹುಕಾಲ | ಯಮಗಂಡ | ಗುಳಿಕಕಾಲ |
| ಭಾನು | ಸ.5.04–6.33 | 12.00–1.30 | 3.00–4.00 |
| ಸೋಮ | ಬೆ.7.20–9.04 | 10.30–12.00 | 1.30–12.00 |
| ಮಂಗಳ | ಮ.3.25–4.59 | 9.00–10.30 | 12.00–1.30 |
| ಬುಧ | ಮ.12.16–1.50 | 7.30–9.00 | 10.30–12.00 |
| ಗುರು | ಮ.1.50–3.29 | 6.00–7.30 | 9.00–10.30 |
| ಶುಕ್ರ | ಬೆ.10.42–12.16 | 3.00–4.30 | 7.30–9.00 |
| ಶನಿ | ಬೆ.9.07–10.41 | 1.30–3.00 | 6.00–7.30 |

## ಪ್ರಕಟಣೆ

ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಪಿಎಚ್‌ಡಿ ಪ್ರವೇಶ ಪರೀಕ್ಷೆ ಫಲಿತಾಂಶ ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2026–27ನೇ ಸಾಲಿನ ಪಿಎಚ್‌ಡಿ ಪ್ರವೇಶ ಪರೀಕ್ಷೆಯ ಫಲಿತಾಂಶ ಜೂ. 10ರಂದು ಪ್ರಕಟವಾಗಲಿದೆ. ಪರಿಷ್ಕೃತ ವೇಳಾಪಟ್ಟಿಯ ಪ್ರಕಾರ ಜೂ. 17 ರಿಂದ 19ರವರೆಗೆ ಅಭ್ಯರ್ಥಿಗಳ ಸಂದರ್ಶನ ನಡೆಯಲಿದೆ. ಜೂ. 23 ರಂದು ಅರ್ಹತಾ ಪಟ್ಟಿ ಪ್ರಕಟಗೊಳ್ಳುತ್ತದೆ ಎಂದು ವಿಶ್ವವಿದ್ಯಾನಿಲಯದ ಕುಲಸಚಿವರು (ಮೌಲ್ಯಮಾಪನ) ಪ್ರೊ. ರಮೇಶ. ಬಿ.ಕುಡೇನಟ್ಟಿ ಅಧಿಕೃತ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿಶ್ವಕರ್ಮರಿಂದ ಮಾತ್ರ ದೇಶ ಕಟ್ಟಲು ಸಾಧ್ಯ: ಬಸವರಾಜ ಬೊಮ್ಮಾಯಿ

## ವಿಶ್ವಕರ್ಮರಿಗೆ ಗೌರವ, ಮನ್ನಣೆ ಸಿಗುವ ಕಾಲ ಬಂದಿದೆ: ಸಂಸದ ಬೊಮ್ಮಾಯಿ



ಹಾವೇರಿ(ಶಿಗ್ಗಾವಿ) ವಿಶ್ವಕರ್ಮರಿಂದ ಮಾತ್ರ ಈ ದೇಶವನ್ನು ಮೂಲಭೂತವಾಗಿ ಕಟ್ಟಲು ಸಾಧ್ಯ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿಗೆ ಗೊತ್ತಿದೆ. ಹೀಗಾಗಿ ಮತ್ತೆ ನಿಮಗೆ ಗೌರವ, ಮನ್ನಣೆ ಸಿಗುವ ಕಾಲ ಬಂದಿದೆ. ಅದಕ್ಕೆ ಪೂರಕವಾಗಿ ವಿದ್ಯೆಯಲ್ಲಿ, ಕಂಪ್ಯೂಟರ್ ಎಐದಲ್ಲಿ ಮೂಲಭೂತ ಜ್ಞಾನ ಬೆಳೆಸಿಕೊಂಡರೆ ಇವತ್ತಿನ ಸಮಾಜದಲ್ಲಿ ದೇಶ ಕಟ್ಟಲು ಆಧಾರ ಆಗುತ್ತದೆ. ನಿಮ್ಮ ಕುಲಕಸುಬಿಗೆ ಇಡೀ ವಿಶ್ವದಲ್ಲಿ ಮನ್ನಣೆ ಸಿಗುತ್ತದೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಹಾವೇರಿ ಜಿಲ್ಲೆಯ ಶಿಗ್ಗಾವಿಯಲ್ಲಿ ಹಾವೇರಿ ಜಿಲ್ಲಾ ವಿಶ್ವಕರ್ಮ ನೌಕರರ ಕ್ಷೇಮಾಭಿವೃದ್ಧಿ ಸಂಘದ ತೃತೀಯ ವಾರ್ಷಿಕೋತ್ಸವ 2026 ನೇ ಸಾಲಿನ ಎಸ್.ಎಸ್.ಎಲ್.ಸಿ ಹಾಗೂ ಪಿ.ಯು.ಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ನಿವೃತ್ತ / ಬಡ್ತಿ ನೌಕರರಿಗೆ ವಿಶ್ವಕರ್ಮ ನೌಕರಶ್ರೀ ಸನ್ಮಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ವಿಶ್ವ ಕರ್ಮ ಪರಮಾತ್ಮನ ಒಂದು ವಿಶೇಷವಾಗಿರುವ ಸ್ವರೂಪ, ಜ್ಞಾನ, ಪರಿಶ್ರಮ ಕೌಶಲ್ಯ, ಹಾಗೂ ಏಕಾಗ್ರತೆ ಈ ಎಲ್ಲ ಗುಣಗಳ ಸಮ್ಮಿಳತವಾಗಿದೆ. ವಿಶ್ವ ಕರ್ಮನ ಅವತಾರ ಮಾನವನ ಕಲ್ಯಾಣಕ್ಕೆ ಯಾವ ರೀತಿ ಮಾನವ ಬೇಟೆಯಾಡಿ ಬದುಕು ಪ್ರಾರಂಭ ಮಾಡಿದ, ಬೆಂಕಿ ಕಂಡು ಆಹಾರ ಪದ್ಧತಿ ಕಲಿತ, ತದ ನಂತರ ಮನೆ ನಿರ್ಮಾಣ, ಊರು ನಿರ್ಮಾಣ ಎಲ್ಲದರಲ್ಲೂ ವಿಶ್ವಕರ್ಮನ ಅಂಶಗಳು ಬಹಳ ಸ್ಪಷ್ಟವಾಗಿ ಕಂಡು ಬರುತ್ತವೆ. ಪ್ರಾಚೀನ ಮಾನವನ ವಿಕಾಸದಲ್ಲಿ ವಿಶ್ವಕರ್ಮನ ಪಾತ್ರ ಬಹಳ ಮುಖ್ಯ ಇದೆ. ಈಗಿನ ಎಂಜನೀಯರ್‌ಗಳ ಮೂಲ ಸೃಷ್ಟಿಕರ್ತ ವಿಶ್ವಕರ್ಮ. ಸರಳವಾಗಿರುವ ರೇಖೆಗಳನ್ನು ಇಟ್ಟುಕೊಂಡು ಮಾನವನಿಗೆ ಬೇಕಾದ ಎಲ್ಲ ಆಕಾರಗಳನ್ನು ನಿರ್ಮಾಣ ಮಾಡುವುದು ವಿಶ್ವ ಕರ್ಮ. ನಮ್ಮ ಭಾರತದ ಪರಂಪರೆ ದೇವಸ್ಥಾನಗಳನ್ನು ನಿರ್ಮಾಣ ಮಾಡಿರುವ ಜ್ಞಾನಿಗಳು ವಿಶ್ವಕರ್ಮರು ಎಂದು ಹೇಳಿದರು.

ಎರಡು ಸಾವಿರ ಮೂರು ಸಾವಿರ ವರ್ಷಗಳ ಹಿಂದೆ ಕಾಡಿನಲ್ಲಿ, ನಾಡಿನಲ್ಲಿ, ಸಮುದದಲ್ಲಿ ಕಟ್ಟಡಗಳನ್ನು ನಿರ್ಮಾಣ ಮಾಡಿದ್ದಾರೆ. ಆಗಿನ ಕಾಲದಲ್ಲಿ ಸವಲತ್ತುಗಳಿರಲಿಲ್ಲ ಆಗಲೇ ಸಾವಿರಾರು ದೇವಸ್ಥಾನಗಳನ್ನು ನಿರ್ಮಾಣ ಮಾಡಿದ್ದಾರೆ ಎಂದರೆ ಅಚ್ಚರಿಯಾಗುತ್ತದೆ. ವಿಜಯನಗರ ಸಾಮ್ರಾಜ್ಯ, ಹೊಯ್ಸಳ ಸಾಮ್ರಾಜ್ಯದಲ್ಲಿ ವಿಶ್ವಕರ್ಮರ ಆದ್ಭುತ ಕಲೆ ಕಂಡು ಬರುತ್ತದೆ. ವಿಶ್ವಕರ್ಮರು ಇಲ್ಲದಿದ್ದರೆ ಕರ್ನಾಟಕದ ಶಿಲ್ಪಕಲೆ ಸಾಹಿತ್ಯ ಲೋಕಕ್ಕೆ ಸಿಗುತ್ತಿರಲಿಲ್ಲ. ಕಂಪ್ಯೂಟರ್ ಯುಗದಲ್ಲಿ ಎಐ ಮೂಲ ವಿಶ್ವಕರ್ಮರ ಅಂದಿನ ಯೋಜನೆ ಏನಿತ್ತು ಅದೇ ಇಂದು ಬೆಳೆದು ಬಂದಿದೆ. ಜಗತ್ತಿನ ಒಬ್ಬ ಹೆಣ್ಣಗಳು ಒಂದು ಪುಸ್ತಕ ಬರೆಯುತ್ತಿದ್ದಾಳೆ. ಈ ಭೂಮಂಡಲವನ್ನು ಸಣ್ಣದಾಗಿ ಮಾಡಬೇಕು. ಇನ್ನೊಂದು ಪುಸ್ತಕ ಬರೆದಿದ್ದಾಳೆ ಮೌಂಟೇನ್ ಹೆಡ್ ಅಂತ ಮೆದುಳಿನಲ್ಲಿ ವಿಚಾರಗಳು ಹೇಗೆ ಬರುತ್ತವೆ. ಅದರ ಕಾರ್ಯಗಳೇನು ಎಂದು ಬರೆಯುತ್ತಾಳೆ ಅದನ್ನು ನೋಡಿದರೆ ನಮ್ಮ ವಿಶ್ವಕರ್ಮರ ಕಲೆಯ ಬಗ್ಗೆ ಇದೆ.

ಗುಡಿ ಕಟ್ಟಿದ ಮೇಲೆ ಕಳಸ ಇಡುವಾಗ ನೀವು ತಯಾರು ಮಾಡಿರುವ ನಕ್ಷೆ, ಕಲ್ಪನೆ ಎಲ್ಲವೂ ಸಾಕಾರಗೊಂಡಾಗ ಕಟ್ಟಡ ಕಟ್ಟಿದವರೂ ಇರುವುದಿಲ್ಲ. ಮಾಲೀಕರು ನಾನು ಕಟ್ಟಿಸಿದೆ ಎನ್ನುತ್ತಾರೆ. ಆದರೆ, ವಿಶಾಲವಾಗಿ ನೋಡಿದಾಗ ಈ ಭೂಮಿ ಯಾರದು, ನಾವು ಹೋದ ಮೇಲೆ ಭೂಮಿ, ದೇವಸ್ಥಾನ ಇರುತ್ತದೆ. ಹೀಗಾಗಿ ಅದನ್ನು ಕಟ್ಟಿದ ಶಿಲ್ಪಿ ಹಾಗೂ ಕಾರ್ಮಿಕ ಶಾಸ್ವತವಾಗಿರುತ್ತಾರೆ. ನಮ್ಮನ್ನು ನಾವು ನಾವು ಎಂದು ಸಣ್ಣವರಾಗುತ್ತಿದ್ದೇವೆ ಎಂದು ಹೇಳಿದರು.

### ಒಳ್ಳೆಯ ಕಾಲ ಬರುತ್ತದೆ

ವಿಶ್ವಕರ್ಮರು ಎಲ್ಲವನ್ನೂ ಮಾಡಿಯೂ ಮಾಡದಂತಿರುವ ಸಮಾಜ. ಇವತ್ತಿನ ನಮ್ಮ ದೇಶದಲ್ಲಿ ಮತ್ತೆ ನಿಮಗೆ ಒಳ್ಳೆಯ ಕಾಲ ಬರುತ್ತಿದೆ. ಮೊದಲು ನಾವು ಜನಸಂಖ್ಯೆ ಶಾಪ ಎನ್ನುತ್ತಿದ್ದೆವು. ಈಗ ಜನಸಂಖ್ಯೆ ವರವಾಗಿದೆ. ಕೌಶಲ್ಯ ಹಾಗೂ ನೈಪುಣ್ಯ ಇರುವ ಜನರಿಂದ ದೇಶ ಕಟ್ಟಲು ಸಾಧ್ಯ ಅದಕ್ಕೆ ಪ್ರಧಾನಿ ನರೇಂದ್ರ ಮೋದಿಯವರು ಕೌಶಲ್ಯಾಭಿವೃದ್ಧಿ ಇಲಾಖೆ ಆರಂಭಿಸಿದರು. ವಿಶ್ವಕರ್ಮ ಎನ್ನುವ ವಿಶೇಷ ಯೋಜನೆ ಜಾರಿಗೆ ತಂದಿದ್ದಾರೆ. ವಿಶ್ವಕರ್ಮರಿಂದ ಮಾತ್ರ ಈ ದೇಶವನ್ನು ಮೂಲಭೂತವಾಗಿ ಕಟ್ಟಲು ಸಾಧ್ಯ ಎಂದು ಪಧಾನಮಂತಿಗೆ ಗೊತ್ತಿದೆ.

ಈ ದೇಶದ ಸಾಮಾನ್ಯ ಜನತೆಗೂ ಗೊತ್ತಾಗಿದೆ. ಹೀಗಾಗಿ ಮತ್ತೆ ನಿಮಗೆ ಗೌರವ ಸಿಗುವ, ಮನ್ನಣೆ ಸಿಗುವ ಕಾಲ ಬಂದಿದೆ. ವಿದ್ಯೆಯಲ್ಲಿ, ಕಂಪ್ಯೂಟರ್, ಎಐದಲ್ಲಿ ಮೂಲಭೂತ ಜ್ಞಾನ ಬೆಳೆಸಿಕೊಂಡರೆ ಇವತ್ತಿನ ಸಮಾಜದಲ್ಲಿ ದೇಶ ಕಟ್ಟಲು ಆಧಾರ ಆಗುತ್ತದೆ. ನಿಮ್ಮ ಕುಲಕಸುಬಿಗೆ ಇಡೀ ವಿಶ್ವದಲ್ಲಿ ಮನ್ನಣೆ ಸಿಗುತ್ತದೆ. ಆ ಕೆಲಸ ಈ ಸಮಾಜದಿಂದ ಆಗಬೇಕು, ವಿಶ್ವಕರ್ಮ ಯೋಜನೆಯ ಸದುಪಯೋಗ ಆಗಬೇಕು ಎಂದು ಹೇಳಿದರು.

ಕಟ್ಟಡ ಕಟ್ಟಲು ಸಂಸದರ ಕ್ಷೇಮಾಭಿವೃದ್ಧಿ ನಿಧಿಯಿಂದ 50 ಲಕ್ಷ ರೂ. ಕೊಡುತ್ತೇನೆ. ನಿಮ್ಮ ಬೇಡಿಕೆ ಅತ್ಯಂತ ಸಮಂಜಸವಾಗಿದೆ. ಜಾಗವನ್ನೂ ಮಂಜೂರಾತಿ ಮಾಡಿಸಲು ಪ್ರಯತ್ನ ಮಾಡುತ್ತೇನೆ. ಕಟ್ಟಡಕ್ಕೆ ದೊಡ್ಡ ಪ್ರಮಾಣದ ಸಹಾಯ ಮಾಡುತ್ತೇನೆ ಎಂದು ಹೇಳಿದರು.

ಈ ಸಂಧರ್ಭದಲ್ಲಿ ಪರಮಪೂಜ್ಯ ಶ್ರೀ ಶ್ರೀ ಅಷ್ಟೋತ್ತರ ಶತಶ್ರೀ ಶಂಕರಾತ್ಮಾನಂದ ಸರಸ್ವತಿ ಮಹಾಸ್ವಾಮಿಗಳು, ವಿಶ್ವಕರ್ಮ ಸಂಸ್ಥಾನ ಸಾವಿತ್ರಿ ಪೀಠ ಕಾಶೀಮಠ, ವಡ್ಡನಹಾಳ, ಶ್ರೀ ಮೌನೇಶ್ವರ ಸ್ವಾಮಿಗಳು, ಮೌನೇಶ್ವರ ಮಠ, ಹುಲಗೂರ, ಶ್ರೀ ಮ.ನಿ.ಪ್ರ ಸಂಗನಬಸವ ಮಹಾಸ್ವಾಮಿಗಳು, ವಿರಕ್ತಮಠ, ಶಿಗ್ಗಾವಿ, ಮೌನೇಶ್ವರ ಆಚಾರ್ಯರು, ರಾಣೆಬೆನ್ನೂರ ಶ್ರೀಗಳು ಸಾನಿಧ್ಯ ವಹಿಸಿದ್ದರು. ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ, ವಾಸ್ತು ತಜ್ಞರಾದ ಆರ್.ವಿ.ಕಮ್ಮಾರ, ಹುಬ್ಬಳ್ಳಿ – ಧಾರವಾಡ ಮಹಾನಗರ ಪಾಲಿಕೆಯ ಮಾಜಿ ಮಹಾಪೌರ ರಾಮಣ್ಣ ಬಡಿಗೇರ, ಹಾವೇರಿ ಜಿಲ್ಲಾ ವಿಶ್ವಕರ್ಮ ನೌಕರರ ಸಂಘದ ಅಧ್ಯಕ ಈರಪ್ಪ ಎಸ್ ಪಂಚಾನನ, ಸಮಾಜದ ಮುಖಂಡ ಪ್ರೋ ಲಿಂಗರಾಜ ಕಮ್ಮಾರ, ವಿಠಲಾಚಾರ ಬಡಿಗೇರ, ಗಣೇಶಪ್ಪ ಕಮ್ಮಾರ, ಸುರೇಶ ಕಮ್ಮಾರ, ಡಾ. ಕೆ. ಪ್ರೇಮಕುಮಾರ, ರಾಜೇಂದ್ರ ರಿತ್ತಿ, ಚಿದಾನಂದ ಬಡಿಗೇರ, ಕಾಳಪ್ಪ ಬಡಿಗೇರ, ನಿಂಗಪ್ಪ ಕಮ್ಮಾರ, ಸುಭಾಶ್ಚಂದ್ರ ವಿಶ್ವಬ್ರಾಹ್ಮಣ ಸೇರಿದಂತೆ ಹಲವಾರು ಪ್ರಮುಖರು ಉಪಸ್ಥಿತರಿದ್ದರು

# ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಶಾಸಕ ನಾ.ರಾ.ಭರತ್‌ರೆಡ್ಡಿ ಭೇಟಿ



**ಬೆಂಗಳೂರು, ಜೂ.7:** ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ಅಧ್ಯಕ್ಷರಾಗಿ ನೇಮಕಗೊಂಡ ಬಿ.ಕೆ. ಹರಿಪ್ರಸಾದ್ ಅವರನ್ನು ಶಾಸಕ ನಾರಾ ಭರತ್ ರೆಡ್ಡಿ ಭೇಟಿಯಾಗಿ ಅಭಿನಂದಿಸಿದರು. ಬಳ್ಳಾರಿ ಜಿಲ್ಲೆಯ ಭವಿಷ್ಯದ ರಾಜಕೀಯ ಕಾರ್ಯತಂತ್ರಗಳ ಬಗ್ಗೆ ಅಧ್ಯಕ್ಷರೊಂದಿಗೆ ಚರ್ಚಿಸಿದರು.

ಈ ಸಂದರ್ಭದಲ್ಲಿ, ಹೊಸದಾಗಿ ನೇಮಕಗೊಂಡ ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಅವರಿಗೆ ಹೃದಯಪೂರ್ವಕ ಅಭಿನಂದನೆಗಳನ್ನು ಸಲ್ಲಿಸಲಾಯಿತು. ಅವರ ನಾಯಕತ್ವದಲ್ಲಿ ಕರ್ನಾಟಕ ಕಾಂಗ್ರೆಸ್ ಪಕ್ಷವು ಇನ್ನಷ್ಟು ಬಲಪಡುತ್ತದೆ ಮತ್ತು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ, ವಿಶೇಷವಾಗಿ ಬಳ್ಳಾರಿ ಜಿಲ್ಲೆಯಲ್ಲಿ ಅಭಿವೃದ್ಧಿ ಮತ್ತು ಜನಸೇವೆಯ ಹೊಸ ಅಧ್ಯಾಯ ಆರಂಭವಾಗುತ್ತದೆ ಎಂಬ ವಿಶ್ವಾಸವನ್ನು ವ್ಯಕ್ತಪಡಿಸಲಾಯಿತು.

ಭೇಟಿಯಲ್ಲಿ ಬಳ್ಳಾರಿ ಜಿಲ್ಲೆಯ ರಾಜಕೀಯ ಪರಿಸ್ಥಿತಿ, ಪಕ್ಷದ ಸಂಘಟನಾತ್ಮಕ ಬಲವರ್ಧನೆ, ಅಭಿವೃದ್ಧಿ ಯೋಜನೆಗಳು ಮತ್ತು ಭವಿಷ್ಯದ ಕಾರ್ಯಯೋಜನೆಗಳ ಬಗ್ಗೆ ವಿವರವಾದ ಚರ್ಚೆ ನಡೆಯಿತು. ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಇನ್ನಷ್ಟು ಸಬಲಗೊಳಿಸುವುದು ಮತ್ತು ಜನಪ್ರತಿನಿಧಿಗಳು ಮತ್ತು ಕಾರ್ಯಕರ್ತರ ನಡುವಿನ ಸಂಬಂಧವನ್ನು ಗಟ್ಟಿಗೊಳಿಸುವುದು ಈ ಚರ್ಚೆಯ ಮುಖ್ಯ ಅಂಶಗಳಾಗಿದ್ದವು. ಬಿ.ಕೆ.ಹರಿಪ್ರಸಾದ್ ಅವರ ಅನುಭವ ಮತ್ತು ನಾಯಕತ್ವವು ಪಕ್ಷಕ್ಕೆ ಮಾರ್ಗದರ್ಶನವಾಗುತ್ತದೆ ಎಂದು ಭಾವಿಸಿರುವುದಾಗಿ ಭರತ್ ರೆಡ್ಡಿ ತಿಳಿಸಿದ್ದಾರೆ.

# ಪತ್ರಿಕೆಗಳಿಗೆ ಅಂಚೆ ರಿಯಾಯಿತಿ ಮುಂದುವರಿಸಲು ಪ್ರಧಾನಿಗೆ ಕೆಯುಡಬ್ಲ್ಯೂಜೆ ಒತ್ತಾಯ

ಬೆಂಗಳೂರು, ಜೂ.7: ದೇಶದಾದ್ಯಂತ ಕಾರ್ಯನಿರ್ವಹಿಸುತ್ತಿರುವ ಸಣ್ಣ ಮತ್ತು ಮಧ್ಯಮ ಪ್ರಮಾಣದ ಪತ್ರಿಕೆಗಳು ಹಾಗೂ ನಿಯತಕಾಲಿಕೆಗಳಿಗೆ ನೀಡಲಾಗುತ್ತಿದ್ದ ಅಂಚೆ ರಿಯಾಯಿತಿಯನ್ನು ಮರುಸ್ಥಾಪಿಸಬೇಕು ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ (ಕೆಯುಡಬ್ಲ್ಯೂಜೆ) ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಿದೆ.

ಈ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿರುವ ಕೆಯುಡಬ್ಲ್ಯೂಜೆ ಅಧ್ಯಕ್ಷ ಶಿವಾನಂದ ತಗಡೂರು ಅವರು, ಪತ್ರಿಕೆಗಳು ಮತ್ತು ನಿಯತಕಾಲಿಕಗಳಿಗೆ ಸಮಸ್ಯೆಯಾಗಿರುವ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಕೂಡಲೇ ಬಗೆಹರಿಸಬೇಕೆಂದು ಮನವಿ ಮಾಡಿದ್ದಾರೆ.

ಅಂಚೆ ಇಲಾಖೆಯ PO ORDER–PO/01/2024 (ದಿನಾಂಕ 16 ಡಿಸೆಂಬರ್ 2024) ಆದೇಶದ ಪ್ರಕಾರ, ಅಂಚೆ ರಿಯಾಯಿತಿಗೆ ಅರ್ಹತೆ ಪಡೆಯಲು ಪತ್ರಿಕೆಗಳು ಪ್ರತಿದಿನ ಅಥವಾ ಕನಿಷ್ಠ ವಾರಕ್ಕೊಮ್ಮೆ ಪ್ರಕಟವಾಗಬೇಕು ಎಂಬ ಹೊಸ ಮಾನದಂಡ ಜಾರಿಗೆ ಬಂದಿದೆ. ಇದರ ಪರಿಣಾಮವಾಗಿ ಪಾಕ್ಷಿಕ ಹಾಗೂ ಮಾಸಿಕ ನೋಂದಾಯಿತ ನಿಯತಕಾಲಿಕೆಗಳು ರಿಯಾಯಿತಿ ಸೌಲಭ್ಯದಿಂದ ವಂಚಿತವಾಗಿವೆ ಎಂದು ಕೆಯುಡಬ್ಲ್ಯೂಜೆ ತಿಳಿಸಿದೆ.

ಈ ಕ್ರಮದಿಂದ ಸಣ್ಣ ಮತ್ತು ಮಧ್ಯಮ ಪ್ರಕಾಶಕರಿಗೆ ಭಾರೀ ಆರ್ಥಿಕ ಹೊರೆ ಉಂಟಾಗಿದೆ. ಹಿಂದೆ ಸುಮಾರು 50 ಪೈಸೆ ದರದಲ್ಲಿ ವಿತರಣೆ ಮಾಡುತ್ತಿದ್ದ ಪ್ರತಿಗಳಿಗೆ ಈಗ 4 ರಿಂದ 5ರವರೆಗೆ ಅಂಚೆ ಶುಲ್ಕ ಪಾವತಿಸಬೇಕಾಗಿದ್ದು, ವಿತರಣಾ ವೆಚ್ಚದಲ್ಲಿ ಹತ್ತು ಪಟ್ಟು ಹೆಚ್ಚಳವಾಗಿದೆ ಎಂದು ಪ್ರಕಾಶಕರು ಆತಂಕ ವ್ಯಕ್ತಪಡಿಸಿದ್ದಾರೆ.

ಗ್ರಾಮೀಣ ಸಮಸ್ಯೆಗಳು, ಸಾಮಾಜಿಕ ಜಾಗೃತಿ, ಶಿಕ್ಷಣ, ಸಾಹಿತ್ಯ ಮತ್ತು ಸಾಂಸ್ಕೃತಿಕ ವಿಚಾರಗಳನ್ನು ಜನರಿಗೆ ತಲುಪಿಸುವಲ್ಲಿ ಪಾಕ್ಷಿಕ ಹಾಗೂ ಮಾಸಿಕ ಪತ್ರಿಕೆಗಳು ಪ್ರಮುಖ ಪಾತ್ರ ವಹಿಸುತ್ತಿವೆ. ಗ್ರಾಮೀಣ ಜನತೆ ಮತ್ತು ಸರ್ಕಾರದ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸುತ್ತಿರುವ ಈ ಪ್ರಕಟಣೆಗಳು ಡಿಜಿಟಲ್ ಮಾಧ್ಯಮದ ಪ್ರವೇಶವಿಲ್ಲದ ಓದುಗರಿಗೆ ಪ್ರಮುಖ ಮಾಹಿತಿ ಮೂಲಗಳಾಗಿವೆ ಎಂದು ಪತ್ರದಲ್ಲಿ ತಿಳಿಸಲಾಗಿದೆ.

ಧಾರ್ಮಿಕ, ಸಾಂಸ್ಕೃತಿಕ ಮತ್ತು ವೈಚಾರಿಕ ನಿಯತಕಾಲಿಕೆಗಳು ಸಮಾಜದ ನೈತಿಕ ಹಾಗೂ ಸಾಂಸ್ಕೃತಿಕ ಮೌಲ್ಯಗಳ ಪ್ರಸಾರದಲ್ಲೂ ಮಹತ್ವದ ಕೊಡುಗೆ ನೀಡುತ್ತಿವೆ. ಹೀಗಾಗಿ ಪ್ರಕಟಣೆಯ ಅವಧಿಯನ್ನು ಆಧಾರವಾಗಿಟ್ಟುಕೊಂಡು ರಿಯಾಯಿತಿ ನಿರಾಕರಿಸುವ ಬದಲು, ಎಲ್ಲಾ ನೋಂದಾಯಿತ ನಿಯತಕಾಲಿಕೆಗಳಿಗೆ ಅಂಚೆ ರಿಯಾಯಿತಿ ಸೌಲಭ್ಯವನ್ನು ಮರುಸ್ಥಾಪಿಸಬೇಕು ಎಂದು ತಗಡೂರು ಅವರು ಮನವಿ ಮಾಡಿದ್ದಾರೆ.

ಈ ಕುರಿತು ಕೇಂದ್ರ ಸರ್ಕಾರ ಹಾಗೂ ಅಂಚೆ ಇಲಾಖೆ ಆದೇಶವನ್ನು ಮರುಪರಿಶೀಲಿಸಿ, ದೇಶದಾದ್ಯಂತದ ಸಾವಿರಾರು ಸಣ್ಣ ಮತ್ತು ಮಧ್ಯಮ ಪ್ರಕಾಶಕರ ಹಿತಾಸಕ್ತಿಯನ್ನು ಕಾಪಾಡುವಂತೆಯೂ ಕೆಯುಡಬ್ಲ್ಯೂಜೆ ಅಧ್ಯಕ್ಷ ಶಿವಾನಂದ ತಗಡೂರು ಮತ್ತು ಪ್ರಧಾನ ಕಾರ್ಯದರ್ಶಿ ಜಿ.ಸಿ.ಲೋಕೇಶ ಒತ್ತಾಯಿಸಿದ್ದಾರೆ.

# ಸಿಎಂ ಡಿ.ಕೆ. ಶಿವಕುಮಾರ್‌ಗೆ ಕರೆ ಮಾಡಿ ಶುಭಾಶಯ ಕೋರಿದ ಮಲೇಷ್ಯಾ ಪ್ರಧಾನಿ ಅನ್ವರ್



ಬೆಂಗಳೂರು, ಜೂ.7: ಮಲೇಷ್ಯಾ ಪ್ರಧಾನಿ ಅನ್ವರ್ ಇಬ್ರಾಹಿಂ ಅವರು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಕರೆಮಾಡಿ ಶುಭಾಶಯ ಸಲ್ಲಿಸಿದ್ದಾರೆ. ಎಕ್ಸ್ ಪೋಸ್ಟ್ ಮಾಡಿರುವ ಡಿ.ಕೆ.ಶಿವಕುಮಾರ್ "ಮುಖ್ಯಮಂತ್ರಿಯಾಗಿ ನನ್ನ ಹೊಸ ಜವಾಬ್ದಾರಿಗೆ ಶುಭಾಶಯಗಳನ್ನು ತಿಳಿಸಲು ಕರೆ ಮಾಡಿದ ಮಲೇಷ್ಯಾದ ಗೌರವಾನ್ವಿತ ಪ್ರಧಾನ ಮಂತ್ರಿಯೊಂದಿಗೆ ಮಾತನಾಡಲು ಸಂತೋಷವಾಯಿತು. ನಮ್ಮ ಚರ್ಚೆಯು ಕರ್ನಾಟಕ ಮತ್ತು ಮಲೇಷ್ಯಾ ನಡುವಿನ ಸಂಬಂಧಗಳನ್ನು ಬಲಪಡಿಸುವ ಬಗ್ಗೆ, ವಿಶೇಷವಾಗಿ ಶಿಕ್ಷಣ, ತಂತ್ರಜ್ಞಾನ, ನಾವೀನ್ಯತೆ ಮತ್ತು ಜನರಿಂದ ಜನರಿಗೆ ವಿನಿಮಯದ ಬಗ್ಗೆ ಕೇಂದ್ರೀಕರಿಸಿತ್ತು.ಅನೇಕ ಮಲೇಷ್ಯಾದ ವಿದ್ಯಾರ್ಥಿಗಳು ಕರ್ನಾಟಕದಲ್ಲಿ ಶಿಕ್ಷಣ ಪಡೆಯುತ್ತಿರುವುದರಿಂದ, ನಮ್ಮ ಪಾಲುದಾರಿಕೆಯನ್ನು ಗಾಢಗೊಳಿಸುವ ಅಪಾರ ಸಾಮರ್ಥ್ಯವಿದೆ. ನಾನು ಮಲೇಷ್ಯಾಕ್ಕೆ ಭೇಟಿ ನೀಡಲು ಎದುರು ನೋಡುತ್ತಿದ್ದೇನೆ. ಅರ್ಥಪೂರ್ಣ ಸಹಯೋಗ ಮತ್ತು ಹಂಚಿಕೆಯ ಪ್ರಗತಿಯತ್ತ ನಾವು ಕೆಲಸ ಮಾಡುತ್ತಿರುವಾಗ ಗೌರವಾನ್ವಿತ ಪ್ರಧಾನಿಯನ್ನು ಕರ್ನಾಟಕಕ್ಕೆ ಆಹ್ವಾನಿಸಿದ್ದೇನೆ ಎಂದು ವಿಡಿಯೋ ಪೋಸ್ಟ್ ಮಾಡಿದ್ದಾರೆ.

# ಜೆಡಿಎಸ್ ಕಾರ್ಯಕರ್ತರಿಗೆ ಗಾಳ ಹಾಕಿದ ಮುಖ್ಯಮಂತ್ರಿ ಡಿ.ಕೆ.ಶಿ.



ಬೆಂಗಳೂರು, ಜೂ.7: ಕಾಂಗ್ರೆಸ್ ಕಾರ್ಯಕರ್ತರಿಗಷ್ಟೇ ಅಲ್ಲ ಜೆಡಿಎಸ್‌ನ ಕಾರ್ಯ ಕರ್ತರಿಗೂ ನನ್ನ ಮನೆಯ ಬಾಗಿಲು ಸದಾ ತೆರೆದಿರುತ್ತದೆ ಎಂದು ಮುಖ್ಯಮಂತ್ರಿ ಡಿ. ಕೆ.ಶಿವಕುಮಾರ್ ಹೇಳಿದ್ದಾರೆ.

ಮುಖ್ಯಮಂತ್ರಿಯಾದ ಬಳಿಕ ಪ್ರಥಮ ಬಾರಿಗೆ ತವರು ಕ್ಷೇತ್ರ ಕನಕಪುರ ಹಾಗೂ ಬೆಂಗಳೂರು ದಕ್ಷಿಣ ಜಿಲ್ಲೆಯ ವಿವಿಧೆಡೆ ಆಯೋಜಿಸಿದ್ದ ಕೃತಜ್ಞತಾ ಸಮರ್ಪಣಾ ಯಾತ್ರೆಯಲ್ಲಿ ಭಾಗವಹಿಸಿದ್ದರು.

ಹಾರೋಹಳ್ಳಿಯಲ್ಲಿ ಮಾತನಾಡಿದ ಅವರು, ಹಿಂದೆ ಬಿಜೆಪಿಯನ್ನು ಅಧಿಕಾರದಿಂದ ದೂರ ಇಡಬೇಕು ಎಂಬ ಕಾರಣಕ್ಕಾಗಿ ಅನಿತಾ ಕುಮಾರಸ್ವಾಮಿ ಹಾಗೂ ಕುಮಾರಸ್ವಾಮಿಯವರಿಗೆ ಬೆಂಬಲ ನೀಡಿದ್ದೆವು. ಅನಂತರ ಏನಾಯಿತು ಎಂದು ಚರ್ಚೆ ಮಾಡಲು ಬಯಸುವುದಿಲ್ಲ ಎಂದಿದ್ದಾರೆ.

ಡಿ.ಕೆ.ಶಿವಕುಮಾರ್ ಕಾಂಗ್ರೆಸ್‌ಗೆ ಮಾತ್ರ ಅಲ್ಲ, ಜೆಡಿಎಸ್ ಕಾರ್ಯಕರ್ತರಿಗೂ ನನ್ನ ಸಹಕಾರ ಇದೆ. ನನ್ನ ಮನೆಯ ಬಾಗಿಲು ಜೆಡಿಎಸ್ ಕಾರ್ಯಕರ್ತರಿಗಾಗಿಯೂ ತೆರೆದಿರುತ್ತದೆ. ಸಿಕ್ಕ ಅವಕಾಶವನ್ನು ಬಳಸಿಕೊಂಡು ಜನರ ಋಣ ತೀರಿಸುವ ಕೆಲಸ ಮಾಡಬೇಕು. ನಾನು ಮುಖ್ಯಮಂತ್ರಿಯಾಗಿದ್ದರೂ ನಿಮ ಮನೆಯ ಮಗ ಹಾಗೂ ತಾಲ್ಲೂಕಿನ ಸೇವಕ. 2028ರಲ್ಲೂ ನಿಮ ಆಶೀರ್ವಾದ ಇರಬೇಕೆಂದು ಮನವಿ ಮಾಡಿದರು.

ಬೆಂಗಳೂರು ದಕ್ಷಿಣ ಜಿಲ್ಲೆಯೆಂದು ನಾಮಕರಣ ಮಾಡಿದ್ದರಿಂದ ಜಮೀನಿನ ಬೆಲೆ ಏನಾಗಿದೆ ಎಂದು ಎಲ್ಲರಿಗೂ ಅರಿವಾಗಿದೆ. ನಾನು ಹೊಸದಾಗಿ ಏನನ್ನೂ ಮಾಡಿಲ್ಲ. ನಾವೆಲ್ಲಾ ಬೆಂಗಳೂರಿಗೆ ಸೇರಿದವರು. ಮೂಲವನ್ನು ಬದಲಾಯಿಸಲು ಯಾರಿಗೂ ಸಾಧ್ಯವಿಲ್ಲ ಎಂದರು.

ಮೊದಲು ಇದು ಬೆಂಗಳೂರು ನಗರ ಜಿಲ್ಲೆಯಾಗಿತ್ತು. ನಾನು ಬೆಂಗಳೂರು ಜಿಲ್ಲಾ ಸದಸ್ಯನಾಗಿದ್ದೆ. ನಂತರ ಬೆಂಗಳೂರು ಗ್ರಾಮಾಂತರ ಜಿಲ್ಲೆಯಾಯಿತು. ರಾಮನಗರ ಜಿಲ್ಲೆ ಎಂದು ಹೆಸರಿಸಲಾಗಿತ್ತು. ಈಗ ಬೆಂಗಳೂರು ದಕ್ಷಿಣ ಜಿಲ್ಲೆಯಾಗಿದೆ. ಈ ಭಾಗದ ಅಭಿವೃದ್ಧಿಗೆ ಏನೆಲ್ಲಾ ಕೆಲಸಗಳಾಗಬೇಕೆಂಬ ಬಗ್ಗೆ ಪ್ರತ್ಯೇಕ ಸಭೆ ನಡೆಸಿ, ಚರ್ಚಿಸಲಾಗುವುದು. ಜನರ ಸಮಸ್ಯೆ ಆಲಿಸಲು ವಿಶೇಷ ಅಧಿಕಾರಿಯನ್ನು ನಿಯೋಜಿಸಲಾಗುವುದು ಎಂದರು.

ಯಾರೂ ವ್ಯವಸಾಯವನ್ನು ಬಿಡಬಾರದು, ಜಿಲ್ಲೆಯ ಎಲ್ಲಾ ಕೆರೆಗಳನ್ನು ತುಂಬಿಸಲಾಗುತ್ತದೆ. ಸಿಲ್?ಕ–ಮಿಲ್?ಕ ಉತ್ಪಾದನೆಗೆ ಆದ್ಯತೆ ನೀಡಲಾಗುವುದು. ಇಲ್ಲಿ ಸ್ಥಾಪನೆಯಾಗುವ ಕೈಗಾರಿಕೆಗಳು ಸ್ಥಳೀಯರಿಗೆ ಉದ್ಯೋಗಾವಕಾಶ ನೀಡಬೇಕೆಂದು ಕಟ್ಟುನಿಟ್ಟಿನ ಆದೇಶ ನೀಡುತ್ತೇನೆ. ಉದ್ಯಮ ಮತ್ತು ಕೈಗಾರಿಕೆಗಳಲ್ಲಿ ಕೆಲಸ ಮಾಡುವವರು, ಸಂಘಟನೆ, ಪ್ರತಿಭಟನೆ ಮಾಡಿ ತೊಂದರೆ ಮಾಡಬೇಡಿ. ಕೈಗಾರಿಕೆಗಳು ಇಲ್ಲಿಯೇ ಇರಬೇಕು ಎಂದರು.

ಬೆಂಗಳೂರು ದಕ್ಷಿಣ ಹಾಗೂ ಗ್ರಾಮಾಂತರ ಜಿಲ್ಲೆಯ ಮಗನಾಗಿ ನಾನು ಇಲ್ಲಿಗೆ ಬಂದಿದ್ದೇನೆ. ಕಷ್ಟ ಕಾಲದಲ್ಲಿ ಜಿಲ್ಲೆಯ ಜನರು ನನ್ನ ಜೊತೆಗಿದ್ದರು. ಪ್ರಯತ್ನ ವಿಫಲವಾದರೂ ಪ್ರಾರ್ಥನೆ ಫಲ ನೀಡುತ್ತದೆ ಎಂದು ನಾನು ನಂಬಿದ್ದೆ. ನಿಮೆಲ್ಲರ ಪ್ರಾರ್ಥನೆಯ ಫಲವಾಗಿ ನಾನಿಂದು ಉತ್ತಮ ಅವಕಾಶ ಪಡೆದಿದ್ದೇನೆ ಎಂದರು.

ತಮ ರಾಜಕೀಯ ಜೀವನದಲ್ಲಿ ಸಹಕರಿಸಿದವರನ್ನು ಸರಿಸಿಕೊಂಡ ಡಿ.ಕೆ.ಶಿವಕುಮಾರ್ ರಾಮನಗರದ ಶಾಸಕನಾಗಿ ಸ್ನೇಹಿತ ಇಕ್ಬಾಲ್ ಹುಸೇನ್ ಅವರನ್ನು ಆಯ್ಕೆ ಮಾಡಿದ್ದಕ್ಕೆ ಕೃತಜ್ಞತೆ ಸಲ್ಲಿಸುವುದಾಗಿ ಹೇಳಿದರು.

ನಾನು ಮುಖ್ಯಮಂತ್ರಿಯಾಗುವ ಕುರಿತಂತೆ ಗಳಿಗೆ, ಮುಹೂರ್ತ ಇಡಬೇಡ ಎಂದು ಹಲವು ಬಾರಿ ಇಕ್ಬಾಲ್ ಹುಸೇನ್‌ಗೆ ಹೇಳಿದ್ದೆ, ಮಾತು ಕಡಿಮೆ ಮಾಡು ಎಂದು ಎಷ್ಟು ಹೇಳಿದರೂ ಕೇಳಲಿಲ್ಲ. ಹೊಡೆಯುವುದೂ ಒಂದು ಬಿಟ್ಟು ಮಿಕ್ಕಿದ್ದೆಲ್ಲಾ ಮಾಡಿದ್ದೇನೆ. ಬಾಯಿ ಚಪಲ, ಆಸೆ, ಅಭಿಮಾನದಿಂದ ಮಾತನಾಡಿದ್ದಾರೆ. ನೋಟೀಸ್ ಕೂಡ ನೀಡಲಾಗಿತ್ತು ಎಂದು ಸರಿಸಿಕೊಂಡರು.

ರಾಮನಗರ ಮತ್ತು ಹಾರೋಹಳ್ಳಿಯಲ್ಲಿ ಎಲ್ಲರಿಗೂ ನಿವೇಶನ, ವಸತಿ ಕಲ್ಪಿಸಬೇಕು. ಇದಕ್ಕೆ ಬೇಕಾದ ಎಲ್ಲಾ ಅನುಕೂಲಗಳನ್ನು ಮಾಡಿಕೊಡುತ್ತೇನೆ. ಮೆಡಿಕಲ್ ಕಾಲೇಜು, ಆಸ್ಪತ್ರೆಗೆ ನಾನೇ ಶಂಕು ಸ್ಥಾಪನೆ ಮಾಡುತ್ತೇನೆ ಎಂದರು.

ಆಶ್ರಯ–ಆರೋಗ್ಯ, ಅಕ್ಷರಕ್ಕೆ ನನ್ನ ಮೊದಲ ಆದ್ಯತೆ. ಜಿಲ್ಲೆಯ ಜನ ವಲಸೆ ಹೋಗುವುದನ್ನು ತಪ್ಪಿಸಲು ಇಲ್ಲಿಯೇ ಅಗತ್ಯ ಸೌಲಭ್ಯಗಳನ್ನು ಕಲ್ಪಿಸುತ್ತೇವೆ.

ಈಗಾಗಲೇ ಅನೇಕ ಯೋಜನೆಗಳನ್ನು ತಯಾರು ಮಾಡಲಾಗಿದೆ ಎಂದು ಹೇಳಿದರು. ನಾನು ವಿಧಾನಸೌಧದಲ್ಲಿ ಕೂರಲು ಆಶೀರ್ವದಿಸಿದ ನಿಮ್ಮ ಋಣವನ್ನು ಎಂದಿಗೂ ಮರೆಯುವುದಿಲ್ಲ ಎಂದರು.

# ಸರ್ಕಾರಿ ಕಾರ್ಯಕ್ರಮದಲ್ಲಿ ಪ್ಲಾಸ್ಟಿಕ್ ನೀರಿನ ಬಾಟಲಿ ಬಳಸಿದರೆ ಕಠಿಣ ಕ್ರಮ

## ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ನರೇಂದ್ರಸ್ವಾಮಿ ಎಚ್ಚರಿಕೆ

**ಬೆಂಗಳೂರು, ಜೂ.7:** ಸರ್ಕಾರಿ ಕಚೇರಿಗಳು, ಸಭೆಗಳು ಹಾಗೂ ಕಾರ್ಯಕ್ರಮಗಳಲ್ಲಿ ಪ್ಲಾಸ್ಟಿಕ್ ನೀರಿನ ಬಾಟಲಿಗಳ ಬಳಕೆಗೆ ಈಗಾಗಲೇ ನಿಷೇಧವಿದ್ದರೂ ನಿಯಮ ಉಲ್ಲಂಘನೆ ಮುಂದುವರಿದಿರುವ ಹಿನ್ನೆಲೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್ಪಿಸಿಬಿ) ಇದೀಗ ಕಠಿಣ ಎಚ್ಚರಿಕೆ ನೀಡಿದೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಕೆಎಸ್ಪಿಸಿಬಿ ಅಧ್ಯಕ್ಷ ಪಿ.ಎಂ. ನರೇಂದ್ರ ಸ್ವಾಮಿ, ಎಲ್ಲಾ ಸರ್ಕಾರಿ ಇಲಾಖೆಗಳು, ನಿಗಮಗಳು ಹಾಗೂ ಜಿಲ್ಲಾ ಆಡಳಿತಗಳಿಗೆ ನೋಟಿಸ್ ಜಾರಿ ಮಾಡಿ, ನಿಯಮ ಪಾಲನೆಗೆ ನಿರ್ಲಕ್ಷ್ಯ ತೋರಿದರೆ ಕಠಿಣ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಲಾಗು ವುದು ಎಂದು ಹೇಳಿದ್ದಾರೆ.


2018ರ ಸೆಪ್ಟೆಂಬರ್‌ನಲ್ಲಿ ರಾಜ್ಯ ಪರಿಸರ ಮತ್ತು ಜೀವ ಪರಿಸರ ಇಲಾಖೆ, ಸರ್ಕಾರಿ ಕಚೇರಿಗಳು ಹಾಗೂ ಕಾರ್ಯಕ್ರಮಗಳಲ್ಲಿ ಪ್ಲಾಸ್ಟಿಕ್ ಬಾಟಲಿ ಬಳಕೆಯನ್ನು ನಿಷೇಧಿಸುವ ಆದೇಶ ಹೊರಡಿಸಿತ್ತು.ಈ ಆದೇಶ ಜಾರಿಗೆ ತರುವ ಜವಾಬ್ದಾರಿಯನ್ನು ಮಾಲಿನ್ಯ ನಿಯಂತ್ರಣ ಮಂಡಳಿಗೆ ವಹಿಸಲಾಗಿತ್ತು. ಆ ವೇಳೆ ನಡೆಸಿದ ಅಧ್ಯಯನದಲ್ಲಿ ಸರ್ಕಾರಿ ಕಾರ್ಯ ಕ್ರಮಗಳಿಂದ ವರ್ಷಕ್ಕೆ ಎರಡು ಕೋಟಿಗೂ ಹೆಚ್ಚು ಪ್ಲಾಸ್ಟಿಕ್ ಬಾಟಲಿಗಳು ತ್ಯಾಜ್ಯವಾಗಿ ಸಂಗ್ರಹ ವಾಗುತ್ತಿರುವುದು ಬೆಳಕಿಗೆ ಬಂದಿತ್ತು. ಈ ಹಿನ್ನೆಲೆಯಲ್ಲಿ ಗಾಜಿನ ಬಾಟಲಿ, ಟಂಬ್ಲರ್, ನೀರಿನ ಡಿಸ್ಪೆನ್ಸರ್ ಸೇರಿದಂತೆ ಪರಿಸರ ಸ್ನೇಹಿ ಪರ್ಯಾಯಗಳನ್ನು ಬಳಸುವಂತೆ ಸರ್ಕಾರ ಸೂಚಿಸಿತ್ತು. ಸಾರ್ವಜನಿಕರಿಗೆ ಮಾದರಿಯಾಗುವ ಉದ್ದೇಶದಿಂದ ಈ ಆದೇಶ ಜಾರಿಗೊಳಿಸಲಾಗಿದ್ದರೂ, ಇಂದಿಗೂ ಪರಿಣಾಮಕಾರಿಯಾಗಿ ಅನುಷ್ಠಾನ ಗೊಂಡಿಲ್ಲ ಎಂದು ಅಧಿಕಾರಿಗಳು ಒಪ್ಪಿಕೊಂಡಿದ್ದಾರೆ.

ರಾಜ್ಯದಲ್ಲಿ ಪ್ಲಾಸ್ಟಿಕ್ ಬಾಟಲಿಗಳ ತ್ಯಾಜ್ಯ ಪ್ರಮಾಣ ದಿನೇದಿನೇ ಹೆಚ್ಚುತ್ತಿದ್ದು, ಇದನ್ನು ತಕ್ಷಣ ನಿಯಂತ್ರಿಸುವ ಅಗತ್ಯವಿದೆ ಎಂದು ಮಂಡಳಿ ಅಭಿಪ್ರಾಯಪಟ್ಟಿದೆ. ಇದರ ನಡುವೆ ಧಾರವಾಡ ಮೂಲದ ಸ್ಟಾರ್ಟ್‌ಅಪ್ ಒಂದು ಪೆಟ್ ಬಾಟಲಿಗಳನ್ನು ತಲಾ ರೂ.1 ನೀಡಿ ಸಂಗ್ರಹಿಸಿ, ಅವುಗಳನ್ನು ಪುಡಿಮಾಡಿ ಮರುಬಳಕೆ ಉತ್ಪನ್ನಗಳ ತಯಾರಿಕೆಗೆ ಬಳಸುವ ಯೋಜನೆಯನ್ನು ಮಂಡಿಸಿದೆ.

ಈ ಪ್ರಸ್ತಾವನೆಯನ್ನೂ ಮಂಡಲಿ ಪರಿಶೀಲಿಸುತ್ತಿದೆ. ಕೆಎಸ್ಪಿಸಿಬಿ ಅಧ್ಯಕ್ಷ ಪಿ.ಎಂ. ನರೇಂದ್ರಸ್ವಾಮಿ, ನಗರಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಹಾಗೂ ಪೌರಾಡಳಿತ ಇಲಾಖೆಗಳ ಸಚಿವರು ಮತ್ತು ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಈ ಯೋಜನೆ ಕುರಿತು ಚರ್ಚಿಸಲಾಗುವುದು ಎಂದು ತಿಳಿಸಿದ್ದಾರೆ. ಈ ಕ್ರಮದಿಂದ ಪ್ಲಾಸ್ಟಿಕ್ ತ್ಯಾಜ್ಯ ಕಡಿಮೆಯಾಗುವುದರ ಜೊತೆಗೆ ಸ್ಥಳೀಯ ಸಂಸ್ಥೆಗಳ ಮೇಲಿನ ಹೊರೆ ಸಹ ಇಳಿಯಲಿದೆ ಎನ್ನಲಾಗಿದೆ.

ಇದಲ್ಲದೆ, ಪ್ಲಾಸ್ಟಿಕ್ ಉತ್ಪನ್ನಗಳನ್ನು ಮರುಸಂಗ್ರಹಿಸುವಂತೆ ಕಂಪನಿಗಳಿಗೆ ನೀಡಲಾಗಿರುವ ವಿಸ್ತೃತ ತಯಾಕರ ಜವಾಬ್ದಾರಿ **(EPR)** ನಿಯಮಗಳು ಸಮರ್ಪಕವಾಗಿ ಜಾರಿಯಾಗುತ್ತಿಲ್ಲ ಎಂಬ ಆರೋಪವೂ ಕೇಳಿಬಂದಿದೆ.

# ಬಿಜೆಪಿ ಶಾಸಕ ಶರಣು ಸಲಗರ ವಿರುದ್ಧ ಜಾಮೀನುರಹಿತ ಬಂಧನ ವಾರಂಟ್



ಬೆಂಗಳೂರು, ಜೂ.7: 2023ರಲ್ಲಿ ಬಕ್ರೀದ್ ಹಬ್ಬದ ವೇಳೆ ನಡೆದ ಗಲಾಟೆ ಪ್ರಕರಣ ಸಂಬಂಧ ಬಿಜೆಪಿ ಶಾಸಕ ಶರಣು ಸಲಗರ ವಿರುದ್ಧ ಜಾಮೀನುರಹಿತ ಬಂಧನ ವಾರಂಟ್ ಹೊರಡಿಸಲಾಗಿದೆ.

ಬೆಂಗಳೂರಿನ 42ನೇ ಎಸಿಜೆಎಂ ಕೋರ್ಟ್ ವಾರಂಟ್ ಜಾರಿ ಮಾಡಿದೆ. 2023ರ ಜುಲೈನಲ್ಲಿ ಬಕ್ರೀದ್ ಹಬ್ಬದಂದು ನಗರದ ಮುಸ್ಲಿಂ ಸಮುದಾಯದವರ ಮನೆಗೆ ಹೋಗಿ ಅಕ್ರಮವಾಗಿ ಗೋಹತ್ಯೆ ನಡೆದಿದೆ ಎಂದು ಸಲಗರ ಗಲಾಟೆ ನಡೆಸಿದಕ್ಕಾಗಿ ಅವರ ವಿರುದ್ಧ ಪ್ರಕರಣ ದಾಖಲಾಗಿತ್ತು. ಈ ಸಂಬಂಧ ಪೊಲೀಸರು ಈಗಾಗಲೇ ಕೋರ್ಟ್ ಗೆ ಚಾರ್ಜ್‌ಶೀಟ್ ಸಲ್ಲಿಸಿದ್ದಾರೆ.

ವಿಚಾರಣೆಗೆ ಹಾಜರಾಗದ ಕಾರಣ ವಾರಂಟ್ ಹೊರಡಿಸಲಾಗಿದೆ. ಇವರ ಜೊತೆಯಲ್ಲಿದ್ದ ಇತರೆ ಒಂಬತ್ತು ಜನರ ವಿರುದ್ಧವೂ ವಾರೆಂಟ್ ಜಾರಿಯಾಗಿದೆ.

ವಾರಂಟ್ ಜಾರಿಯಾದ ಕಾರಣ ನಗರ ಠಾಣೆಯ ಸಿಪಿಐ ಮತ್ತು ಸಬ್ ಇನ್ಸ್‌ಕ್ಟರ್ ಬಸವಕಲ್ಯಾಣ ನಗರದ ಖುಬಾ ಕಾಲೇಜು ರಸ್ತೆಯಲ್ಲಿನ ಸಲಗರ ನಿವಾಸಕ್ಕೆ ಶನಿವಾರ ಭೇಟಿ ನೀಡಿದ್ದಾರೆ. ಆದರೆ, ಶಾಸಕರು ಮನೆಯಲ್ಲಿ ಇರಲಿಲ್ಲ ಎಂದು ತಿಳಿದು ಬಂದಿದೆ.

Chief reporter : SANDEEP RENU ✆ 99728 72151 | Executive Editor : SHARAT JYOTSNA B.R ✆ 9886766483 ✉ vaarthe@gmail.com

Published from: K10,'A'/4, Khriki Extension, Malviya Nagar, New Delhi-110 017. Phone: 95-120-3917916-20
Printed at: Jyoti Printers, E-94, Sector 6, Noida, UP. Phone: 0120-4232687 Off : E-94,Sector 6, Noida,UP | RNI No. DELKAN/2003/10363

# ಬಿಜೆಪಿಯಲ್ಲಿ ನಾಯಕತ್ವ ಬದಲಾವಣೆ ವಿಚಾರ ಮತ್ತೆ ಮುನ್ನೆಲೆಗೆ

## ಹೊಸ ಆಯ್ಕೆ ಕುರಿತ ಚರ್ಚೆ ಹುಟ್ಟುಹಾಕಿದ ಕುತೂಹಲ, ಅಸಮಾಧಾನ

**ಬೆಂಗಳೂರು, ಜೂ.7:** ಕರ್ನಾಟಕ ಬಿಜೆಪಿಯ ರಾಜ್ಯಾಧ್ಯಕ್ಷರ ಬದಲಾವಣೆ ಅಥವಾ ಹೊಸ ಆಯ್ಕೆಯ ಕುರಿತಾದ ಚರ್ಚೆಗಳು ಸಾಕಷ್ಟು ಕುತೂಹಲ ಮತ್ತು ಅಸಮಾಧಾನ ಎರಡನ್ನೂ ಹುಟ್ಟುಹಾಕಿವೆ. ಪ್ರಸ್ತುತ ಬಿ.ವೈ. ವಿಜಯೇಂದ್ರ ಅವರು ಕರ್ನಾಟಕ ಬಿಜೆಪಿ ರಾಜ್ಯಾಧ್ಯಕ್ಷರಾಗಿ ಮುಂದುವರಿದ್ದಾರೆ. ಆದಾಗ್ಯೂ, ಪಕ್ಷದೊಳಗಿನ ಆಂತರಿಕ ಬೆಳವಣಿಗೆಗಳು ಮತ್ತು ರಾಜ್ಯ ರಾಜಕಾರಣದಲ್ಲಿ ಉಂಟಾಗಿರುವ ಬದಲಾವಣೆಗಳ ಹಿನ್ನೆಲೆಯಲ್ಲಿ, ನಾಯಕತ್ವದ ಕುರಿತಾದ ಚರ್ಚೆಗಳು ಮತ್ತೆ ಮುನ್ನೆಲೆಗೆ ಬಂದಿವೆ. ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಬೆಂಬಲ ಮತ್ತು ಮಾರ್ಗದರ್ಶನ ವಿಜಯೇಂದ್ರ ಅವರ ಪಾಲಿಗೆ ರಕ್ಷಾಕವಚವಾಗಿದ್ದರೂ, ದೆಹಲಿಯ ವರಿಷ್ಠರು ಅಂತಿಮವಾಗಿ ಸಾಮಾಜಿಕ ನ್ಯಾಯ ಮತ್ತು 'ಸಂಘಟನಾ ಬಲದ ನಡುವೆ ಸಮತೋಲನ ಕಂಡುಕೊಳ್ಳುವತ್ತ ಗಮನಹರಿಸಿದ್ದಾರೆ.

ಬಿಜೆಪಿ ಹೈಕಮಾಂಡ್ ಮೀನ–ಮೇಷ ಎಣಿಸುತ್ತಿರುವುದು ಕೇವಲ ವಿಳಂಬವಲ್ಲ, ಬದಲಿಗೆ ಅಸ್ತಿತ್ವದ ಹೋರಾಟದ ಭಾಗವಾಗಿರುವ ಒಂದು ಜಾಗರೂಕತೆಯ ಹೆಜ್ಜೆಯಾಗಿದೆ. ಕಾರ್ಯಕರ್ತರ ಅಸಮಾಧಾನವನ್ನು ತಣಿಸಲು ಶೀಘ್ರವೇ ಸ್ಪಷ್ಟತೆಯೊಂದು ಅಗತ್ಯವಾಗಿದೆ ಎಂಬ ಮಾತುಗಳು ಪಕ್ಷದ ವಲಯದಲ್ಲಿ ಕೇಳಿಬರುತ್ತಿವೆ. ಕೇಂದ್ರ ಬಿಜೆಪಿ ನಾಯಕತ್ವವು ಹಲವು ರಾಜ್ಯಗಳಲ್ಲಿ ಆಂತರಿಕ ಸಂಘಟನೆಯನ್ನು ಬಲಪಡಿಸುತ್ತಿದ್ದರೂ, ಕರ್ನಾಟಕದ ವಿಷಯದಲ್ಲಿ ಹೆಚ್ಚಿನ ಮುನ್ನೆಚ್ಚರಿಕೆ ವಹಿಸುತ್ತಿದೆ. ಇದರ ಕಾರಣಗಳು ಅನೇಕ.

ರಾಜ್ಯದಲ್ಲಿ ಲಿಂಗಾಯತ, ಒಕ್ಕಲಿಗ ಮತ್ತು ಒಬಿಸಿ ಸಮುದಾಯಗಳ ನಡುವೆ ಸಮತೋಲನ ಕಾಯ್ದುಕೊಳ್ಳುವುದು ಬಿಜೆಪಿಗೆ ದೊಡ್ಡ ಸವಾಲಾಗಿದೆ. ವಿಜಯೇಂದ್ರ ಅವರ ನೇತೃತ್ವದಲ್ಲಿ ಪಕ್ಷವು ಒಂದು ವರ್ಗದ ಪ್ರಾಬಲ್ಯವನ್ನು ಹೊಂದಿದೆ ಎಂಬ ಆರೋಪವಿದ್ದು, ಇದನ್ನು ಸರಿದೂಗಿಸಲು ಬೇರೆ ಸಮುದಾಯದ ಮುಖಂಡರನ್ನು ಪರಿಗಣಿಸಬೇಕೆ ಎಂಬ ಚರ್ಚೆ ದೆಹಲಿ ಮಟ್ಟದಲ್ಲಿ ನಡೆಯುತ್ತಿದೆ.

ವಿರೋಧ ಪಕ್ಷದ ನಾಯಕ ಆರ್. ಅಶೋಕ್ (ಒಕ್ಕಲಿಗ ಸಮುದಾಯ) ಮತ್ತು ರಾಜ್ಯಾಧ್ಯಕ್ಷ ವಿಜಯೇಂದ್ರ (ಲಿಂಗಾಯತ ಸಮುದಾಯ) ಅವರ ನಡುವಿನ ಸಮನ್ವಯವು ಪಕ್ಷದ ಕಾರ್ಯತಂತ್ರಕ್ಕೆ ನಿರ್ಣಾಯಕವಾಗಿದೆ. ಕಾಂಗ್ರೆಸ್‌ನಲ್ಲಿ ಡಿ.ಕೆ. ಶಿವಕುಮಾರ್ ಅವರಂತಹ ಪ್ರಬಲ ನಾಯಕರನ್ನು ಎದುರಿಸಲು ಬಿಜೆಪಿಗೆ ಒಗ್ಗಟ್ಟಿನ ನಾಯಕತ್ವದ ಅಗತ್ಯವಿದೆ.

ಪರ್ಯಾಯ ನಾಯಕರ ಕೊರತೆಯಿದೆ ಎಂಬ ಚರ್ಚೆಯೂ ಇದೆ. ಅನುಭವಿ ನಾಯಕರು ಅನೇಕರಿದ್ದರೂ, ಚುನಾವಣಾ ನಿರ್ವಹಣೆ ಮತ್ತು ಸಂಪನ್ಮೂಲ ಕ್ರೋಡೀಕರಣದಲ್ಲಿ ವಿಜಯೇಂದ್ರ ಅವರ ಹಿಡಿತವನ್ನು ಮೀರಿಸುವ ಹೊಸ ಮುಖವನ್ನು ಕಂಡುಕೊಳ್ಳುವುದು ವರಿಷ್ಠರಿಗೆ ಸದ್ಯಕ್ಕೆ ಕ್ಲಿಷ್ಟಕರವಾಗಿದೆ.

ಕೆಲ ಹಿರಿಯ ನಾಯಕರು ಪಕ್ಷದ ಕಾರ್ಯಶೈಲಿ ಬಗ್ಗೆ ಬಹಿರಂಗವಾಗಿಯೇ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಪಕ್ಷವು ಹೆಚ್ಚು ಆಕ್ರಮಣಕಾರಿಯಾಗಿರಬೇಕು ಮತ್ತು ತಳಮಟ್ಟದ ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು ಎಂಬ ಒತ್ತಡ ಹೈಕಮಾಂಡ್ ಮೇಲಿದೆ. ಬಿ.ಶ್ರೀರಾಮುಲು, ವಿ. ಸೋಮಣ್ಣ, ವಿ. ಸುನೀಲ್‌ಕುಮಾರ್, ಅರವಿಂದ ಬೆಲ್ಲದ ಅವರಂತಹ ಹೆಸರುಗಳು ಪದೇ ಪದೇ ಚರ್ಚೆಗೆ ಬರುತ್ತಿವೆ. ಈ ಪೈಕಿ ಯಾರೊಬ್ಬರನ್ನೂ ಅಂತಿಮಗೊಳಿಸಲು ಸಾಧ್ಯವಾಗದಿರುವುದು ಕಾರ್ಯಕರ್ತರಲ್ಲಿ ಗೊಂದಲಕ್ಕೆ ಕಾರಣವಾಗಿದೆ.

ರಾಜ್ಯದಲ್ಲಿ ಮುಖ್ಯಮಂತ್ರಿ ಆಗಿ ಡಿ.ಕೆ. ಶಿವಕುಮಾರ್ ಹಾಗೂ ಕೆಪಿಸಿಸಿ ಅಧ್ಯಕ್ಷರಾಗಿ ಬಿ.ಕೆ.ಹರಿಪ್ರಸಾದ್ ನೇಮಕವಾಗಿರುವುದು ಬಿಜೆಪಿಯ ತಂತ್ರಗಾರಿಕೆಯನ್ನು ಬದಲಾಯಿಸಿದೆ. ಡಿ.ಕೆ.ಶಿವಕುಮಾರ್ ಅವರ ರಾಜಕೀಯ ಚತುರತೆ ಮತ್ತು ಸಂಘಟನಾ ಕೌಶಲವನ್ನು ತಡೆಗಟ್ಟಲು ಬಿಜೆಪಿ ತನ್ನ ತಂತ್ರವನ್ನು ಮರುರೂಪಿಸುತ್ತಿದೆ. ಸದ್ಯದ ಪರಿಸ್ಥಿತಿಯಲ್ಲಿ, ವರಿಷ್ಠರು ತರಾತುರಿಯಲ್ಲಿ ಯಾವುದೇ ನಿರ್ಧಾರ ಕೈಗೊಳ್ಳುವ ಬದಲು, ಸ್ಥಳೀಯ ನಾಯಕರ ಅಭಿಪ್ರಾಯ ಮತ್ತು ರಾಜ್ಯದ ಸಾಮಾಜಿಕ ವಾಸ್ತವಗಳನ್ನು ಗಮನದಲ್ಲಿಟ್ಟುಕೊಂಡು ನಿರ್ಧಾರ ಪ್ರಕಟಿಸುವ ಸಾಧ್ಯತೆಯಿದೆ.

ಆಂತರಿಕ ಭಿನ್ನಾಭಿಪ್ರಾಯ: ಪಕ್ಷದ ಹಿರಿಯ ನಾಯಕರ ಒಂದು ಬಣವು ವಿಜಯೇಂದ್ರ ಅವರ ಕಾರ್ಯವೈಖರಿ ಮತ್ತು ನೇಮಕಾತಿಯ ಕುರಿತು ಅಸಮಾಧಾನ ವ್ಯಕ್ತಪಡಿಸುತ್ತಾ ಬಂದಿದೆ. ಈ ಆಂತರಿಕ ಭಿನ್ನಮತಗಳು ಆಯ್ಕೆ ಪ್ರಕ್ರಿಯೆಯ ಸಮಯದಲ್ಲಿ ಗೊಂದಲಗಳಿಗೆ ಕಾರಣವಾಗಿದ್ದವು. ಕರ್ನಾಟಕದ ರಾಜಕೀಯದಲ್ಲಿ ವಿವಿಧ ಸಮುದಾಯಗಳ ಪ್ರಾತಿನಿಧ್ಯ ಬಹಳ ಮುಖ್ಯ. ಪಕ್ಷವು ರಾಜ್ಯದಲ್ಲಿ ಹೊಸದಾಗಿ ವಿರೋಧ ಪಕ್ಷದ ಪಾತ್ರವನ್ನು ನಿರ್ವಹಿಸಬೇಕಾದ ಸವಾಲು ಎದುರಿಸುತ್ತಿರುವಾಗ, ಜಾತಿ ಸಮೀಕರಣಗಳು ಮತ್ತು ನಾಯಕತ್ವದ ಆಯ್ಕೆ ಕುರಿತು ವರಿಷ್ಠರು ಹೆಚ್ಚು ಎಚ್ಚರಿಕೆಯ ಹೆಜ್ಜೆಗಳನ್ನು ಇಡಬೇಕಾಗುತ್ತದೆ.

### ಸಂಘಟನಾತ್ಮಕ ಸವಾಲು

"ಇತ್ತೀಚಿನ ರಾಜಕೀಯ ಬೆಳವಣಿಗೆಗಳು, ಅಂದರೆ ಡಿ.ಕೆ.ಶಿವಕುಮಾರ್ ಅವರ ಮುಖ್ಯಮಂತ್ರಿ ನೇಮಕದ ನಂತರ, ಬಿಜೆಪಿ ತನ್ನ ತಂತ್ರಗಾರಿಕೆಯನ್ನು ಮರುರೂಪಿಸಬೇಕಾದ ಅನಿವಾರ್ಯತೆಯಲ್ಲಿದೆ. ಅಂತಹ ಸಂದರ್ಭಗಳಲ್ಲಿ ಪಕ್ಷದ ಒಳಗಿನ ಒಗ್ಗಟ್ಟು ಕಾಪಾಡಿಕೊಳ್ಳುವುದು ಹೈಕಮಾಂಡ್‌ಗೆ ಸವಾಲಾಗಿ ಪರಿಣಮಿಸುತ್ತದೆ.

ರಾಜ್ಯಮಟ್ಟದ ಬದಲಾವಣೆಗಳ ಕುರಿತು ದೆಹಲಿಯ ಮಟ್ಟದಲ್ಲಿ ನಿರ್ಧಾರಗಳು ವಿಳಂಬವಾದಾಗ, ಕೆಳಮಟ್ಟದ ಕಾರ್ಯಕರ್ತರಲ್ಲಿ ಸಹಜವಾಗಿ ಗೊಂದಲಗಳು ಉಂಟಾಗುತ್ತವೆ. ವಿಶೇಷವಾಗಿ ಪಕ್ಷದ ಸಂಘಟನಾತಕ ಚುನಾವಣೆಗಳು ಮತ್ತು ವೀಕ್ಷಕರ ನೇಮಕದಂತಹ ವಿಷಯಗಳಲ್ಲಿ ಸ್ಪಷ್ಟತೆ ಇಲ್ಲದಿರುವುದು ಅಸಮಾಧಾನಕ್ಕೆ ಕಾರಣವಾಗಿತ್ತು. ಆದರೆ, ಪ್ರಸ್ತುತ ವಿಜಯೇಂದ್ರ ಅವರ ನಾಯಕತ್ವವನ್ನು ಹೈಕಮಾಂಡ್ ಬಲಪಡಿಸಿರುವುದರಿಂದ, ಕಾರ್ಯಕರ್ತರು ಸಂಘಟನಾತಕ ಕೆಲಸಗಳತ್ತ ಗಮನಹರಿಸುವಂತೆ ಸೂಚನೆ ನೀಡಲಾಗಿದೆ.

ಸದ್ಯಕ್ಕೆ ಪಕ್ಷದ ವರಿಷ್ಠರು ವಿಜಯೇಂದ್ರ ಅವರ ನಾಯಕತ್ವದಲ್ಲಿ ಮುಂದಿನ ಚುನಾವಣೆಗಳು ಮತ್ತು ರಾಜಕೀಯ ಸವಾಲುಗಳನ್ನು ಎದುರಿಸಲು ನಿರ್ಧರಿಸಿದ್ದಾರೆ. ಯಥಾಸ್ಥಿತಿ: ಕಳೆದ ಕೆಲವು ತಿಂಗಳುಗಳಿಂದ ಪಕ್ಷದೊಳಗಿನ ನಾಯಕರ ಭಿನ್ನಾಭಿಪ್ರಾಯ ಮತ್ತು ಸಂಘಟನಾತಕ ಚರ್ಚೆಗಳು ನಡೆಯುತ್ತಿದ್ದರೂ, ಬಿಜೆಪಿ ಹೈಕಮಾಂಡ್ ಸದ್ಯದ ಮಟ್ಟಿಗೆ ಬಿ.ವೈ. ವಿಜಯೇಂದ್ರ ಅವರ ನಾಯಕತ್ವದ ಮೇಲೆ ವಿಶ್ವಾಸ ವ್ಯಕ್ತಪಡಿಸಿದೆ. ಅವರ ನೇಮಕಾತಿಯ ಅವಧಿಯ ಕುರಿತಾದ ಅನಿಶ್ಚಿತತೆಗಳ ನಡುವೆಯೂ ಅವರು ಅಧ್ಯಕ್ಷ ಹುದ್ದೆಯಲ್ಲಿ ಮುಂದುವರೆಯುವ ಸಾಧ್ಯತೆ ಇದೆ."

## ಉತ್ತಮ ಆಡಳಿತಕ್ಕೆ ನೀಲನಕ್ಷೆ ಸಿದ್ಧ
## ಡಿಸಿಎಂ ಡಾ. ಜಿ. ಪರಮೇಶ್ವರ್



**ತುಮಕೂರು, ಜೂ.7:** ಉಪಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ನಂತರ ಮೊದಲ ಬಾರಿಗೆ ತುಮಕೂರಿಗೆ ಆಗಮಿಸಿದ ಡಾ.ಜಿ.ಪರಮೇಶ್ವರ್ ಸಿದ್ಧಗಂಗಾ ಮಠಕ್ಕೆ ಭೇಟಿ ನೀಡಿ ಪೂಜ್ಯ ಸ್ವಾಮೀಜಿಯವರ ಆಶೀರ್ವಾದ ಪಡೆದರು.

ಶ್ರೀ ಮಠದ ಲಿಂಗೈಕ್ಯ ಶಿವಕುಮಾರ ಸ್ವಾಮೀಜಿಗಳ ಗದ್ದಿಗೆಗೆ ನಮಸ್ಕರಿಸಿದ ನಂತರ ಮಾತನಾಡಿದ ಅವರು, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನೇತೃತ್ವದ ನೂತನ ಸರ್ಕಾರವು ಜನತೆಗೆ ಉತ್ತಮ ಆಡಳಿತ ನೀಡಲು ನೀಲನಕ್ಷೆ ಸಿದ್ಧಪಡಿಸಿಕೊಂಡಿದ್ದು, ಅದರಂತೆ ತ್ವರಿತ ಗತಿಯಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಿದೆ ಎಂದರು.

ಈ ವೇಳೆ ತಮಗೆ ಸಿಕ್ಕಿರುವ ಕಂದಾಯ ಇಲಾಖೆಯ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಲು ಮಠದ ಆಶೀರ್ವಾದ ಅತ್ಯಗತ್ಯ ಎಂದು ಅವರು ಭಾವಿಸಿದ್ದಾರೆ. ಮುಖ್ಯವಾಗಿ ತುಮಕೂರು ಜಿಲ್ಲೆಯ ಕುಡಿಯುವ ನೀರು ಮತ್ತು ನೀರಾವರಿ ಸಮಸ್ಯೆಗಳನ್ನು ಶೀಘ್ರವಾಗಿ ಬಗೆಹರಿಸಲು ಮೊದಲ ಆದ್ಯತೆ ನೀಡಲಾಗುವುದು ಎಂದು ಅವರು ಈ ಸಂದರ್ಭದಲ್ಲಿ ಖಾತ್ರಿಪಡಿಸಿದರು.

ಅರಣ್ಯ ಇಲಾಖೆಯ ಅನುಮತಿ ಮತ್ತು ತಾಂತ್ರಿಕ ತೊಡಕುಗಳಿಂದಾಗಿ ನೆನೆಗುದಿಗೆ ಬಿದ್ದಿರುವ ಮಹತ್ವಾಕಾಂಕ್ಷೆಯ ಎತ್ತಿನಹೊಳೆ ಯೋಜನೆಗೆ ವೇಗ ನೀಡಲಾಗುವುದು. ಕೇಂದ್ರ ಸರ್ಕಾರದಿಂದ ಲಭ್ಯವಿರುವ ತಾತ್ವಿಕ ಒಪ್ಪಿಗೆಯನ್ನು ಬಳಸಿಕೊಂಡು, ಬಾಕಿ ಉಳಿದಿರುವ ಕಾಮಗಾರಿಗಳನ್ನು ಮುಗಿಸಿ ಆದಷ್ಟು ಬೇಗ ಜನರಿಗೆ ನೀರು ತಲುಪಿಸುವ ಪ್ರಯತ್ನ ಮಾಡಲಾಗುವುದು ಎಂದು ಭರವಸೆ ನೀಡಿದರು. ಕಂದಾಯ ಇಲಾಖೆಯಲ್ಲಿ ರೈತರು ಎದುರಿಸುತ್ತಿರುವ ಭೂ ದಾಖಲೆ ಹಾಗೂ ಹಕ್ಕುಗಳ ತೊಂದರೆಗಳನ್ನು ಮತ್ತು ಇಲಾಖಾ ಸಿಬ್ಬಂದಿಗಳ ಬಡ್ತಿ ಸಮಸ್ಯೆಗಳನ್ನು ಕೂಡಲೇ ಪರಿಹರಿಸುವುದಾಗಿ ತಿಳಿಸಿದರು.

## ಇದೇನಾ ಅಚ್ಛೇದಿನ್
## ಬಡವರ ಕಾಳಜಿ ಎಲ್ಲಿಹೋಯ್ತು?



**ಅಡುಗೆಅನಿಲ ದರ ಮತ್ತೆ ಹೆಚ್ಚಳಕ್ಕೆ ಸಚಿವ ಈಶ್ವರ ಖಂಡ್ರೆ ಆಕ್ರೋಶ**

ಬೆಂಗಳೂರು, ಜೂ.7: ಗೃಹಬಳಕೆಯ 14.2 ಕೆ.ಜಿ. ಅಡುಗೆ ಅನಿಲ ಸಿಲಿಂಡರ್ ದರವನ್ನು 29 ರೂ. ಏರಿಸಿರುವ ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಈಶ್ವರ ಬಿ ಖಂಡ್ರೆ, ಇದೇನಾ ಅಚ್ಛೇದಿನ್ ಎಂದು ಪ್ರಶ್ನಿಸಿದ್ದಾರೆ.

ಕಳೆದ 3 ತಿಂಗಳಲ್ಲಿ 2ನೇ ಬಾರಿ ಶ್ರೀಸಾಮಾನ್ಯರು ಬಳಸುವ ಅಡುಗೆ ಅನಿಲ ದರ ಏರಿಕೆ ಮಾಡಲಾಗಿದ್ದು, 90 ರೂ. ಹೊರೆ ಬಿದ್ದಿದೆ. ಇದರಿಂದ ಬಡವರು, ಮಧ್ಯಮವರ್ಗದವರು ನಲುಗಿ ಹೋಗಿದ್ದಾರೆ. ಇದೆಲ್ಲವೂ ಕೇಂದ್ರ ಸರ್ಕಾರದ ದುರಾಡಳಿತದ ಫಲ ಎಂದು ಅವರು ಹೇಳಿದ್ದಾರೆ.

ಕಾಂಗ್ರೆಸ್ ನೇತೃತ್ವದ ಯುಪಿಎ ಕಾಲದಲ್ಲಿ 3 –4 ರೂ. ದರ ಹೆಚ್ಚಳವಾದರೂ ತಲೆಯ ಮೇಲೆ ಗ್ಯಾಸ್ ಸಿಲಿಂಡರ್ ಹೊತ್ತು ಪ್ರತಿಭಟನೆ ಮಾಡುತ್ತಿದ್ದ ಬಿಜೆಪಿಗರು ಈಗ ಏಕೆ ಬಾಯಿಗೆ ಬೀಗ ಹಾಕಿಕೊಂಡಿದ್ದಾರೆ. ಈಗ ಇವರ ಬಡವರ ಪರ ಕಾಳಜಿ ಎಲ್ಲಿ ಹೋಯಿತು ಎಂದು ಪ್ರಶ್ನಿಸಿದ್ದಾರೆ.

ವಾಣಿಜ್ಯ ಬಳಕೆಯ ಸಿಲಿಂಡರ್ ದರ 3200 ರೂ. ದಾಟಿದ್ದು, ಹೋಟೆಲ್‌ಗಳಲ್ಲಿ ಎಲ್ಲ ತಿಂಡಿ ತಿನಿಸುಗಳ ದರ ಹೆಚ್ಚಳ ಆಗಿದೆ. ಪೆಟ್ರೋಲ್ ಡೀಸೆಲ್ ದರ ಹೆಚ್ಚಳದಿಂದ ಜೀವನಾವಶ್ಯಕ ವಸ್ತುಗಳ ದರವೂ ಗಗನಕ್ಕೆ ಏರಿದೆ. ಬಡವರು, ಮಧ್ಯಮವರ್ಗದವರ ಬದುಕು ದುಸ್ತರವಾಗುತ್ತಿದೆ. ರಾಜ್ಯದಲ್ಲಿ 5 ಗ್ಯಾರಂಟಿಗಳನ್ನು ನೀಡಿರುವುದರಿಂದ ಜನ ಕೇಂದ್ರ ಸರ್ಕಾರದ ಈ ಹೊರೆ ಹೊರುವ ಶಕ್ತಿ ಪಡೆದಿದ್ದಾರೆ. ಬಿಜೆಪಿ ಮತ್ತು ಮಿತ್ರಪಕ್ಷಗಳಿಗೆ ಜನರೇ ಬೀದಿಗಿಳಿದು ಬುದ್ಧಿಕಲಿಸುವ ದಿನ ದೂರವಿಲ್ಲ ಎಂದು ಈಶ್ವರ ಖಂಡ್ರೆ ಹೇಳಿದ್ದಾರೆ.

## ಕರ್ತವ್ಯ ಸಮಯ ಪಾಲಿಸುವಂತೆ
## ಆಸ್ಪತ್ರೆ ಸಿಬ್ಬಂದಿಗೆ ಸೂಚನೆ

**ಖಾಲಿಯಿರುವ 900 ವೈದ್ಯ ಹುದ್ದೆ ಭರ್ತಿಗೆ ಕ್ರಮ: ಸಚಿವ ಯು.ಟಿ. ಖಾದರ್**

**ಸೇವೆ ಮಾಡಲು ಇಷ್ಟಪಟ್ಟವರಿಗೆ ತಾತ್ಕಾಲಿಕ ನೇಮಕಾತಿಗೆ ಡಿಎಚ್‌ಒಗೆ ನಿರ್ದೇಶನ**



ಮಂಗಳೂರು, ಜೂ.7: ಎಲ್ಲಾ ಆಸ್ಪತ್ರೆಗಳಲ್ಲಿ ವೈದ್ಯರು, ಸಿಬಂದಿ ನಿಗದಿತ ಸೇವಾ ಅವಧಿಯಲ್ಲಿ ಅಲ್ಲಿರಬೇಕು. ಇದರ ಬಗ್ಗೆ ತಿಳಿಯಲು ರಾತ್ರಿ ವೇಳೆ ಭೇಟಿ ನೀಡುತ್ತಿದ್ದೇನೆ. ಜಿಲ್ಲಾಮಟ್ಟ, ತಾಲೂಕು ಮಟ್ಟದ ಅಧಿಕಾರಿಗಳು ಕೂಡ ಈ ರೀತಿ ಭೇಟಿ ನೀಡಬೇಕು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಯು.ಟಿ ಖಾದರ್ ಸೂಚನೆ ನೀಡಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸರಕಾರಿ ಆಸ್ಪತ್ರೆಯಲ್ಲಿ ಖಾಲಿಯಿರುವ 900 ವೈದ್ಯರ ಹುದ್ದೆ ಭರ್ತಿಗೆ ಕ್ರಮ ಕೈಗೊಳ್ಳಲಾಗುವುದು. ಖಾಯಂ ನೇಮಕ ಪ್ರಕ್ರಿಯೆ ಆಗುವವರೆಗೆ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಲಾಗುವುದು ಎಂದರು. ಎಂಬಿಬಿಎಸ್ ಆದವರು ಸೇವೆ ಸಲ್ಲಿಸಲು ಬಂದರೆ ಅವರಿಗೆ ಡಿಎಚ್‌ಒಗಳು ಒಂದು ವಾರದೊಳಗೆ ತಾತ್ಕಾಲಿಕ ನೇಮಕಾತಿಯ ಆದೇಶ ಪತ್ರ ನೀಡಬೇಕು. ಇಲ್ಲದಿದ್ದಲ್ಲಿ ಡಿಎಚ್‌ಒಗಳನ್ನು ಅಮಾನತು ಮಾಡಲಾಗುವುದು. ನೇಮಕ ಆದವರಿಗೆ 60,000 ರೂ ವೇತನ ನೀಡಲಾಗುವುದು ಎಂದು ಖಾದರ್ ಹೇಳಿದರು.ಈ ಹಿಂದೆ ದ.ಕನ್ನಡ ಜಿಲ್ಲಾ ಉಸ್ತುವಾರಿ ಸಚಿವನಾಗಿದ್ದೆ. ಕೋಲಾರ, ಚಾಮರಾಜನಗರಗಳಲ್ಲಿಯೂ ಕೆಲಸ ಮಾಡಿದ್ದೇನೆ. ಹಾಗಾಗಿ ದ.ಕನ್ನಡ ಜಿಲ್ಲೆ ಉಸ್ತುವಾರಿಗೆ ಬೇರೆಯವರಿದ್ದರೆ ನಾನು ಬೇರೆ ಜಿಲ್ಲೆಯ ಉಸ್ತುವಾರಿಯಾಗುತ್ತೇನೆ. ಅಂತಿಮವಾಗಿ ಸಿಎಂ, ಹೈಕಮಾಂಡ್ ವಿವೇಚನೆಗೆ ಬಿಟ್ಟದ್ದು ಎಂದು ಅವರು ಹೇಳಿದರು.






'ಧ್ವನಿ ಮೊದಲು'ಗಾಗಿ ರಾಷ್ಟ್ರೀಯ ಡಿಜಿಟಲ್ ಮೂಲಸೌಕರ್ಯವನ್ನು ಜಂಟಿಯಾಗಿ ಅಭಿವೃದ್ಧಿಪಡಿಸಲು ಡಿಜಿಟಲ್ ಇಂಡಿಯಾ ಭಾಷಿಣಿ ಮತ್ತು ಕಠ್ಮಂಡು ವಿಶ್ವವಿದ್ಯಾಲಯದ ನಡುವಿನ ಒಪ್ಪಂದದ ವಿನಿಮಯಕ್ಕೆ ವಿದೇಶಾಂಗ ಸಚಿವ ಎಸ್. ಜೈಶಂಕರ್ ಮತ್ತು ನೇಪಾಳದ ವಿದೇಶಾಂಗ ಸಚಿವ ಶಿಶಿರ್ ಖನಾಲ್ ಸಾಕ್ಷಿಯಾದರು

# ಕೇಂದ್ರ ಸರ್ಕಾರದಿಂದ ಜನವಿರೋಧಿ ಆಡಳಿತ

## ಎಲ್‌ಪಿಜಿ ದರ ಹೆಚ್ಚಳಕ್ಕೆ ಸಚಿವ ಯತೀಂದ್ರ ಸಿದ್ದರಾಮಯ್ಯ ಕಿಡಿ

ಹುಬ್ಬಳ್ಳಿ, ಜೂ.7: ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ ಏರಿಕೆಯಾಗಿರುವುದಕ್ಕೆ ತೈಲ ಮತ್ತು ಎಲ್‌ಪಿಜಿ ದರ ಹೆಚ್ಚಿಸಲಾಗಿದೆ ಎಂದು ಸಬೂಬು ಹೇಳುತ್ತಿರುವ ಕೇಂದ್ರ ಸರ್ಕಾರವು ಜನವಿರೋಧಿ ಆಡಳಿತ ನಡೆಸುತ್ತಿದೆ ಎಂದು ನಗರಾಭಿವೃದ್ಧಿ ಸಚಿವ ಯತೀಂದ್ರಸಿದ್ದರಾಮಯ್ಯ ಹರಿಹಾಯ್ದಿದ್ದಾರೆ.

ರವಿವಾರ ಸುದ್ದಿಗಾರರೊಂದಿಗೆ ಮಾತನಾಡಿ ಕೇಂದ್ರ ಸರ್ಕಾರವು ಮೇಲಿಂದ ಮೇಲೆ ಎಲ್‌ಪಿಜಿ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆ ಮಾಡುತ್ತಲೇ ಇದೆ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಬೆಲೆ ಇಳಿದಾಗ ಆ ಸೌಲಭ್ಯ ಜನಸಾಮಾನ್ಯರಿಗೆ ತಲುಪಿಸಲಿಲ್ಲ. ಈಗ ಕಚ್ಚಾತೈಲ ಬೆಲೆ ಹೆಚ್ಚಾದಾಗ ತಕ್ಷಣವೇ ಜನರ ಮೇಲೆ ಹೇರಲಾಗಿದೆ. ಇದು ಜನರ ಹಿತಾಸಕ್ತಿ ಕಡೆಗಣಿಸುತ್ತಿದೆ. ಕೇವಲ ತನ್ನ ಖಜಾನೆ ತುಂಬಿಸಿಕೊಳ್ಳುವತ್ತ ಗಮನಹರಿಸುತ್ತಿದೆ. ಇದೊಂದು ಜನವಿರೋಧಿ ಸರ್ಕಾರ ಎಂದು ಕಿಡಿ ಕಾರಿದರು.



ಕಾಂಗ್ರೆಸ್ ಪಕ್ಷದೊಳಗಿನ ನಾಯಕರ ಭಿನ್ನಾಭಿಪ್ರಾಯ ಮತ್ತು ಆಂತರಿಕ ಕಲಹಗಳನ್ನು ಬಗೆಹರಿಸಿಕೊಳ್ಳುವುದರಲ್ಲೇ ಸಮಯ ಕಳೆದರು. ಸಿದ್ದರಾಮಯ್ಯ ವರ್ಚಸ್ಸು ಕಡಿಮೆಯಾಗಿದ್ದಕ್ಕೆ ಕೆಳಗಿಳಿಸಿದರು ಎಂಬ ಪ್ರಧಾನಿ ಮೋದಿ ಹೇಳಿಕೆಗೆ ಪ್ರತಿಕ್ರಿಯಿಸಿದ ಯತೀಂದ್ರ "ನಮ್ಮ ಪಕ್ಷದಲ್ಲಿ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ಪಕ್ಷದ ಹಿರಿಯ ನಾಯಕರು, ಹೈಕಮಾಂಡ್ ನಿರ್ಣಯ ದಂತೆ ಸಿದ್ದರಾಮಯ್ಯ ರಾಜೀನಾಮೆ ಕೊಟ್ಟಿದ್ದಾರೆ. ರಾಜ್ಯದ ಇತಿಹಾಸದಲ್ಲೇ ಇಷ್ಟು ಸುಗಮವಾಗಿ ಅಧಿಕಾರ ಹಸ್ತಾಂತರವಾಗಿರುವುದನ್ನು ಯಾರೂ ನೋಡಿಲ್ಲ. ಕೊಟ್ಟ ಮಾತನ್ನು ಉಳಿಸಿಕೊಳ್ಳಲು ಹಾಲಿ ಮುಖ್ಯಮಂತ್ರಿ ಯೊಬ್ಬರು ತಮ್ಮ ಅಧಿಕಾರ ಬಿಟ್ಟುಕೊಟ್ಟಿರುವುದು ಇದೇ ಮೊದಲು. ನಮಗೆ ಜನರ ಕಲ್ಯಾಣ ಮುಖ್ಯ" ಎಂದರು.

ಸಿಎಂ ಡಿ.ಕೆ. ಶಿವಕುಮಾರ್ ನಾನು ಹಿಂದೂ ಎಂಬ ಹೇಳಿಕೆ ವಿಚಾರವಾಗಿ ಪ್ರತಿಕ್ರಿಯಿಸಿ, "ಇದರಲ್ಲಿ ಯಾವುದೇ ತಪ್ಪಿಲ್ಲ. ಪ್ರತಿಯೊಬ್ಬ ಹಿಂದೂ ತನ್ನ ಧರ್ಮದ ಬಗ್ಗೆ ಹೇಳಿಕೊಳ್ಳುವ ವಿಚಾರವದು" ಎಂದರು."ನಗರಾಭಿವೃದ್ಧಿ ಇಲಾಖೆಯಲ್ಲಿ ಹಲವು ಅಭಿವೃದ್ಧಿ ವಿಷಯಗಳ ಯೋಜನೆ ಇದೆ. ನಾನೀಗ ಅಧಿಕಾರ ಸ್ವೀಕಾರ ಮಾಡಿದ್ದೇನೆ. ಸಾಕಷ್ಟು ಯೋಜನೆ ಮಾಡಬೇಕೆಂಬ ಉದ್ದೇಶವಿದೆ. ಮುಖ್ಯವಾಗಿ ಟೌನ್ ಪ್ಲಾನಿಂಗ್, ಮಾಸ್ಟರ್ ಪ್ಲ್ಯಾನ್ ಮಾಡುವೆ. ಇದರ ಜತೆಗೆ ಮೂಲ ಸೌಕರ್ಯಕ್ಕೆ ಹೆಚ್ಚು ಒತ್ತು ಕೊಡುವೆ" ಎಂದರು."ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ವಿಭಜನೆಯ ಬಿಲ್ ರಾಜ್ಯಪಾಲರ ಬಳಿಯಿದ್ದು, ಅದನ್ನು ರಾಜ್ಯಪಾಲರು ಪಾಸ್ ಮಾಡುತ್ತಾರೆಂದು ಭಾವಿಸಿರುವೆ" ಎಂದರು.

# ಹಣ, ಆಸ್ತಿಗಿಂತ ಸಾಧನೆ ನೀಡುವ ಖುಷಿಗೆ ಮಿತಿ ಇಲ್ಲ: ಸಚಿವ ಕೃಷ್ಣಬೈರೇಗೌಡ ಅಭಿಮತ

### ಮೌಂಟ್ ಎವರೆಸ್ಟ್ ಆರೋಹಣ ಮಾಡಿದ ಇಬ್ಬರಿಗೆ ಸನ್ಮಾನ

**ಬೆಂಗಳೂರು, ಜೂ.7:** ಹಣ, ಆಸ್ತಿ, ಸಂಪತ್ತು ಗಳಿಕೆ ಖುಷಿ ಕೊಡುತ್ತದೆ ಎಂಬುದು ನಿಜ, ಆದರೆ ಸಾಧನೆಗಳ ಮುಂದೆ ಈ ಎಲ್ಲವೂ ಗೌಣ. ಸಂಪತ್ತು ಗಳಿಕೆಯಿಂದ ಚೆನ್ನಾಗಿರಬಹುದು. ಆದರೆ ಅದರ ಹೊರತಾಗಿಯೂ ಜೀವನ ಇದೆ. ಸಾಧನೆಗಳ ಮೂಲಕ ಬದುಕನ್ನು ಸಾರ್ಥಕ ಪಡಿಸಿಕೊಂಡು ಮತ್ತೊಬ್ಬರಿಗೆ ಪ್ರೇರಣೆಯಾಗುವಂತೆ ಜೀವಿಸಬೇಕು. ಅಂತಹ ಬದುಕು ನೀಡುವ ಖುಷಿಗೆ ಮಿತಿ ಇರುವುದಿಲ್ಲ ಎಂದು ಬೆಂಗಳೂರು ನಗರಾಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ಸಹಕಾರ ನಗರದ ವಿವಿಧ ಸಂಘ – ಸಂಸ್ಥೆಗಳು ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿಶ್ವದ ಅತಿ ಎತ್ತರದ ಭೂಶಿಖರ ಮೌಂಟ್ ಎವರೆಸ್ಟ್ (8,848.86 ಮೀಟರ್) ಆರೋಹಣ ಮಾಡಿದ ಕರ್ನಾಟಕ ಮೌಂಟೇನೀರಿಂಗ್ ಅಸೋಸಿಯೇಷನ್ ಸದಸ್ಯರಾದ ಸಂತೋಷ್ ದೇವರಾಜಪ್ಪ ಮತ್ತು ಡಾ. ಚಿನ್ಮಯಿ ತ್ರಿಶೂಲಮೂರ್ತಿ ಅವರನ್ನು ಸನ್ಮಾನಿಸಿ ಮಾತನಾಡಿದರು.



ಸಾಹಸದ ಚಟುವಟಿಕೆಗಳಿಗೆ ದೈಹಿಕ ಸಧೃಡತೆ ಜತೆಗೆ ಮಾನಸಿಕ ಸಧೃಢತೆಯೂ ಬೇಕು. ಇಚ್ಛಾಶಕ್ತಿಯ ಮುಂದೆ ಯಾವುದೂ ದೊಡ್ಡದಲ್ಲ ಎಂಬುದನ್ನು ಕನ್ನಡಿಗರಾದ ಸಂತೋಷ್ ದೇವರಾಜಪ್ಪ ಮತ್ತು ಡಾ. ಚಿನ್ಮಯಿ ತ್ರಿಶೂಲಮೂರ್ತಿ ಸಾಧಿಸಿ ತೋರಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಜೀವನದಲ್ಲಿ ಸವಾಲುಗಳನ್ನು ತೆಗೆದುಕೊಳ್ಳಬೇಕು. ಪ್ರಕೃತಿಯೊಂದಿಗೆ ಬದುಕಬೇಕು ಎಂಬುದನ್ನು ಈ ಇಬ್ಬರು ಸಾಧಕರು ತಮ್ಮ ಸಾಧನೆಯ ಮೂಲಕ ತೋರಿಸಿಕೊಟ್ಟಿದ್ದಾರೆ. ಅವರ ಈ ಸಾಧನೆ ನಮ್ಮ ಯುವಶಕ್ತಿಗೆ ಪ್ರೇರೇಪಣೆಯಾಗಬೇಕು ಎಂದು ಆಶಿಸಿದರು.

ಸಾಹಸದ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವವರ ಸಂಖ್ಯೆಯನ್ನು ಗಮನಿಸಿದರೆ ದೇಶದಲ್ಲೇ ಬೆಂಗಳೂರು ಮೊದಲ ಸ್ಥಾನದಲ್ಲಿದೆ. ಟ್ರೆಕ್ಕಿಂಗ್ ಮತ್ತು ಸೈಕ್ಲಿಂಗ್‌ನಲ್ಲಿ ಬೆಂಗಳೂರಿಗರನ್ನು ಹೆಚ್ಚಿನ ಸಂಖ್ಯೆಯಲ್ಲಿ ನೋಡುತ್ತಿದ್ದೇವೆ. ಸಾಹಸದ ಚಟುವಟಿಕೆಗಳಿಗೆ ಬೆಂಗಳೂರು ಸ್ಪಿರಿಟ್ ಆಗುತ್ತಿದೆ. ಸಂತೋಷ ದೇವರಾಜಪ್ಪ ಕನ್ನಡಿಗರಷ್ಟೇ ಅಲ್ಲ, ಅವರು ನನ್ನ ಕ್ಷೇತ್ರದವರು ಎಂಬುದು ನನಗೆ ಇನ್ನೂ ಹೆಮ್ಮೆ. ಹೀಗಾಗಿ ನಾನೇ ಅವರನ್ನು ಗೌರವಿಸಬೇಕು ಎಂಬ ಆಶಯ ವ್ಯಕ್ತಪಡಿಸಿದೆ. ಆದರೆ ಸಹಕಾರ ನಗರದ ಸಂಘ ಸಂಸ್ಥೆಗಳು ಒಟ್ಟಾಗಿ ಕಾರ್ಯಕ್ರಮ ಆಯೋಜನೆ ಮಾಡಿರುವುದು ತಿಳಿದ ನಂತರ ಅವರೊಟ್ಟಿಗೆ ನಾನೂ ಭಾಗಿಯಾದೆ ಎಂದು ಸಚಿವರು ಹೇಳಿದರು.

ಬೆಂಗಳೂರು ಕಾಂಕ್ರೀಟ್ ಕಾಡು ಆಗುತ್ತಿದೆ. ನಗರದ ಬದುಕು ಪರಿಸರದಿಂದ ದೂರ ಮಾಡುತ್ತಿದೆ. ಪ್ರಕೃತಿಯೊಂದಿಗೆ ಬದುಕುವುದನ್ನು ಕಲಿಯಬೇಕು. ಮಕ್ಕಳಲ್ಲಿ ಪ್ರಕೃತಿಯೊಂದಿಗೆ ಬದುಕುವ ಹಾಗೂ ಸಾಹಸ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಗುಣ ಬೆಳೆಸಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಉತ್ತರ ನೀಡಿದ ಸಂತೋಷ್ ದೇವರಾಜಪ್ಪ ಮತ್ತು ಡಾ. ಚಿನ್ಮಯಿ ತ್ರಿಶೂಲಮೂರ್ತಿ ಅವರು ತಮ್ಮ ಅನುಭವಗಳನ್ನು ಹಂಚಿಕೊಂಡರು. ಸಹಕಾರ ನಗರದ ವೆಲ್ಫೇರ್ ಅಸೋಸಿಯೇಷನ್ ಅಧ್ಯಕ್ಷ ದೇವರಾಜಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಕಾರ್ಯದರ್ಶಿ ತುಳಸಿ ಮದ್ದಿನೇನಿ, ಕರ್ನಾಟಕ ಮೌಂಟೇನೀರಿಂಗ್ ಅಸೋಸಿಯೇಷನ್ ಅಧ್ಯಕ್ಷ ಎಸ್.ಕೆ. ಮೆಹತಾ ವೇದಿಕೆಯಲ್ಲಿದ್ದರು. ವಾಣಿಜ್ಯ ತೆರಿಗೆಗಳ ಅಪರ ಆಯುಕ್ತ ಕೆ.ಸಿ. ವಿರೂಪಾಕ್ಷ ಅವರು ಸಂತೋಷ್ ದೇವರಾಜಪ್ಪ ಮತ್ತು ಡಾ. ಚಿನ್ಮಯಿ ಅವರ ಸಾಧನೆಯ ಹಾದಿಯನ್ನು ವಿವರಿಸಿದರು.

## ವಿಜಯಪುರದ ಸಿದ್ಧೇಶ್ವರ ದೇವಸ್ಥಾನಕ್ಕೆ ಸಚಿವ ಎಂ.ಬಿ.ಪಾಟೀಲ್ ಭೇಟಿ



ವಿಜಯಪುರ, ಜೂ.7: ವಿಜಯಪುರ ನಗರಕ್ಕೆ ಮೊದಲನೆ ಬಾರಿಗೆ ಸಚಿವರಾಗಿ ಆಗಮಿಸಿದ, ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲರು, ನಗರದ ಆರಾಧ್ಯದೈವ ಶಿವಯೋಗಿ ಸಿದ್ಧೇಶ್ವರ ದೇವಸ್ಥಾನಕ್ಕೆ ದರ್ಶನಕ್ಕೆ ಬಂದಿದ್ದರು. ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದರು.

ಶ್ರೀ ಸಿದ್ಧೇಶ್ವರ ಸಂಸ್ಥೆಯ ಆಡಳಿತ ಮಂಡಳಿಯಿಂದ ರಾಮನಗೌಡ ಬಾ. ಪಾಟೀಲ(ಯತ್ನಾಳ) ಗೋರಕ್ಷಾ ಕೇಂದ್ರದಲ್ಲಿ ತಯಾರಿಸಿದ ಗೋ ಉತ್ಪನ್ನಗಳ ಕಿಟ್ ಮತ್ತು ಪುಸ್ತಕಗಳನ್ನು ಕೊಟ್ಟು ಅಭಿನಂದಿಸಿದರು.

ಸಿದ್ಧೇಶ್ವರ ಸಂಸ್ಥೆಯ ಉಪಾಧ್ಯಕ್ಷ, ಸಂಗನಬಸಪ್ಪ ಸಜ್ಜನ, ಅಧ್ಯಕ್ಷ, ಬಸಯ್ಯ ಎಸ್ ಹಿರೇಮಠ, ಕಾರ್ಯದರ್ಶಿ, ಎಸ್ ಎಚ್ ದೇಸಾಯಿ, ಬಿ.ಎಸ್.ಸುಗೂರ, ಎಂ.ಎಂ.ಸಜ್ಜನ, ಶಿವಾನಂದ ನೀಲಾ, ಮಹಾನಗರ ಪಾಲಿಕೆಯ ಮಹಾಪೌರ ಎಮ್.ಎಸ್. ಕರಡಿ, ಎನ್.ಎಮ್. ಗೋಲಾಯಿ, ಸುಧೀರ ಚಿಂಚಲಿ, ಮಲಕಪ್ಪ ಗಾಣಿಗೇರ, ಸದಾಶಿವ ಗುಡ್ಡೋಡಗಿ, ನಾಗಪ್ಪ ಗುಗ್ಗರಿ, ಮಲ್ಲಿಕಾರ್ಜುನ ಹಕ್ಕಾಪಕ್ಕಿ, ರಮೇಶ ಹಳ್ಳದ, ಪ್ರೇಮಾನಂದ ಬಿರಾದಾರ, ಎಸ್ ಸಿ ಉಪ್ಪಿನ, ಈರಣ್ಣ ಹಿಪ್ಪರಗಿ, ಮಲ್ಲಿಕಾರ್ಜುನ ಹಿಟ್ನಳ್ಳಿ, ಬಸವರಾಜ ಬೆಲ್ಲದ, ಮುಂತಾದವರು ಹಾಜರಿದ್ದರು.

# ಕಡಿಮೆ ಊಟ ಮಾಡಿ ಎಂದು ಪ್ರಧಾನಿ ಸಲಹೆ ನೀಡಿದರೂ ಅಚ್ಚರಿಯಿಲ್ಲ!

## ಸಿಲಿಂಡರ್ ಬೆಲೆ ಏರಿಕೆಗೆ ಸಚಿವ ಪ್ರಿಯಾಂಕ್ ಖರ್ಗೆ ಪ್ರತಿಕ್ರಿಯೆ

**ಬೆಂಗಳೂರು, ಜೂ.7:** ದೇಶದಲ್ಲಿ ಗೃಹ ಬಳಕೆಯ 14.2 ಕೆ.ಜಿ. ತೂಕದ ಎಲ್‌ಪಿಜಿ ಸಿಲಿಂಡರ್ ಬೆಲೆಯನ್ನು 29 ರೂ. ಹೆಚ್ಚಳ ಮಾಡಿರುವ ಕೇಂದ್ರ ಸರ್ಕಾರದ ವಿರುದ್ಧ ವ್ಯಾಪಕ ಆಕ್ರೋಶ ವ್ಯಕ್ತವಾಗುತ್ತಿದೆ. ಮಧ್ಯಮ ಮತ್ತು ಬಡ ವರ್ಗದ ಕುಟುಂಬಗಳ ಬಜೆಟ್‌ಗೆ ಮತ್ತಷ್ಟು ಹೊಡೆತ ಬಿದ್ದಿದೆ. ಇದೇ ವಿಚಾರವಾಗಿ ಮೋದಿ ಸರ್ಕಾರದ ವಿರುದ್ಧ ಗೃಹ ಸಚಿವ ಪ್ರಿಯಾಂಕ್ ಖರ್ಗೆ ತೀವ್ರ ವಾಗ್ದಾಳಿ ನಡೆಸಿದ್ದಾರೆ. ಸಿಲಿಂಡರ್ ಬೆಲೆ ಏರಿಕೆಯಾಗಿರುವ ಹಿನ್ನೆಲೆ, ದೇಶದ ಜನರಿಗೆ 'ಕಡಿಮೆ ಊಟ ಮಾಡಿ' ಎಂದು 8 ಗಂಟೆಯ ಪ್ರಧಾನಿ ಸಲಹೆ ನೀಡಬಹುದೇನೋ ಎಂದು ವ್ಯಂಗ್ಯವಾಡಿದ್ದಾರೆ.

ವಾಣಿಜ್ಯ ಬಳಕೆಯ ಸಿಲಿಂಡರ್ ಬೆಲೆಗಳು ಈಗಾಗಲೇ ದಾಖಲೆ ಮಟ್ಟವನ್ನು ತಲುಪಿ, ಹೋಟೆಲ್ ಹಾಗೂ ಸಣ್ಣ ಉದ್ಯಮಗಳ ಮೇಲೆ ಗಂಭೀರ ಪರಿಣಾಮ ಬೀರಿವೆ.



ಇದರ ನಡುವೆಯೇ, ಗೃಹಬಳಕೆಯ ಸಿಲಿಂಡರ್ ಬೆಲೆಯನ್ನು ಕೇವಲ ಮೂರು ತಿಂಗಳ ಅವಧಿಯಲ್ಲಿ ಎರಡನೇ ಬಾರಿಗೆ 29 ರೂ. ಏರಿಕೆ ಮಾಡಿರುವುದು ಸಾರ್ವಜನಿಕರನ್ನು ಕಂಗೆಡಿಸಿದೆ ಎಂದಿದ್ದಾರೆ.

ಪರಿಸ್ಥಿತಿ ಹೀಗೆಯೇ ಮುಂದುವರಿದರೆ, ಬಹುಶಃ ಪ್ರಧಾನಿಯವರು ರಾತ್ರಿ 8 ಗಂಟೆಗೆ (8 ಪಿಎಂ) ಮತ್ತೊಮ್ಮೆ ದೇಶವನ್ನುದ್ದೇಶಿಸಿ ಟಿವಿಯಲ್ಲಿ ಪ್ರತ್ಯಕ್ಷರಾಗಿ, ಜನಸಾಮಾನ್ಯರಿಗೆ ಕಡಿಮೆ ಊಟ ಮಾಡಿ ಎಂಬ ಹೊಸ ಮಾದರಿಯ ಆತ್ಮನಿರ್ಭರತೆಯ ಉಚಿತ ಸಲಹೆ ನೀಡಿದರೂ ಅಚ್ಚರಿಯಿಲ್ಲ! ಎಂದಿದ್ದಾರೆ.

ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ ದೇಶದ ಮಹಿಳೆಯರ ಮಾಂಗಲ್ಯವನ್ನು ಕಸಿಯುತ್ತದೆ ಎಂಬ ಅತ್ಯಂತ ಕೀಳು ಮಟ್ಟದ, ಭಾವನಾತ್ಮಕ ರಾಜಕೀಯ ಹೇಳಿಕೆಯನ್ನು ಪ್ರಧಾನಿಯವರು ನೀಡಿದ್ದರು. ಆದರೆ, ಇಂದು ದೇಶದ ವಾಸ್ತವವೇ ಬೇರೆಯಾಗಿದೆ. ಮಾಂಗಲ್ಯದ ರಕ್ಷಣೆ ನೆಪದಲ್ಲಿ ಮತ ಪಡೆದ ಪ್ರಧಾನಿ, ಇಂದು ಬೆಲೆ ಏರಿಕೆಯ ಗದಾಪ್ರಹಾರದ ಮೂಲಕ ನೇರವಾಗಿ ಜನರ ಅನ್ನದ ತಟ್ಟೆಯನ್ನೇ ಕಸಿಯುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕೇಂದ್ರ ಸರ್ಕಾರದ ಈ ಜನವಿರೋಧಿ ನಿರ್ಧಾರ ಮತ್ತು ಬೆಲೆ ಏರಿಕೆಯ 'ಅಚ್ಛೇ ದಿನಗಳ' (ಒಳ್ಳೆಯ ದಿನಗಳು) ಬಗ್ಗೆ ಕರ್ನಾಟಕದ ಬಿಜೆಪಿ ನಾಯಕರು ತಳೆದಿರುವ ಗಾಢ ಮೌನವು ಆಘಾತಕಾರಿಯಾಗಿದೆ. ಸಾರ್ವಜನಿಕರ ಸಂಕಷ್ಟಕ್ಕೆ ಸ್ಪಂದಿಸದ ಇವರ ಈ ನಡವಳಿಕೆಯು, ಜನಸಾಮಾನ್ಯರ ಎಡೆಗೆ ಅವರಿಗಿರುವ ಮಾನಸಿಕ ಕ್ರೌರ್ಯ ಮತ್ತು ಬೇಜವಾಬ್ದಾರಿತನವನ್ನು ಎತ್ತಿ ತೋರಿಸುತ್ತದೆ ಎಂದು ಸಚಿವರು ಕುಟುಕಿದ್ದಾರೆ.


### ಪ್ರತಿಭಟನೆ ಮಾಡುತ್ತಿಲ್ಲ ಏಕೆ: ಬಿಜೆಪಿ ನಾಯಕರಿಗೆ ಪ್ರಶ್ನೆ

ಯುಎಪಿ ಸರ್ಕಾರವಿದ್ದಾಗ ಹಣದುಬ್ಬರ ವಿಚಾರದಲ್ಲಿ ಬೀದಿಗಳಿಯುತ್ತಿದ್ದ ಬಿಜೆಪಿ ನಾಯಕರು ಈಗ ಸಿಲಿಂಡರ್ ಹಿಡಿದು ಬೀದಿಗಿಳಿದು ಪ್ರತಿಭಟಿಸುವುದಿಲ್ಲ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪ್ರಶ್ನಿಸಿದ್ದಾರೆ. ಈ ಕುರಿತು ಎಕ್ಸ್ ನಲ್ಲಿ ಪೋಸ್ಟ್ ಮಾಡಿರುವ ಅವರು, ಫೆಬ್ರವರಿ 28ರಂದು ಅಮೆರಿಕ ಮತ್ತು ಇಸ್ರೇಲ್, ಇರಾನ್ ಮೇಲೆ ದಾಳಿ ನಡೆಸಿದ ಬಳಿಕ ಹಾರ್ಮುಜ್ ಜಲಸಂಧಿಯನ್ನು ಮುಚ್ಚಲಾಗಿದೆ. ಇದಾದ ಬಳಿಕ ಜಾಗತಿಕವಾಗಿ ಎಲ್‌ಪಿಜಿ, ಇಂಧನಗಳ ಕೊರತೆ ಉಂಟಾಗಿದೆ. ದೇಶದಲ್ಲಿ ನಾಲ್ಕು ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶದ ಚುನಾವಣೆ ಮುಗಿಯುವವರೆಗೂ ಇಂಧನ, ಅನಿಲ ಬೆಲೆಯನ್ನು ಏರಿಸದ ಕೇಂದ್ರ ಸರ್ಕಾರ, ಚುನಾವಣೆ ಮುಗಿದು ಫಲಿತಾಂಶವೂ ಹೊರಬಿದ್ದು, ಸರ್ಕಾರಗಳು ರಚನೆಯಾಗುತ್ತಿದ್ದಂತೆ ಇಂಧನ, ಅನಿಲ ದರವನ್ನು ಪದೇ ಪದೇ ಹೆಚ್ಚಿಸುತ್ತಿದೆ ಎಂದಿದ್ದಾರೆ.

ದೇಶೀಯ ಎಲ್‌ಪಿಜಿ ಬೆಲೆಗಳು ಗಗನಕ್ಕೇರುತ್ತಿರುವುದು ಸಾಮಾನ್ಯ ಜನರ ಅಡುಗೆಮನೆಗಳನ್ನೇ ಸುಟ್ಟುಹಾಕುವ ಬೆದರಿಕೆಯನ್ನು ಹಾಕುತ್ತಿದೆ. ಮೋದಿ ಸರ್ಕಾರ ಕಳೆದ ನಾಲ್ಕು ತಿಂಗಳಲ್ಲಿ ದೇಶೀಯ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆಯನ್ನು 89 ರಷ್ಟು ಹೆಚ್ಚಿಸಿದೆ ಎಂದು ಹೇಳಿದ್ದಾರೆ. ಹಾಗೆಯೇ ಮೋದಿ ಸರ್ಕಾರ ಮೂರು ಪ್ರಶ್ನೆಗಳನ್ನು ಕೇಳಿದ್ದಾರೆ.

# ಭಾರತ, ಇಂಡೋನೇಷ್ಯಾ ಬಾಂಧವ್ಯ ಮತ್ತಷ್ಟು ಗಟ್ಟಿ

**ನವದೆಹಲಿ, ಜೂ.7:** ಭಾರತ ಮತ್ತು ಇಂಡೋನೇಷ್ಯಾ ಭಾನುವಾರ ತಮ್ಮ ಸಮಗ್ರ ಕಾರ್ಯತಂತ್ರದ ಪಾಲುದಾರಿಕೆಯನ್ನು ಗಾಢವಾಗಿಸಲು, ರಕ್ಷಣೆ ಮತ್ತು ಕಡಲ ಭದ್ರತೆಯಿಂದ ವ್ಯಾಪಾರ, ನಿರ್ಣಾಯಕ ಖನಿಜಗಳು ಮತ್ತು ಡಿಜಿಟಲ್ ಸಂಪರ್ಕದವರೆಗಿನ ಕ್ಷೇತ್ರಗಳಲ್ಲಿ ಸಹಕಾರವನ್ನು ವಿಸ್ತರಿಸಲು ತಮ್ಮ ಬದ್ಧತೆಯನ್ನು ಪುನರುಚ್ಚರಿಸಿವೆ. ವಿದೇಶಾಂಗ ಸಚಿವ ಎಸ್. ಜೈಶಂಕರ್ ಮತ್ತು ಇಂಡೋನೇಷ್ಯಾ ವಿದೇಶಾಂಗ ಸಚಿವ ಸುಗಿಯೊನೊ ನವದೆಹಲಿಯಲ್ಲಿ ನಡೆದ 8ನೇ ಭಾರತ–ಇಂಡೋನೇಷ್ಯಾ ಜಂಟಿ ಆಯೋಗದ ಸಭೆ (ಜೆಸಿಎಂ) ಸಹ–ಅಧ್ಯಕ್ಷತೆ ವಹಿಸಿದ್ದರು. ಉನ್ನತ ಮಟ್ಟದ ಸಭೆಯು ದಕ್ಷಿಣ ಮತ್ತು ಆಗ್ನೇಯ ಏಷ್ಯಾದ ಎರಡು ದೊಡ್ಡ ಪ್ರಜಾಪ್ರಭುತ್ವಗಳ ನಡುವೆ ಬೆಳೆಯುತ್ತಿರುವ ಕಾರ್ಯತಂತ್ರದ ಒಮ್ಮುಖವನ್ನು ಪ್ರತಿಬಿಂಬಿಸುತ್ತದೆ, ಎರಡೂ ಕಡೆಯವರು ದ್ವಿಪಕ್ಷೀಯ ಸಂಬಂಧಗಳಲ್ಲಿನ ಪ್ರಗತಿಯನ್ನು ಪರಿಶೀಲಿಸಿದರು ಮತ್ತು ಇತ್ತೀಚಿನ ರಾಜತಾಂತ್ರಿಕ ಆವೇಗವನ್ನು ಕಾಂಕ್ರೀಟ್ ಫಲಿತಾಂಶಗಳಾಗಿ ಪರಿವರ್ತಿಸುವ ಮಾರ್ಗಗಳನ್ನು ಚರ್ಚಿಸಿದರು.



ಭಾರತ–ಇಂಡೋನೇಷ್ಯಾ ಸಮಗ್ರ ಕಾರ್ಯತಂತ್ರದ ಪಾಲುದಾರಿಕೆಯ ಅಡಿಯಲ್ಲಿ ದ್ವಿಪಕ್ಷೀಯ ಸಂಬಂಧಗಳ ಸಂಪೂರ್ಣ ವರ್ಣಪಟಲವನ್ನು ಇಬ್ಬರು ಸಚಿವರು ಪರಿಶೀಲಿಸಿದರು ಮತ್ತು ರಾಜಕೀಯ, ರಕ್ಷಣೆ ಮತ್ತು ಭದ್ರತೆ, ಕಡಲ, ವ್ಯಾಪಾರ ಮತ್ತು ಹೂಡಿಕೆ, ಔಷಧ ಮತ್ತು ಆರೋಗ್ಯ ರಕ್ಷಣೆ, ಡಿಜಿಟಲ್, ಇಂಧನ, ಸಂಪರ್ಕ, ಬಾಹ್ಯಾಕಾಶ, ಶಿಕ್ಷಣ, ಕಾನ್ಸುಲರ್ ಮತ್ತು ಸಂಸ್ಕೃತಿ ಕ್ಷೇತ್ರಗಳು ಮತ್ತು ಜನರಿಂದ ಜನರಿಗೆ ವಿನಿಮಯಗಳಲ್ಲಿ ಸಹಕಾರವನ್ನು ಮತ್ತಷ್ಟು ಬಲಪಡಿಸುವ ಮಾರ್ಗಗಳ ಕುರಿತು ಚರ್ಚಿಸಿದರು.

"8ನೇ ಭಾರತ–ಇಂಡೋನೇಷ್ಯಾ ಜಂಟಿ ಆಯೋಗದ ಸಭೆಯ ಅಧ್ಯಕ್ಷತೆಯನ್ನು ವಿದೇಶಾಂಗ ಸಚಿವ ಸುಗಿಯೊನೊ ಅವರೊಂದಿಗೆ ವಹಿಸಿಕೊಳ್ಳಲು ಸಂತೋಷವಾಗುತ್ತಿದೆ" ಎಂದು ಜೈಶಂಕರ್ ಹೇಳಿದರು. ಇತ್ತೀಚಿನ ವರ್ಷಗಳಲ್ಲಿ ನಮ್ಮ ಸಮಗ್ರ ಕಾರ್ಯತಂತ್ರದ ಪಾಲುದಾರಿಕೆಯು ಬಲವಾದ ಬೆಳವಣಿಗೆಗೆ ಸಾಕ್ಷಿಯಾಗಿದೆ. ನಮ್ಮ ರಾಜಕೀಯ, ರಕ್ಷಣೆ ಮತ್ತು ಭದ್ರತೆ, ಸಮುದ್ರ ಮತ್ತು ಸಾಗಣೆ, ವ್ಯಾಪಾರ, ಫಿನ್‌ಟೆಕ್, ಆರೋಗ್ಯ, ಔಷಧಗಳು, ರಸಗೊಬ್ಬರ, ನಿರ್ಣಾಯಕ ಖನಿಜಗಳು ಹಾಗೂ ಪ್ರವಾಸೋದ್ಯಮ, ಶಿಕ್ಷಣ ಮತ್ತು ಸಾಂಸ್ಕೃತಿಕ ಸಹಕಾರದ ಕುರಿತು ಗಣನೀಯ ಚರ್ಚೆಗಳನ್ನು ನಡೆಸಲಾಯಿತು." ಇಬ್ಬರೂ ಸಚಿವರು ಪ್ರಾದೇಶಿಕ ಮತ್ತು ಜಾಗತಿಕ ಬೆಳವಣಿಗೆಗಳ ಕುರಿತು ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಂಡರು, ವಿಕಸನಗೊಳ್ಳುತ್ತಿರುವ ಇಂಡೋ–ಪೆಸಿಫಿಕ್ ಭೂದೃಶ್ಯದ ನಡುವೆ ವರ್ಧಿತ ಬಹುಪಕ್ಷೀಯ ಸಮನ್ವಯ ಮತ್ತು ಬಲವಾದ ಭಾರತ–ಆಸಿಯಾನ್ ನಿಶ್ಚಿತಾರ್ಥದ ಪ್ರಾಮುಖ್ಯತೆಯನ್ನು ಒತ್ತಿ ಹೇಳಿದರು. ದ್ವಿಪಕ್ಷೀಯ ಸಂಬಂಧಗಳ ಭವಿಷ್ಯದ ಪಥದ ಬಗ್ಗೆ ಸುಗಿಯೊನೊ ಆಶಾವಾದವನ್ನು ವ್ಯಕ್ತಪಡಿಸಿದರು ಮತ್ತು ಪ್ರಧಾನಿ ನರೇಂದ್ರ ಮೋದಿಯವರ ಉದ್ದೇಶಿತ ಜಕಾರ್ತಾ ಭೇಟಿಯನ್ನು ಸ್ವಾಗತಿಸಿದರು. "ಪ್ರಧಾನಿ ನರೇಂದ್ರ ಮೋದಿಯವರ ಮುಂಬರುವ ಜಕಾರ್ತಾ ಭೇಟಿಯನ್ನು ಎದುರು ನೋಡುತ್ತಿದ್ದೇನೆ. ಈ ಭೇಟಿಯು ನಮ್ಮ ಸಹಕಾರವನ್ನು ಮತ್ತಷ್ಟು ಗಾಢವಾಗಿಸಲು ಮತ್ತು ನಮ್ಮ ಜನರಿಗೆ ಸ್ಪಷ್ಟ ಪ್ರಯೋಜನಗಳನ್ನು ನೀಡಲು ಒಂದು ಪ್ರಮುಖ ಅವಕಾಶವಾಗಿದೆ" ಎಂದು ಹೇಳಿದ್ದಾರೆ. ಇಂಡೋನೇಷ್ಯಾ ಭಾರತದ ಆಕ್ಟ್ ಈಸ್ಟ್ ನೀತಿಯ ಪ್ರಮುಖ ಆಧಾರಸ್ತಂಭವಾಗಿದೆ. ಆಳವಾದ ನಾಗರಿಕ ಸಂಪರ್ಕಗಳಲ್ಲಿ ಬೇರೂರಿರುವ ಭಾರತ–ಇಂಡೋನೇಷ್ಯಾ ಸಮಗ್ರ ಕಾರ್ಯತಂತ್ರದ ಪಾಲುದಾರಿಕೆಯು ಸ್ಥಾಪಿತ ಮತ್ತು ಹೊಸ ಸಹಕಾರ ಕ್ಷೇತ್ರಗಳಲ್ಲಿ ಬಲದಿಂದ ಬಲಕ್ಕೆ ಬೆಳೆಯುತ್ತಲೇ ಇದೆ.



ರಾಜೌರಿ ಪ್ರದೇಶದಲ್ಲಿ ಕಠಿಣ ಭೂಪ್ರದೇಶ ಮತ್ತು ಪ್ರತಿಕೂಲ ಹವಾಮಾನ ಪರಿಸ್ಥಿತಿಗಳಲ್ಲಿ ಕಾರ್ಯಾಚರಣೆಯ ಕರ್ತವ್ಯ ನಿರ್ವಹಿಸುವಾಗ ಪ್ರಾಣತ್ಯಾಗ ಮಾಡಿದ ಲೆಫ್ಟಿನೆಂಟ್ ಬೀರೇಶ್ವರ ಗೋಸ್ವಾಮಿ ಅವರಿಗೆ ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಭಾನುವಾರ ಜಮ್ಮುವಿನ ವಾಯುಪಡೆ ನಿಲ್ದಾಣದಲ್ಲಿ ಅಂತಿಮ ನಮನ ಸಲ್ಲಿಸಿದರು.

# ಮಾತುಕತೆ ಮೂಲಕವೇ ಗಡಿವಿವಾದ ಇತ್ಯರ್ಥ
## ನೇಪಾಳ ವಿದೇಶಾಂಗ ಸಚಿವ ಶಿಶಿರ್ ಖನಾಲ್ ಇಂಗಿತ

ಭಾರತ ಮತ್ತು ನೇಪಾಳ ನಡುವಿನ ಗಡಿ ವಿವಾದವನ್ನು ರಾಜತಾಂತ್ರಿಕ ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳಲು ನೇಪಾಳ ಬಯಸಿದೆ ಎಂದು ಆ ದೇಶದ ವಿದೇಶಾಂಗ ಸಚಿವ ಶಿಶಿರ್ ಖನಾಲ್ ಭಾನುವಾರ ಹೇಳಿದ್ದಾರೆ. ಎರಡೂ ರಾಷ್ಟ್ರಗಳು ಮುಕ್ತ ಮನಸ್ಸಿನಿಂದ ಮಾತುಕತೆ ನಡೆಸಿದರೆ, ಯಾವುದೇ ಸಮಸ್ಯೆ ದೊಡ್ಡದಲ್ಲ ಮತ್ತು ಯಾವುದೇ ಗಡಿ ವಿವಾದ ಸಂಕೀರ್ಣವಾಗಿರುವುದಿಲ್ಲ ಎಂದು ಅವರು ಅಭಿಪ್ರಾಯಪಟ್ಟರು.21ನೇ ಶತಮಾನದ ಭೂರಾಜಕೀಯದ ವಿಕೃತ ಹಾಗೂ ಅತಿಸೂಕ್ಷ್ಮ ದೃಷ್ಟಿಕೋನದಿಂದ ಭಾರತವನ್ನು ನೋಡುವುದನ್ನು ಕಠ್ಮಂಡುವಿನ ಹೊಸ ಸರ್ಕಾರ ನಿರಾಕರಿಸಿದ್ದು, ಬದಲಾಗಿ ಉಭಯ ರಾಷ್ಟ್ರಗಳ ಸಮಗ್ರ ಅಭಿವೃದ್ಧಿ ಮತ್ತು ಸಮೃದ್ಧಿಗಾಗಿ ಪರಸ್ಪರ ಲಾಭದಾಯಕ ಸಂಬಂಧವನ್ನು ನಿರ್ಮಿಸಲು ಬಯಸುತ್ತಿದೆ ಎಂದು ಖನಾಲ್ ಹೇಳಿದರು.

ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರೊಂದಿಗೆ ವ್ಯಾಪಕ ಮಟ್ಟದ ಮಾತುಕತೆ ನಡೆಸಿದ ಒಂದು ದಿನದ ಬಳಿಕ ನಡೆದ ಮಾಧ್ಯಮ ಸಂವಾದದಲ್ಲಿ ಅವರು ಈ ಹೇಳಿಕೆ ನೀಡಿದ್ದಾರೆ.ಉಭಯ ರಾಷ್ಟ್ರಗಳ ದ್ವಿಪಕ್ಷೀಯ ಸಂಬಂಧವನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ಶಿಶಿರ್ ಖನಾಲ್ ಶುಕ್ರವಾರ ಮೂರು ದಿನಗಳ ದೆಹಲಿ ಪ್ರವಾಸ ಆರಂಭಿಸಿದ್ದರು. ಆದರೆ, ಇತ್ತೀಚೆಗೆ ನೇಪಾಳದ ಪ್ರಧಾನಿ ಬಲೆಂದ್ರ ಶಾ ಅವರು ಭಾರತ–ನೇಪಾಳ ಗಡಿ ವಿವಾದದ ಕುರಿತು ನೀಡಿದ್ದ ಹೇಳಿಕೆಗಳಿಂದ ಉಂಟಾದ ರಾಜಕೀಯ ಚರ್ಚೆಯ ನಡುವೆಯೇ ಈ ಭೇಟಿ ನಡೆದಿತ್ತು.

"ನಾವು ಮುಕ್ತ ಮನಸ್ಸಿನಿಂದ ಮಾತುಕತೆ ನಡೆಸಿದರೆ ಯಾವುದೇ ಸಮಸ್ಯೆ ದೊಡ್ಡದಲ್ಲ, ಯಾವುದೇ ಗಡಿ ವಿವಾದವೂ ಅಷ್ಟು ಸಂಕೀರ್ಣವಲ್ಲ. ನಾವು ಭಾರತವನ್ನು ಮುಕ್ತ ಮನಸ್ಸಿನಿಂದ, ಸ್ಪಷ್ಟ ದೃಷ್ಟಿಕೋನದಿಂದ ಮತ್ತು ಒಂದೇ ಪಾರದರ್ಶಕ ಉದ್ದೇಶದೊಂದಿಗೆ ನೋಡುತ್ತೇವೆ. ನಮ್ಮ ಮುಖ್ಯ ಗುರಿ ನೇಪಾಳದ ಆರ್ಥಿಕ ಪರಿವರ್ತನೆಯಾಗಿದೆ. ಅತಿಯಾದ ರಾಷ್ಟ್ರವಾದಿ ಭಾವನೆಗಳನ್ನು ಪ್ರಚೋದಿಸುವ ಬದಲು, ಸಮಸ್ಯೆಗಳನ್ನು ಶಾಂತಿಯುತವಾಗಿ ಹಾಗೂ ಮಾಹಿತಿಯ ಆಧಾರದ ಮೇಲೆ



ಪರಿಹರಿಸುವ ಮಾರ್ಗವನ್ನು ನಾವು ಅನುಸರಿಸುತ್ತಿದ್ದೇವೆ" ಎಂದು ಖನಾಲ್ ಹೇಳಿದರು. ಇದೇ ವೇಳೆ, ಭಾರತದ ಆರ್ಥಿಕ ಬೆಳವಣಿಗೆಯನ್ನು ಅವರು ಶ್ಲಾಘಿಸಿದರು. "ಗಡಿಯಾಚೆ ನಾವು ಉದಯೋನ್ಮುಖ ಭಾರತವನ್ನು ನೋಡುತ್ತಿದ್ದೇವೆ. ಜಾಗತಿಕ ವೇದಿಕೆಯಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ತಂತ್ರಜ್ಞಾನ ಮತ್ತು ಆರ್ಥಿಕ ಶಕ್ತಿಯಾಗಿ ಭಾರತ ತನ್ನನ್ನು ತಾನು ಯಶಸ್ವಿಯಾಗಿ ಮರುರೂಪಿಸಿಕೊಂಡಿದೆ," ಎಂದು ಅವರು ಹೇಳಿದರು. "ಮಹತ್ವಾಕಾಂಕ್ಷೆ ಮತ್ತು ಅತ್ಯಾಧುನಿಕ ತಂತ್ರಜ್ಞಾನದಿಂದ ಕೂಡಿದ ಈ ಹೊಸ ಭಾರತದೊಂದಿಗೆ ಕೈಜೋಡಿಸಲು ನಾವು ಬಯಸುತ್ತೇವೆ. ಅದೇ ಸಮಯದಲ್ಲಿ, ನಾವು ಮಹತ್ವಾಕಾಂಕ್ಷೆಯ ನೇಪಾಳದ ಶಕ್ತಿ ಮತ್ತು ಉತ್ಸಾಹವನ್ನು ತರುತ್ತಿದ್ದೇವೆ," ಎಂದು ಶಿಶಿರ್ ಖನಾಲ್ ಹೇಳಿದ್ದಾರೆ.

# ಯುವಕರು ನಿಜವಾದ ಶಕ್ತಿ, ದೇಶದ ಭವಿಷ್ಯ ದಾರಿ ತಪ್ಪಲ್ಲ: ರಾಹುಲ್

**ನವದೆಹಲಿ, ಜೂ.7:** ಸಿಬಿಎಸ್‌ಇ ಮತ್ತು ಸಿಒಇಎಂಪಿಟಿ ನಡುವಿನ 'ಒಡಂಬಡಿಕೆ'ಯನ್ನು ಬಹಿರಂಗಪಡಿಸಿದ್ದಕ್ಕಾಗಿ ಕಾಂಗ್ರೆಸ್ ನಾಯಕ ರಾಹುಲ್ ಗಾಂದಿ ಅವರು ವಿದ್ಯಾರ್ಥಿಗಳಾದ ಸಾರ್ಥಕ್ ಸಿದ್ಧಾಂತ್ ಮತ್ತು ಅವರ ಸಹವರ್ತಿ ನಿಸರ್ಗ ಅಧಿಕಾರಿ ಅವರನ್ನು ಶ್ಲಾಘಿಸಿದ್ದಾರೆ.

ಭಾನುವಾರ ಮಾತನಾಡಿದರುವ ಅವರು, ಪ್ರಧಾನಿ ನರೇಂದ್ರ ಮೋದಿ ಯುವಕರು ರೀಲ್‌ಗಳನ್ನು ಮಾಡುವುದನ್ನು ಮತ್ತು 'ಪಕೋಡ' ಕರಿಯುವುದನ್ನು ಮುಂದುವರಿಸಬೇಕೆಂದು ಬಯಸುತ್ತಾರೆ. ಆದರೆ, ಈ ವಿದ್ಯಾರ್ಥಿಗಳು ವಾಸ್ತವವಾಗಿ ತನಿಖೆ ನಡೆಸಿ, ಪ್ರಮುಖ ವಿಷಯಗಳಿಗೆ ಉತ್ತರಗಳನ್ನು ಕಂಡುಕೊಂಡಿದ್ದಾರೆ ಎಂದಿದ್ದಾರೆ.

ವಿದ್ಯಾರ್ಥಿ ಸಾರ್ಥಕ್ ಸಿದ್ಧಾಂತ್ ಅವರ ಭೇಟಿಯ ವಿಡಿಯೋವನ್ನು ತಮ್ಮ ಎಕ್ಸ್‌ನಲ್ಲಿ ಹಂಚಿಕೊಂಡಿರುವ ರಾಹುಲ್‌ಗಾಂಧಿ, ಸಿಬಿಎಸ್‌ಇಯ 12ನೇ ತರಗತಿಯ ಬೋರ್ಡ್ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಲು ಬಳಸುವ ಆನ್‌ಸ್ಕ್ರೀನ್ ಮಾರ್ಕಿಂಗ್ ಸಿಸ್ಟಮ್ ಕೆಲಸವನ್ನು ನಿರ್ವಹಿಸಲು ಮಾರಾಟಗಾರರ ಆಯ್ಕೆ ಪ್ರಕ್ರಿಯೆಯಲ್ಲಿ ಅಕ್ರಮಗಳು ನಡೆದಿವೆ ಎಂದು ಸಾರ್ಥಕ್ ಆರೋಪಿಸಿದ್ದಾರೆ. ವಿದ್ಯಾರ್ಥಿಗಳ ಮನಸ್ಥಿತಿ, ಧೈರ್ಯ ಮತ್ತು ತತ್ವಗಳ ವಿಷಯದಲ್ಲಿ ಅವರು ಯಾರಿಗೂ ಕಡಿಮೆಯಿಲ್ಲ. ದೇಶದ ಪ್ರಮುಖ ಮಾಧ್ಯಮ ಸಂಸ್ಥೆಗಳು ಮತ್ತು ತನಿಖಾ ಪತ್ರಕರ್ತರು ಮಾಡಲಾಗದ ಸಾಧನೆಯನ್ನು ಸಾರ್ಥಕ್ ಮತ್ತು ನಿಸರ್ಗ್ ಮಾಡಿದ್ದಾರೆ: ಅವರು ಸಿಬಿಎಸ್‌ಇ ಮತ್ತು ಸಿಒಇಎಂಪಿಟಿ ನಡುವಿನ ಒಪ್ಪಂದವನ್ನು ರಾಷ್ಟ್ರದ ಮುಂದೆ ಬಹಿರಂಗಪಡಿಸಿದ್ದಾರೆ. ಯುವಕರ ಈ ಗೆಲುವು ನಿಜವಾದ ಅರ್ಥದಲ್ಲಿ ಸರ್ಕಾರದ ಸೋಲು ಎಂದು ರಾಹುಲ್‌ಗಾಂಧಿ



ಹೇಳಿದ್ದಾರೆ. 'ಇದು ಭಾರತದ ನಿಜವಾದ ಯುವ ಶಕ್ತಿ. ನೆನಪಿಡಿ, ದೇಶದ ಭವಿಷ್ಯವು ದಾರಿ ತಪ್ಪುವುದಿಲ್ಲ' ಎಂದು ಅವರು ಹೇಳಿದರು.

ಆನ್–ಸ್ಕ್ರೀನ್ ಅಂಕ ವ್ಯವಸ್ಥೆ ವಿವಾದದ ನಂತರ ಸರ್ಕಾರ ಇಬ್ಬರು ಉನ್ನತ ಸಿಬಿಎಸ್‌ಇ ಅಧಿಕಾರಿಗಳನ್ನು ಹೊರಹಾಕಿದೆ. ಆದರೆ, ವಿರೋಧ ಪಕ್ಷ ಕಾಂಗ್ರೆಸ್ ಇದನ್ನು ಕಣ್ಣೊರೆಸುವ ತಂತ್ರ ಎಂದು ದೂರಿದೆ. ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರನ್ನು ವಜಾಗೊಳಿಸಬೇಕು ಮತ್ತು ಸ್ವತಂತ್ರ ನ್ಯಾಯಾಂಗ ತನಿಖೆಗೆ ತಕ್ಷಣ ಆದೇಶಿಸಬೇಕು ಎಂದು ರಾಹುಲ್ ಗಾಂಧಿ ಒತ್ತಾಯಿಸಿದ್ದಾರೆ.

ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ (CBSE) 12ನೇ ತರಗತಿಯ ಪತ್ರಿಕೆಗಳನ್ನು ಪರಿಶೀಲಿಸುವ ಸಾಂಪ್ರದಾಯಿಕ ವಿಧಾನವನ್ನು ಡಿಜಿಟಲ್ ಮೌಲ್ಯಮಾಪನದೊಂದಿಗೆ ಆನ್–ಸ್ಕ್ರೀನ್ ಮಾರ್ಕಿಂಗ್ ವ್ಯವಸ್ಥೆಗೆ ಬದಲಿಸಿತು. ಆದಾಗ್ಯೂ, ಕೆಲವು 12ನೇ ತರಗತಿಯ ವಿದ್ಯಾರ್ಥಿಗಳು ಮಂಡಳಿಯು ಅಪ್ಲೋಡ್ ಮಾಡಿದ ಉತ್ತರ ಪತ್ರಿಕೆಗಳ ಸ್ಕ್ಯಾನ್ ಮಾಡಿದ ಪ್ರತಿಗಳು ತಮ್ಮ ಕೈಬರಹಕ್ಕೆ ಹೊಂದಿಕೆಯಾಗುವುದಿಲ್ಲ ಎಂದು ಆರೋಪಿಸಿದ ನಂತರ ವಿವಾದ ಭುಗಿಲೆದ್ದಿತು.

# ಕಂದಕಕ್ಕೆ ಬಿದ್ದು ಸೇನಾಧಿಕಾರಿ ಹುತಾತ್ಮ

**ಶ್ರೀನಗರ:** ಜಮ್ಮು ಮತ್ತು ಕಾಶ್ಮೀರದ ರಾಜೌರಿ ಜಿಲ್ಲೆಯಲ್ಲಿ ನಡೆಯುತ್ತಿರುವ ಭಯೋತ್ಪಾದನಾ ನಿಗ್ರಹ ಕಾರ್ಯಾಚರಣೆಯ ಸಮಯದಲ್ಲಿ ಕಡಿದಾದ ಪರ್ವತದ ತುದಿಯಿಂದ ಜಾರಿ ಆಳವಾದ ಕಂದಕಕ್ಕೆ ಬಿದ್ದು ಸೇನಾ ಅಧಿಕಾರಿ ಹುತಾತ್ಮರಾಗಿದ್ದಾರೆ.ಲೆಫ್ಟಿನೆಂಟ್ ಬೀರೇಶ್ವರ್ ಗೋಸ್ವಾಮಿ ಉಗ್ರರ ವಿರುದ್ಧದ ಕಾರ್ಯಾಚರಣೆ ವೇಳೆ ಮೃತಪಟ್ಟಿದ್ದಾರೆ. 16 ನೇ ದಿನದ ಆಪರೇಷನ್ ಶೆರಾವಲಿ ಕಾರ್ಯಾಚರಣೆ ವೇಳೆ ಈ ಅವಘಡ ಸಂಭವಿಸಿದೆ. ಸೈನಿಕರ ತಂಡವನ್ನು ಮುನ್ನಡೆಸುತ್ತಿದ್ದ ಲೆಫ್ಟಿನೆಂಟ್ ಕಾಲು ಜಾರಿ ಕಮರಿಗೆ ಬಿದ್ದರು. ತಕ್ಷಣ ಜೊತೆಯಲ್ಲಿದ್ದವರು ರಕ್ಷಣಾ ಕಾರ್ಯಾಚರಣೆ ನಡೆಸಿದರು. ಆದರೆ ಗಂಭೀರವಾಗಿ ಗಾಯಗೊಂಡಿದ್ದ ಅವರು ಸಾವನ್ನಪ್ಪಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬೀರೇಶ್ವರ್ ಗೋಸ್ವಾಮಿ ಸಾವಿನ ಬಗ್ಗೆ ವೈಟ್ ನೈಟ್ ಕಾರ್ಪ್ಸ್ ಸಂತಾಪ ಸೂಚಿಸಿದೆ. ವೈಟ್ ನೈಟ್ ಕಾರ್ಪ್ಸ್‌ನ ಜನರಲ್ ಆಫೀಸರ್ ಕಮಾಂಡಿಂಗ್ ಲೆಫ್ಟಿನೆಂಟ್ ಜನರಲ್ ಪಿಕೆ ಮಿಶ್ರಾ ಮತ್ತು ಎಲ್ಲಾ ಶ್ರೇಣಿಯ ಅಧಿಕಾರಿಗಳು ಗೌರವ ಸಲ್ಲಿಸಿ, ಅವರ ತ್ಯಾಗವನ್ನು ಸೈನ್ಯಕ್ಕೆ ಮರೆಯಲಾಗದ ಸ್ಫೂರ್ತಿ ಎಂದು ಬಣ್ಣಿಸಿದ್ದಾರೆ.

ಆಪರೇಷನ್ ಶೆರಾವಲಿ ಮೇ ಅಂತ್ಯದಲ್ಲಿ ಪ್ರಾರಂಭವಾದ ಆಪರೇಷನ್ ಶೆರಾವಲಿ, ರಾಜೌರಿಯ ಡೋರಿಮಾಲ್–ಗಂಭೀರ್ ಮೊಘಲನ್ ಪಟ್ಟಿಯ ದಟ್ಟ ಕಾಡುಗಳಲ್ಲಿ ನಡೆಯುತ್ತಿದೆ. ಅರಣ್ಯ ಪ್ರದೇಶದಲ್ಲಿ ಎರಡರಿಂದ ಮೂರು ಪಾಕಿಸ್ತಾನಿ ಭಯೋತ್ಪಾದಕರು ಅಡಗಿದ್ದಾರೆ ಎಂಬ ಮಾಹಿತಿ ಮೇರೆಗೆ ಈ ಕಾರ್ಯಾಚರಣೆ ಪ್ರಾರಂಭಿಸಲಾಯಿತು. ಗುಪ್ತಚರ ಮಾಹಿತಿಯ ಪ್ರಕಾರ ಫೌಜಿ ಎಂಬ ಕೋಡ್–ಹೆಸರಿನ ಉನ್ನತ ಕಮಾಂಡರ್ ಸೇರಿದಂತೆ ಮೂವರು ಪಾಕಿಸ್ತಾನಿ ಭಯೋತ್ಪಾದಕರು ಪರ್ವತ ಪ್ರದೇಶದಲ್ಲಿ ಅಡಗಿಕೊಂಡಿದ್ದಾರೆ ಎನ್ನಲಾಗಿದೆ.

ಈ ಕಡಿದಾದ ಪ್ರದೇಶವನ್ನು ಸೈನಿಕರು ಸುತ್ತುವರಿದಿದ್ದಾರೆ. ಉಗ್ರರನ್ನು ಬೇಟೆಯಾಡಲು ಡ್ರೋನ್ ಮತ್ತು ಟ್ರ್ಯಾಕರ್ ಶ್ವಾನಗಳನ್ನು ಸೈನಿಕರು ಬಳಕೆ ಮಾಡುತ್ತಿದ್ದಾರೆ.

# ದೆಹಲಿಯಲ್ಲಿ ಇಂದು ಇಂಡಿಯಾ ಕೂಟದ ಸಭೆ: 23 ಪಕ್ಷಗಳು ಭಾಗಿ

**ನವದೆಹಲಿ, ಜೂ.7:** ಜೂನ್ 8 ರಂದು ನವದೆಹಲಿಯ ಕಾನ್ಸ್ಟಿಟ್ಯೂಷನ್ ಕ್ಲಬ್ನಲ್ಲಿ ನಡೆಯಲಿರುವ ಇಂಡಿಯಾ ಮೈತ್ರಿಕೂಟ ಅಥವಾ ಇಂಡಿಯಾ ಜನಬಂಧನ್ ಸಭೆಯಲ್ಲಿ 23 ರಾಜಕೀಯ ಪಕ್ಷಗಳು ಭಾಗವಹಿಸುವುದನ್ನು ದೃಢಪಡಿಸಿವೆ ಎಂದು ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್ ಭಾನುವಾರ ಹೇಳಿದ್ದಾರೆ.

ನರೇಂದ್ರ ಮೋದಿ ಸರ್ಕಾರವು ಪ್ರಜಾಪ್ರಭುತ್ವ ಸಂಸ್ಥೆಗಳು, ಸಾಂವಿಧಾನಿಕ ಮೌಲ್ಯಗಳು ಮತ್ತು ನಾಗರಿಕರ ಹಕ್ಕುಗಳ ಮೇಲೆ ನಡೆಸುತ್ತಿರುವ ದಾಳಿಗಳ ವಿರುದ್ಧ ಒಗ್ಗೂಡಿದ ವಿರೋಧ ಪಕ್ಷಗಳ ವ್ಯಾಪಕ ಶ್ರೇಣಿಯನ್ನು ಒಟ್ಟುಗೂಡಿಸುವ ಸಭೆ ಮಧ್ಯಾಹ್ನ 12 ಗಂಟೆಗೆ ನಡೆಯಲಿದೆ ಎಂದು ರಮೇಶ್ ಹೇಳಿದರು.

ಜೂನ್ 8 ರಂದು ಸೋಮವಾರ ಮಧ್ಯಾಹ್ನ 12 ಗಂಟೆಗೆ ನವದೆಹಲಿಯ ಕಾನ್ಸ್ಟಿಟ್ಯೂಷನ್ ಕ್ಲಬ್‌ನಲ್ಲಿ ನಡೆಯಲಿರುವ ಇಂಡಿಯಾ ಜನಬಂಧನ್ ಸಭೆಯಲ್ಲಿ 23 ರಾಜಕೀಯ ಪಕ್ಷಗಳು ಭಾಗವಹಿಸುವುದನ್ನು ದೃಢಪಡಿಸಿವೆ ಎಂದು ರಮೇಶ್ ಹೇಳಿದರು.



ಕೆಲವು ಪಕ್ಷಗಳು ಸಭೆಯಲ್ಲಿ ಭಾಗವಹಿಸಲು ಸಾಧ್ಯವಾಗುವುದಿಲ್ಲವಾದರೂ, ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ನೀತಿಗಳು ಮತ್ತು ಕಾರ್ಯಗಳಿಗೆ ತಮ್ಮ ವಿರೋಧವನ್ನು ತಿಳಿಸಿವೆ ಎಂದು ಅವರು ಹೇಳಿದರು. ಈ ನಿರ್ದಿಷ್ಟ ಸಭೆಯಲ್ಲಿ ಭಾಗವಹಿಸಲು ಕೆಲವು ಪಕ್ಷಗಳು ತಮ್ಮದೇ ಆದ ಕಾರಣಗಳಿಗಾಗಿ ಅಸಮರ್ಥತೆಯನ್ನು ವ್ಯಕ್ತಪಡಿಸಿವೆ – ಅವರು ಮೋದಿ ಸರ್ಕಾರದ ನೀತಿಗಳು ಮತ್ತು ಕ್ರಮಗಳಿಗೆ ತಮ್ಮ ಬಲವಾದ ವಿರೋಧವನ್ನು ವ್ಯಕ್ತಪಡಿಸಿದ್ದರೂ ಸಹ," ಎಂದು ರಮೇಶ್ ಹೇಳಿದರು.

ಸರ್ಕಾರವು "ಲಕ್ಷಾಂತರ ಭಾರತೀಯರ ಮತದಾನದ ಹಕ್ಕನ್ನು ಕಸಿದುಕೊಳ್ಳುತ್ತಿದೆ", "ಪ್ರತಿದಿನ ಸಂವಿಧಾನದ ಮೇಲೆ ದಾಳಿ ಮಾಡುತ್ತಿದೆ" ಮತ್ತು "ತನಿಖಾ ಸಂಸ್ಥೆಗಳ ಮೂಲಕ ವಿರೋಧ ಪಕ್ಷದ ನಾಯಕರ ಮೇಲೆ ದಾಳಿ ಮಾಡುತ್ತಿದೆ" ಎಂದು ಕಾಂಗ್ರೆಸ್ ನಾಯಕರು ಆರೋಪಿಸಿದರು. ಕೇಂದ್ರವು ಜೀವನೋಪಾಯಕ್ಕೆ ಹಾನಿ ಮಾಡುತ್ತಿದೆ, ಹಣದುಬ್ಬರವನ್ನು ಹೆಚ್ಚಿಸುತ್ತಿದೆ, ಯುವಜನರಿಗೆ ಉದ್ಯೋಗಾವಕಾಶಗಳನ್ನು ದುರ್ಬಲಗೊಳಿಸುತ್ತಿದೆ, ಹೂಡಿಕೆ ವಾತಾವರಣಕ್ಕೆ ಹಾನಿ ಮಾಡುತ್ತಿದೆ ಮತ್ತು ತನ್ನ ವಿದೇಶಾಂಗ ನೀತಿಯ ಮೂಲಕ ರಾಷ್ಟ್ರೀಯ ಹಿತಾಸಕ್ತಿಗಳನ್ನು ರಾಜಿ ಮಾಡಿಕೊಳ್ಳುತ್ತಿದೆ ಎಂದು ಅವರು ಆರೋಪಿಸಿದರು.

ರಾಜಕೀಯ ಮತ್ತು ಚುನಾವಣಾ ಯುದ್ಧಗಳ ಸರಣಿಗೆ ಮುಂಚಿತವಾಗಿ ಸಮನ್ವಯವನ್ನು ಬಲಪಡಿಸಲು ವಿರೋಧ ಪಕ್ಷಗಳ ನವೀಕೃತ ಪ್ರಯತ್ನಗಳ ಮಧ್ಯೆ ಈ ಸಭೆ ನಡೆಯುತ್ತಿದೆ. ರಾಷ್ಟ್ರೀಯವಾಗಿ ಬಿಜೆಪಿಯನ್ನು ಸವಾಲು ಮಾಡಲು ಪ್ರಯತ್ನಿಸುತ್ತಿರುವ ವಿರೋಧ ಪಕ್ಷಗಳ ಒಕ್ಕೂಟವಾಗಿ 2023 ರಲ್ಲಿ ರೂಪುಗೊಂಡ ಭಾರತ ಮೈತ್ರಿಕೂಟವು ಸಾಂವಿಧಾನಿಕ ಸಂಸ್ಥೆಗಳು, ಒಕ್ಕೂಟ ಮತ್ತು ಪ್ರಜಾಪ್ರಭುತ್ವ ಪ್ರಕ್ರಿಯೆಗಳನ್ನು ರಕ್ಷಿಸಲು ಬದ್ಧವಾಗಿರುವ ವೇದಿಕೆಯಾಗಿ ತನ್ನನ್ನು ತಾನು ಬಿಂಬಿಸಿಕೊಳ್ಳುವುದನ್ನು ಮುಂದುವರೆಸಿದೆ. ರಮೇಶ್ ತನ್ನ ಘಟಕ ಪಕ್ಷಗಳ ನಡುವಿನ ಭಿನ್ನಾಭಿಪ್ರಾಯಗಳ ಹೊರತಾಗಿಯೂ ಮೈತ್ರಿಕೂಟದ ಒಗ್ಗಟ್ಟನ್ನು ಒತ್ತಿ ಹೇಳಲು ಪ್ರಯತ್ನಿಸಿದರು, ವೈವಿಧ್ಯತೆಯು ಅದರ ಬಲವಾಗಿ ಉಳಿದಿದೆ ಎಂದು ಹೇಳಿದರು.

ಜೂ.8 ರಂದು ನಡೆಯಲಿರುವ ಸಭೆಯಲ್ಲಿ ಚುನಾವಣಾ ಪ್ರಕ್ರಿಯೆಗಳು, ಆಡಳಿತದ ಕಾಳಜಿಗಳು, ಆರ್ಥಿಕ ಸವಾಲುಗಳು ಮತ್ತು ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟ ಸರ್ಕಾರದ ವಿರುದ್ಧ ವಿರೋಧ ಪಕ್ಷದ ಭವಿಷ್ಯದ ಕಾರ್ಯತಂತ್ರ ಸೇರಿದಂತೆ ಹಲವಾರು ರಾಜಕೀಯ ವಿಷಯಗಳ ಕುರಿತು ಚರ್ಚಿಸುವ ನಿರೀಕ್ಷೆಯಿದೆ. ಭಾಗವಹಿಸುವ ಪಕ್ಷಗಳ ನಾಯಕರು ಪ್ರಜಾಪ್ರಭುತ್ವ ಸಂಸ್ಥೆಗಳು ಮತ್ತು ದೇಶಾದ್ಯಂತ ಸಾಮಾನ್ಯ ನಾಗರಿಕರ ಜೀವನದ ಮೇಲೆ ಪರಿಣಾಮ ಬೀರುತ್ತಿರುವ ಸಮಸ್ಯೆಗಳಿಗೆ ತಮ್ಮ ಪ್ರತಿಕ್ರಿಯೆಯನ್ನು ಸಂಘಟಿಸುವ ಮಾರ್ಗಗಳನ್ನು ಚರ್ಚಿಸುವ ಸಾಧ್ಯತೆಯಿದೆ.

# ಶ್ರೀಕ್ಷೇತ್ರ ಕೇಮಾರುಗೆ ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಭೇಟಿ



**ಮುಂಬಯಿ, ಜೂ.7:**ಮೂಡಬಿದಿರೆ ಇಲ್ಲಿನ ಸಾಂದೀಪನಿ ಸಾಧನಾಶ್ರಮ ಶ್ರೀಕ್ಷೇತ್ರ ಕೇಮಾರು ಇಲ್ಲಿಗೆ ಮಂಗಳೂರು ಸಂಸದರಾದ ಕ್ಯಾಪ್ಟನ್ ಬ್ರಿಜೇಶ್ ಚೌಟ ಅವರು ಭೇಟಿ ನೀಡಿದರು. ಅವರನ್ನು ಶ್ರೀಈಶ ವಿಠಲದಾಸ ಸ್ವಾಮೀಜಿ ಅವರು ಸ್ವಾಗತಿಸಿ ಆಶೀರ್ವದಿಸಿ ಗೌರವಿಸಿದರು. ಸಂಸದರು ಶ್ರೀಕ್ಷೇತ್ರ ಕೇಮಾರು ಹಾಗೂ ನವೀಕರಣವಾಗುತ್ತಿರುವ ಕೊಲ್ಲೂರು ಶಾಖಾ ಮಠದ ಅಭಿವೃದ್ಧಿಗೆ ಸಂಪೂರ್ಣ ಸಹಕಾರವನ್ನು ನೀಡುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಸುನಿಲ್ ಆಳ್ವ, ಮಂಡಲಾಧ್ಯಕ್ಷ ದಿನೇಶ್ ಪುತ್ರನ್, ಸಹಕಾರಿ ಧುರೀಣ ದಯಾನಂದ ಪೈ, ಯುವ ಮೋರ್ಚಾದ ಅಧ್ಯಕ್ಷ ಕುಮಾರ್‌ಪ್ರಸಾದ್, ಪ್. ಕಾರ್ಯದರ್ಶಿ ಭರತ್‌ಶೆಟ್ಟಿ, ಪಾಲಡ್ಕ ಗ್ರಾ.ಪಂ.ನ ಮಾಜಿ ಉಪಾಧ್ಯಕ್ಷ ಸುಕೇಶ್ ಶೆಟ್ಟಿ ಕೇಮಾರು, ಪುತ್ತಿಗೆ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ನಾಗೇಶ್ ಇರುವೈಲು, ಪ್ರಮುಖರಾದ ವಿಠಲ್ ಮುಲ್ಕಿ, ಸುದರ್ಶನ್ ಆಚಾರ್ಯ ಕೇಮಾರು, ಜೀವಂಧರ್ ಶೆಟ್ಟಿಗಾರ್, ಚಂದ್ರ ಪೂಜಾರಿ, ಶಿವಪ್ರಸಾದ್ ಶೆಟ್ಟಿ, ರಂಜಿತ್ ಕೋಟ್ಯಾನ್, ಹರೀಶ್ ಪೂಜಾರಿ, ಶಾಶ್ವತ್ ಪೂಜಾರಿ ಮತ್ತಿತರರು ಇದ್ದರು.

# 2800 ಹೊಸ ಇ–ಬಸ್ ಪರಿಚಯಿಸಲು ದೆಹಲಿ ಸರ್ಕಾರ ಸಜ್ಜು

**ನವದೆಹಲಿ, ಜೂ.7:** ಕೇಂದ್ರದ ಪಿಎಂ ಇ–ಡ್ರೈವ್ ಯೋಜನೆಯಡಿಯಲ್ಲಿ 2,800 ಹವಾನಿಯಂತ್ರಿತ ಲೋ–ಫ್ಲೋರ್ ಎಲೆಕ್ಟ್ರಿಕ್ ಬಸ್ಗಳನ್ನು ಯೋಜಿತವಾಗಿ ತೊಡಗಿಸಿಕೊಳ್ಳುವ ಮೂಲಕ ದೆಹಲಿ ಸರ್ಕಾರವು ರಾಷ್ಟ್ರ ರಾಜಧಾನಿಯ ಸಾರ್ವಜನಿಕ ಸಾರಿಗೆ ಜಾಲವನ್ನು ಬಲಪಡಿಸುವತ್ತ ಪ್ರಮುಖ ಹೆಜ್ಜೆ ಇಡಲು ಸಜ್ಜಾಗಿದೆ.

ದೆಹಲಿ ಸಾರಿಗೆ ಸಚಿವ ಡಾ. ಪಂಕಜ್ ಕುಮಾರ್ ಸಿಂಗ್ ಅವರ ಪ್ರಕಾರ, ಪ್ರಸ್ತಾವಿತ ಫ್ಲೀಟ್ 1,400 ಒಂಬತ್ತು ಮೀಟರ್ ಮತ್ತು 1,400 ಹನ್ನೆರಡು ಮೀಟರ್ ಎಲೆಕ್ಟ್ರಿಕ್ ಬಸ್‌ಗಳನ್ನು ಒಳಗೊಂಡಿದೆ. ಈ ಉಪಕ್ರಮವು ದೆಹಲಿಯಾದ್ಯಂತ ಸಾರ್ವಜನಿಕ ಸಾರಿಗೆಯ ಪ್ರವೇಶವನ್ನು ಸುಧಾರಿಸುವ ನಿರೀಕ್ಷೆಯಿದೆ, ವಿಶೇಷವಾಗಿ ನಗರದ ಬಾಹ್ಯ ಪ್ರದೇಶಗಳಲ್ಲಿ ಕೊನೆಯ ಮೈಲಿ ಸಂಪರ್ಕವನ್ನು ಹೆಚ್ಚಿಸುವ ಮೂಲಕ. ನಗರದಲ್ಲಿ ನಿಯೋಜಿಸಲಾದ ಒಂಬತ್ತು ಮೀಟರ್ ಎಲೆಕ್ಟ್ರಿಕ್ ಬಸ್‌ಗಳ ಕಾರ್ಯಾಚರಣೆಯ ಕಾರ್ಯಕ್ಷಮತೆಯನ್ನು ಪ್ರೋತ್ಸಾಹಿಸುವುದನ್ನು ಸಾರಿಗೆ ಇಲಾಖೆ ಗಮನಿಸಿದೆ, ವಿಶೇಷವಾಗಿ ಸ್ಥಳೀಯ ಮತ್ತು ಫೀಡರ್ ಸಾರಿಗೆ ಅವಶ್ಯಕತೆಗಳನ್ನು ಪೂರೈಸುವಲ್ಲಿ, ಕೊನೆಯ ಮೈಲಿ ಸಂಪರ್ಕವನ್ನು ಹೆಚ್ಚಿಸುತ್ತದೆ. ಈ ಅನುಭವದ ಆಧಾರದ ಮೇಲೆ, ಪ್ರಸ್ತಾವಿತ ಇಂಡಕ್ಷನ್ ಹೆಚ್ಚಿನ ಸಾಂದ್ರತೆಯ ಕಾರಿಡಾರ್ಗಳು ಮತ್ತು ನೆರೆಹೊರೆಯ ಸಂಪರ್ಕ ಅಗತ್ಯಗಳನ್ನು ಪೂರೈಸುವ ಸಾಮರ್ಥ್ಯವನ್ನು ಹೊಂದಿರುವ ಸಮತೋಲಿತ ಫ್ಲೀಟ್ ಅನ್ನು ರಚಿಸಲು ಪ್ರಯತ್ನಿಸುತ್ತದೆ. ನಗರದ ಸಾರ್ವಜನಿಕ ಸಾರಿಗೆ ಪಡೆಯನ್ನು ವಿಸ್ತರಿಸುವ ಮತ್ತು ಶೂನ್ಯ–ಹೊರಸೂಸುವಿಕೆ ಚಲನಶೀಲತೆ ಪರಿಹಾರಗಳ ಪಾಲನ್ನು ಹೆಚ್ಚಿಸುವ ರಾಜ್ಯ ಸರ್ಕಾರದ ವಿಶಾಲ ದೃಷ್ಟಿಕೋನದ ಭಾಗವಾಗಿ ಈ ಉಪಕ್ರಮವು ರೂಪುಗೊಂಡಿದೆ. 2028–29 ರ ವೇಳೆಗೆ ದೆಹಲಿಯ ಒಟ್ಟಾರೆ ಸಾರ್ವಜನಿಕ ಸಾರಿಗೆ ಬಸ್ ಪಡೆಯನ್ನು ಸುಮಾರು 14,000 ಬಸ್ಗಳಿಗೆ ವಿಸ್ತರಿಸುವ ಗುರಿಯನ್ನು ಸರ್ಕಾರ ಹೊಂದಿದೆ, ಇದು ಸೇವಾ ವ್ಯಾಪ್ತಿಯನ್ನು ಹೆಚ್ಚಿಸುತ್ತದೆ ಮತ್ತು ರಾಷ್ಟ್ರೀಯ ರಾಜಧಾನಿ ಪ್ರದೇಶದಾದ್ಯಂತ ಪ್ರಯಾಣಿಕರಿಗೆ ಹೆಚ್ಚಿನ ಪ್ರವೇಶವನ್ನು ನೀಡುತ್ತದೆ. ಪ್ರಸ್ತುತ, ದೆಹಲಿಯು ಸುಮಾರು 4,300 ಎಲೆಕ್ಟ್ರಿಕ್ ಬಸ್ಗಳನ್ನು ಕಾರ್ಯಾಚರಣೆಯಲ್ಲಿ ಹೊಂದಿದೆ, ಇದು ದೇಶದ ಅತಿದೊಡ್ಡ ಎಲೆಕ್ಟ್ರಿಕ್ ಬಸ್ ಪಡೆಯಲ್ಲಿ ಒಂದಾಗಿದೆ. ಈ ವರ್ಷದ ಅಂತ್ಯದ ವೇಳೆಗೆ, ಸರ್ಕಾರವು ಈ ಸಂಖ್ಯೆಯನ್ನು ಸುಮಾರು 7500 ಇ–ಬಸ್‌ಗಳಿಗೆ ಹೆಚ್ಚಿಸುವ ಗುರಿಯನ್ನು ಹೊಂದಿದೆ, ಇದು ಸ್ವಚ್ಛ ಸಾರ್ವಜನಿಕ ಸಾರಿಗೆ ಮತ್ತು ಸುಸ್ಥಿರ ನಗರ ಚಲನಶೀಲತೆಗೆ



ತನ್ನ ಬದ್ಧತೆಯನ್ನು ಬಲಪಡಿಸುತ್ತದೆ. ಸಾರಿಗೆ ಸಚಿವರ ಪ್ರಕಾರ, ಮುಂಬರುವ ವಿಸ್ತರಣಾ ಹಂತದಲ್ಲಿ, ಸರ್ಕಾರವು PM E-DRIVE ಹಂತ–II ಅಡಿಯಲ್ಲಿ 3,330 ಹೆಚ್ಚುವರಿ ಎಲೆಕ್ಟ್ರಿಕ್ ಬಸ್‌ಗಳನ್ನು ಸೇರಿಸುವ ಗುರಿಯನ್ನು ಹೊಂದಿದೆ, ಇದರಲ್ಲಿ 500 ಏಳು ಮೀಟರ್ ಎಲೆಕ್ಟ್ರಿಕ್ ಬಸ್‌ಗಳು ಸೇರಿವೆ, ಇದು ಫೀಡರ್ ಸೇವೆಗಳು ಮತ್ತು ಕೊನೆಯ ಮೈಲಿ ಸಂಪರ್ಕವನ್ನು ಬಲಪಡಿಸುವ ಗುರಿಯನ್ನು ಹೊಂದಿದೆ, ವಿಶೇಷವಾಗಿ ಗ್ರಾಮೀಣ ಪ್ರದೇಶ ಮತ್ತು ಅಗತ್ಯ ಸೇವೆಗಳು, ಸಂಪನ್ಮೂಲಗಳು ಮತ್ತು ಸೌಲಭ್ಯಗಳ ಬಗ್ಗೆ ಪ್ರವೇಶ ಸಮಸ್ಯೆಗಳನ್ನು ಎದುರಿಸಿದ ಪ್ರದೇಶಗಳಿಗೆ ಪ್ರವೇಶವನ್ನು ಸುಧಾರಿಸುವ ಗುರಿಯನ್ನು ಹೊಂದಿದೆ. ಮುಖ್ಯಮಂತ್ರಿ ರೇಖಾ ಗುಪ್ತಾ ನೇತೃತ್ವದ ಸರ್ಕಾರವು ಸಾರ್ವಜನಿಕ ಸಾರಿಗೆ ಮೂಲಸೌಕರ್ಯವನ್ನು ಆಧುನೀಕರಿಸುವ ಮೂಲಕ ಪ್ರಯಾಣಿಕರ ಅನುಭವವನ್ನು ಸುಧಾರಿಸುವ ಗುರಿಯನ್ನು ಹೊಂದಿರುವ ಕ್ರಮಗಳನ್ನು ನಿರಂತರವಾಗಿ ಅನುಸರಿಸುತ್ತಿದೆ ಎಂದು ಸಚಿವರು ಗಮನಿಸಿದರು. ಬಸ್ ಡಿಪೋಗಳಲ್ಲಿ ಅಗತ್ಯ ಚಾರ್ಜಿಂಗ್ ಮತ್ತು ವಿದ್ಯುತ್ ಮೂಲಸೌಕರ್ಯಗಳನ್ನು ರಚಿಸುವುದು ಸಹ ಈ ಉಪಕ್ರಮಗಳಲ್ಲಿ ಸೇರಿದೆ, ಇದು ಬಸ್ ಫ್ಲೀಟ್ನ ದೊಡ್ಡ ಪ್ರಮಾಣದ ವಿದ್ಯುದೀಕರಣವನ್ನು ಬೆಂಬಲಿಸುತ್ತದೆ. ಈ ಉಪಕ್ರಮವು ವಾಹನಗಳ ಹೊರಸೂಸುವಿಕೆಯನ್ನು ಕಡಿಮೆ ಮಾಡಲು, ಗಾಳಿಯ ಗುಣಮಟ್ಟವನ್ನು ಸುಧಾರಿಸಲು, ಸ್ವಚ್ಛ, ಸುರಕ್ಷಿತ ಮತ್ತು ವಿಶ್ವಾಸಾರ್ಹ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಒದಗಿಸುವ ಮೂಲಕ ಕೊಡುಗೆ ನೀಡುತ್ತದೆ ಎಂದು ನಿರೀಕ್ಷಿಸಲಾಗಿದೆ.

# ಬದುಕಿನಲ್ಲಿ ಕಠಿಣ ಪರಿಶ್ರಮ ಬಹಳ ಮುಖ್ಯ, ಅದಕ್ಕೆ ಫಲ ಸಿಕ್ಕೇ ಸಿಗುತ್ತದೆ: ಬೊಮ್ಮಾಯಿ ಪ್ರತಿಪಾದನೆ



**ಹಾವೇರಿ(ಸವಣೂರು), ರಿಗ.7–** ಬದುಕಿನಲ್ಲಿ ಕಠಿಣ ಪರಿಶ್ರಮ ಬಹಳ ಮುಖ್ಯ. ನೀವು ಬುದ್ಧಿವಂತರಿದ್ದಿರೋ ಇಲ್ಲವೋ ಮುಖ್ಯವಲ್ಲ. ಕಠಿಣ ಪರಿಶ್ರಮ ಹಾಕಿದರೆ ಅದರ ಫಲ ಸಿಕ್ಕೆ ಸಿಗುತ್ತದೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು

ಹಾವೇರಿ ಜಿಲ್ಲೆಯ ಸವಣೂರ ತಾಲೂಕಿನ ಗುಂಡೂರ ಗ್ರಾಮದ ವೀರಭದ್ರೇಶ್ವರ ವಿದ್ಯಾಸಂಸ್ಥೆಯ ಕೀರ್ತಿ ಕಲಾ ಮತ್ತು ವಾಣಿಜ್ಯ ಮಹಾ ವಿದ್ಯಾಲಯದ ಅಂತಿಮ ವರ್ಷದ ಪದವಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಹಾಗೂ ಬಿ.ಸಿ.ಎ ನೂತನ ತರಗತಿ ಪ್ರಾರಂಭೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ, ನಮ್ಮ ಬದುಕು ನಮ್ಮ ಹುಟ್ಟಿನಿಂದ ತೀರ್ಮಾನ ಆಗುವುದಿಲ್ಲ. ನಾವು ಎಲ್ಲಿ ಹುಟ್ಟಿದ್ದೇವೆ. ಶ್ರೀಮಂತರೋ ಬಡವರೋ ತೀರ್ಮಾನ ಆಗುವುದಿಲ್ಲ. ನಾವೇನು ತೀರ್ಮಾನ ಮಾಡುತ್ತೇವೆ ಅದರ ಮೇಲೆ ನಮ್ಮ ಬದುಕು ತೀರ್ಮಾನ ಆಗುತ್ತದೆ. ಹಣೆಯಲ್ಲಿ ಬರವಣಿಗೆ ಇಲ್ಲ. ಕೈಯಲ್ಲಿನ ಗೆರೆ ಸವಿದರೆ ಹಣೆಯಲ್ಲಿ ಗೆರೆ ಮೂಡುತ್ತವೆ. ನಾನು ಟಾಟಾ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೆ, ಅಲ್ಲಿ ಸಿಂಬೋಸಿಸ್ ಕಂಪನಿಯ ಅಧ್ಯಕ್ಷ ನೇರವಾಗಿ ಬಂದು ನಮಗೆ ಅದೃಷ್ಟದ ಅರ್ಥ ಹೇಳುವಂತೆ ಕೇಳಿದರು. ಅವರು ಹೇಳಿದರು ಕಠಿಣ ಪರಿಶ್ರಮ ಬೇಕೆಬೇಕು. ಕೆಲವರಿಗೆ ಮುಂಚೆಯೇ ಫಲಿತಾಂಶ ಸಿಗುತ್ತದೆ. ಅದನ್ನೆ ಅದೃಷ್ಟ ಅಂತ ಕರೆಯುತ್ತಾರೆ ಎಂದರು.

**ಛಲ ಇರಬೇಕು**

ಕಠಿಣ ಪರಿಶ್ರಮ ಬದುಕಿನಲ್ಲಿ ಬಹಳ ಮುಖ್ಯ. ನೀವು ಬುದ್ಧಿವಂತರಿದ್ದಿರೋ ಇಲ್ಲವೋ ಮುಖ್ಯವಲ್ಲ. ಕಠಿಣ ಪರಿಶ್ರಮ ಹಾಕಿದರೆ ಅದರ ಫಲ ಸಿಕ್ಕೆ ಸಿಗುತ್ತದೆ. ಶಾಲೆಯಲ್ಲಿ ಒಳ್ಳೆಯ ನಂಬರ್ ತೆಗೆದುಕೊಳ್ಳಬೇಕು. ಆದರಿಂದ ಒಳ್ಳೆಯದಾಗುತ್ತದೆ. ನಿಮ್ಮಲ್ಲಿ ಛಲ ಇರಬೇಕು. ಜಗತ್ತಿನ ಅತಿ ಎತ್ತರದ ಶಿಖರವನ್ನು ಮೊದಲನೇ ಬಾರಿ ಹತ್ತಿದವನು ತೇನ್‌ಸಿಂಗ್, ಅವರು ಕುರಿಗಾಯಿ ಸಮುದಾಯಕ್ಕೆ ಸೇರಿದವನು. ಅವನ ಬಳಿ ಇಪತ್ತೈದು ಕುರಿಗಳಿದ್ದವು. ಪ್ರತಿದಿನ ಮೌಂಟ್ ಎವರೆಸ್ಟ್ ಪಕ್ಕದಲ್ಲಿ ಕುರಿ ಮೇಯಿಸಲು ಅವನ ತಾಯಿ ಕರೆದುಕೊಂಡು ಹೋಗುತ್ತಿದ್ದಳು. ಅವಳು ಪ್ರತಿದಿನ ಮೌಂಟ್ ಎವರೆಸ್ಟ್ ಹತ್ತುತ್ತೀಯಾ ಎಂದು ಕೇಳುತ್ತಿದ್ದಳು. ಅವನು ತನ್ನ ನಲವತ್ತು ಮೂರನೇ ವರ್ಷದಲ್ಲಿ ಮೌಂಟ್ ಎವರೆಸ್ಟ್ ಹತ್ತಿದ. ಅವನು ಕೆಳಗೆ ಬಂದಾಗ ಅವನನ್ನು ಪತ್ರಕರ್ತರು ಕೇಳಿದರು. ಆಗ ಆತ ನಾನು ಹತ್ತನೇ ವರ್ಷದಲ್ಲಿಯೇ ಇದನ್ನು ಹತ್ತಿದ್ದೇನೆ ಎಂದು ಹೇಳಿದಾ. ಇವತ್ತು ನೀವು ಏನು ತೀರ್ಮಾನ ಮಾಡುತ್ತೀರಿ ಅದು ಆಗುತ್ತದೆ. ಆಸಾಧ್ಯವನ್ನು ಮಾಡುವುದರಲ್ಲಿ ಇರುವಂಥಹ ಸಾಧನೆಯ ಸಂತೋಷ ಸಾಮಾನ್ಯವಾಗಿರುವ ಕೆಲಸದಲ್ಲಿ ಇಲ್ಲ. ಅಂತಹ ಸಾಹಸ ಮಯ ಕೆಲಸ ಮಾಡಬೇಕು ಎಂದರು.

ಉದಾಹರಣೆಗೆ ಶಂಕರಗೌಡರು ಸವಣೂರಿನಲ್ಲಿ ಡಿಗ್ರಿ ಕಾಲೇಜು ತೆರೆಯುವುದಾಗಿ ಹೇಳಿದರು. ನನಗೆ ಅಚ್ಚರಿಯಾಯಿತು ನಾನು ಬೇಡ ಅಂದೆ. ಯಾಕೆಂದರೆ ನಾನು ಇಲ್ಲಿಗೆ ಎನ್‌ಟಿಟಿಎಫ್ ತರಲು ಪಯತ್ನ ಮಾಡಿದ್ದೆ. ಮೂರು ತಿಂಗಳ ಕೋರ್ಸ್ ಮಾಡಿದರೆ ನೌಕರಿ ಸಿಗುತ್ತಿತ್ತು. ಪ್ಲಂಬಿಂಗ್, ಡ್ರಿಲ್ಲಿಂಗ್, ವೇಲ್ಡಿಂಗ್ ಕಲಿತರೆ ನೌಕರಿ ಸಿಗುತ್ತಿತ್ತು. ಏಳನೇ ಕ್ಲಾಸ್ ಕಲಿತವರಿಗೂ ತರಬೇತಿ ನೀಡುತ್ತಿದ್ದೆವು. ಆದರೂ, ವಿದ್ಯಾರ್ಥಿಗಳು ಬರಲಿಲ್ಲ. ಹೀಗಾಗಿ ನಾನು ಪದವಿ ಕಾಲೇಜು ಸ್ಥಾಪನೆ ಬೇಡ ಎಂದು ಹೇಳಿದ್ದೆ. ಆದರೆ, ಇವರ ಸಾಹಸ ಯಶಸ್ವಿಯಾಗಿದೆ. ಬಹಳ ಸಂತೋಷವಾಗಿದೆ. ಈ ಭಾಗದಲ್ಲಿ ವಿದ್ಯಾಸಂಸ್ಥೆಗಳು ಇನ್ನಷ್ಟು ಬರಲಿ, ಬಿಸಿಎ ಕೋರ್ಸ್ ಆರಂಭ ಮಾಡುತ್ತಿದ್ದೀರಿ. ಎಲ್ಲರಿಗೂ ಶುಭವಾಗಲಿ ಎಂದರು.

**ಸರಸ್ವತಿ ಮಂದಿರ:** ಇದು ಸರಸ್ವತಿ ಮಂದಿರ ಅದರ ಜೊತೆಗೆ ನಿಮ್ಮನ್ನು ಅತಿ ಎತ್ತರಕ್ಕೆ ತೆಗೆದುಕೊಂಡು ಹೋಗುವುದು ಸರಸ್ವತಿ ವಾಹನ ಪರಮಹಂಸ, ಅದು ಅತ್ಯಂತ ಭಾರವಾಗಿರುವ ಪಕ್ಷಿ ಮತ್ತು ಪರಿಶುದ್ಧವಾಗಿರುವ ಪಕ್ಷಿ, ಜಗತ್ತಿನಲ್ಲಿ ಅತಿ ಎತ್ತರಕ್ಕೆ ಹಾರುತ್ತದೆ.

ಕೈಲಾಸ ಮಾನಸ ಸರೋವರದಲ್ಲಿ ಪರಮಹಂಸಗಳು ಮಾತ್ರ ಇರುತವೆ. ನೀವು ಈ ಪರಮಹಂಸದಲ್ಲಿ ಕುಳಿತಿದ್ದೀರಿ, ನಿಮ್ಮ ಪ್ರತಿಭೆ ಸಾಹಸ, ಅತ್ಯಂತ ಖ್ಯಾತಿ ಯಶಸ್ವಿಯಾಗಲಿ, ಯಾವುದಾದರೂ ವಿಚಾರ ಬಂದರೆ ಯಾಕೆ, ಏನು, ಎಲ್ಲಿ, ಎಷ್ಟು ಎನ್ನುವ ಪ್ರಶ್ನೆ ಹಾಕಿದರೆ ನೀವು ತಾರ್ಕಿಕವಾಗಿ ಯಶಸ್ವಿಯಾಗುತ್ತೀರಿ. ಪಶ್ನೆ ಕೇಳುವ ಸ್ವಭಾವ ಬಂದರೆ ಕೀಯಾಶೀಲರಾಗಿರುತ್ತೀರಿ, ಒಮ್ಮೆ ವಿದ್ಯಾರ್ಥಿಯಾದರೆ ಸಾಯುವರೆಗೂ ವಿದ್ಯಾರ್ಥಿ, ಕಾಲೇಜಿನಲ್ಲಿ ಪಾಠ ಮಾಡಿದ ನಂತರ ಪರೀಕ್ಷೆ ಇರುತ್ತದೆ. ಜೀವನದಲ್ಲಿ ಮೊದಲೇ ಪರೀಕ್ಷೆ ಆ ಮೇಲೇ ಪಾಠ ಕಲಿಯುತ್ತೇವೆ ಎಂದು ಹೇಳಿದರು.

**ಯುವಕರಿಗೆ ಪ್ರೇರಣೆ:** ಸುವರ್ಣ ನ್ಯೂಸ್ ಸಂಪಾದಕ ಅಜಿತ್ ಹನುಮಕ್ಕನವರ್ ಅವರ ಜೀವನ ಅತ್ಯಂತ ಸಾಹಸಮಯವಾಗಿದೆ. ಅವರು ಅಂತಾರಾಷ್ಟ್ರೀಯ ಮಟ್ಟದಲ್ಲಿ ನಡೆಯುವ ವಿದ್ಯಮಾನಗಳನ್ನು ನೇರವಾಗಿ ತಲುಪಿಸುವ ಕೆಲಸ ಮಾಡುತ್ತಾರೆ. ಇಸ್ರೇಲ್ ಪ್ಯಾಲೆಸ್ತೀನ್ ಯುದ್ಧವನ್ನು ಅಲ್ಲಿಗೆ ಹೋಗಿ ನೇರವಾಗಿ ವರದಿ ಮಾಡಿದ್ದಾರೆ. ಅಪಘಾನಿಸ್ತಾನಕ್ಕೂ ಹೋಗಿ ವರದಿ ಮಾಡಿದ್ದಾರೆ. ಅಂತಾರಾಷ್ಟ್ರೀಯ ಸುದ್ದಿಗಳನ್ನು ನೇರವಾಗಿ ಸುದ್ದಿ ಮಾಡುತ್ತಿರುವ ಅಜಿತ್ ಹನುಮಕ್ಕನವರ ಯುವಕರಿಗೆ ಪೇರಣೆಯಾಗಿದ್ದಾರೆ ಎಂದರು.

## ಬೆಂಗಳೂರಿನಲ್ಲಿ ರೌಡಿಸಂಗೆ ಕಡಿವಾಣ ಹಾಕಲು ಆಂಟಿ ರೌಡಿಸಂ ಸ್ಕ್ವಾಡ್

# ಪ್ರತಿ ವಲಯ, ಠಾಣೆಮಟ್ಟದಲ್ಲಿ ತಂಡ ರಚನೆಗೆ ಡಿಜಿ ಐಜಿಪಿ ಡಾ.ಎಂ.ಎ.ಸಲೀಂ ಸುತ್ತೋಲೆ

**ಬೆಂಗಳೂರು, ಜೂ.7:** ರಾಜ್ಯದಾದ್ಯಂತ ರೌಡಿಸಂ ನಿಯಂತ್ರಣಕ್ಕೆ ಪೊಲೀಸ್ ಇಲಾಖೆ ಹೊಸ ಕ್ರಮ ಕೈಗೊಂಡಿದೆ. ಈ ಸಂಬಂಧ ಪೊಲೀಸ್ ಮಹಾನಿರ್ದೇಶಕ ಮತ್ತು ಮಹಾ ಪರಿಶೋಧಕ ಡಾ. ಎಂ.ಎ. ಸಲೀಂ ಅವರು ಸುತ್ತೋಲೆ ಹೊರಡಿಸಿದ್ದು, ಪ್ರತಿ ಪೊಲೀಸ್ ವಲಯ ಮತ್ತು ಠಾಣೆ ಮಟ್ಟದಲ್ಲಿ ಆಂಟಿ ರೌಡಿ ಸ್ಕ್ವಾಡ್‌ಗಳನ್ನು ರಚಿಸಲು ಆದೇಶಿಸಿದ್ದಾರೆ.

ಈ ಮೂಲಕ ರಾಜ್ಯದ ಕಾನೂನು ಮತ್ತು ಸುವ್ಯವಸ್ಥೆಯನ್ನು ಬಲಪಡಿಸುವುದು ಹಾಗೂ ರೌಡಿ ಅಂಶಗಳ ವಿರುದ್ಧ ಶೂನ್ಯ ಸಹಿಷ್ಣುತೆ ನೀತಿಯನ್ನು ಅನುಸರಿಸುವುದು ಇದರ ಉದ್ದೇಶವಾಗಿದೆ.

ರೌಡಿ ಅಂಶಗಳು ಸಮಾಜದಲ್ಲಿ ಭಯದ ವಾತಾವರಣ ಸೃಷ್ಟಿಸುತ್ತವೆ, ಸೌಹಾರ್ದತೆ ಹಾಳುಮಾಡುತ್ತವೆ ಮತ್ತು ಸಾರ್ವಜನಿಕ ಶಾಂತಿಗೆ ಧಕ್ಕೆಯುಂಟುಮಾಡುತ್ತವೆ. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಯವರ ನಿರ್ದೇಶನ ದಂತೆ, ರೌಡಿಸಂ ನಿರ್ಮೂಲನೆಗೆ ಕಠಿಣ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.

ಸುತ್ತೋಲೆಯಲ್ಲಿ ತಿಳಿಸಿರುವಂತೆ ಎಲ್ಲಾ ಅಧಿಕಾರಿಗಳು ರೌಡಿಸಂ ವಿರುದ್ಧ ಶೂನ್ಯ ಸಹಿಷ್ಣುತೆ ನೀತಿ ಅನುಸರಿಸಬೇಕು. ಸರ್ಕಲ್ ಇನ್ಸ್‌ಪೆಕ್ಟರ್‌ಗಳ ಮೇಲ್ವಿಚಾರಣೆಯಲ್ಲಿ ಪ್ರತಿ ವಲಯದಲ್ಲಿ ರೌಡಿ ಸ್ಕ್ವಾಡ್ ರಚಿಸಲಾಗುವುದು. ಪೊಲೀಸ್ ಇನ್ಸ್‌ಪೆಕ್ಟರ್‌ಗಳ ನೇತೃತ್ವದ ಠಾಣೆಗಳಲ್ಲಿ ಪ್ರತ್ಯೇಕ ಸ್ಕ್ವಾಡ್‌ಗಳೂ ರಚಿಸಲಾಗುವುದು. ಸ್ಕ್ವಾಡ್‌ನ ಸಂಯೋಜನೆ

**ಪೊಲೀಸ್ ಅಧಿಕಾರಿಗಳು ರೌಡಿಸಂ ಮತ್ತು ಅಸಾಮಾಜಿಕ ಚಟುವಟಿಕೆಗಳ ವಿರುದ್ಧ ಶೂನ್ಯ ಸಹಿಷ್ಣುತೆ ನೀತಿಯನ್ನು ಅನುಸರಿಸಬೇಕು. ಯಾವುದೇ ರೀತಿ ಬೆದರಿಕೆ, ಬಲವಂತದ ಹಣ ಸಂಗ್ರಹಣೆ, ಗ್ಯಾಂಗ್ ಚಟುವಟಿಕೆ ಅಥವಾ ಸಾರ್ವಜನಿಕ ಅಶಾಂತಿ ಕಂಡುಬಂದರೆ ಕಾನೂನಿನ ಪ್ರಕಾರ ತಕ್ಷಣ ಕ್ರಮ ಕೈಗೊಳ್ಳಬೇಕು. ಎಲ್ಲಾ ಘಟಕಾಧಿಕಾರಿಗಳು ಸುತ್ತೋಲೆ ಹೊರಡಿಸಿದ ಏಳು ದಿನಗಳೊಳಗೆ ರೌಡಿ ಸ್ಕ್ವಾಡ್ ರಚನೆಯ ವರದಿ ಸಲ್ಲಿಸಬೇಕು. ಸರ್ಕ್ಯುಲರ್‌ನ ಅನುಷ್ಠಾನವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.**

**–ಡಾ.ಎಂ.ಎ. ಸಲೀಂ, ಡಿಜಿ, ಐಜಿಪಿ**

ಸ್ಥಳೀಯ ಅಗತ್ಯತೆ ಮತ್ತು ಅಪರಾಧ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಉಪ ವಿಭಾಗಾಧಿಕಾರಿ ಅಥವಾ ಎಸಿಪಿ ನಿರ್ಧರಿಸಲಿದ್ದಾರೆ ಎಂದು ತಿಳಿಸಲಾಗಿದೆ.

ರೌಡಿ ಸ್ಕ್ವಾಡ್‌ಗಳು ಅಪರಾಧ ಪ್ರಕರಣಗಳ ಪರಿಶೀಲನೆ ನಡೆಸಿ ಹೊಸ ರೌಡಿ ಶೀಟ್‌ಗಳನ್ನು ತೆರೆಯುವ ಕಾರ್ಯ ಕೈಗೊಳ್ಳಬೇಕು. ರೌಡಿ ಶೀಟರ್‌ಗಳ ಚಟುವಟಿಕೆಗಳ ಮೇಲೆ ನಿಯಮಿತ ನಿಗಾವಹಣೆ ನಡೆಸಬೇಕು. ಹೊಸ ರೌಡಿ ಅಂಶಗಳು, ಗ್ಯಾಂಗ್‌ಗಳು ಮತ್ತು ಅಪರಾಧ ಗುಂಪುಗಳನ್ನು ಗುರುತಿಸಿ ಆಕ್ಷನ್‌ಬಲ್ ಇಂಟೆಲಿಜೆನ್ಸ್ ಸಂಗ್ರಹಿಸಬೇಕು. ಪಿಎಆರ್, ಗುಂಡಾ ಕಾಯ್ದೆ, ಕೆಸಿಒಸಿಎ ಕಾಯ್ದೆ ಮುಂತಾದ ಕಾನೂನು ಕ್ರಮಗಳನ್ನು ತಕ್ಷಣ ಕೈಗೊಳ್ಳಬೇಕು. ಬೀಟ್ ಸಿಬ್ಬಂದಿ ಮತ್ತು ಸ್ಥಳೀಯ ಗುಪ್ತಚರ ಮೂಲಗಳೊಂದಿಗೆ ನಿಕಟ ಸಂಪರ್ಕ ಕಾಯ್ದುಕೊಳ್ಳಬೇಕು ಹಾಗೂ ಅಪಾಯದ ಪ್ರದೇಶಗಳಲ್ಲಿ ವಿಶೇಷ ಡ್ರೈವ್‌ಗಳು ಮತ್ತು ಅಚ್ಚರಿ ತಪಾಸಣೆಗಳು ನಡೆಸಬೇಕು.




ಸರ್ಕಲ್ ಇನ್ಸ್‌ಪೆಕ್ಟರ್‌ಗಳು ಮತ್ತು ಠಾಣಾ ಅಧಿಕಾರಿಗಳು ಪ್ರತಿ ಪಕ್ಷಾವಧಿಯಲ್ಲಿ ಸ್ಕ್ವಾಡ್ ಕಾರ್ಯಕ್ಷಮತೆಯನ್ನು ಪರಿಶೀಲಿಸಬೇಕು. ಎಸ್‌ಡಿಪಿಒಗಳು ಮತ್ತು ಎಸಿಪಿಗಳು ಮಾಸಿಕ ಅಪರಾಧ ಸಭೆಗಳಲ್ಲಿ ಸ್ಕ್ವಾಡ್‌ಗಳ ಕಾರ್ಯಕ್ಷಮತೆಯನ್ನು ವಿಮರ್ಶಿಸಬೇಕು. ಪ್ರತಿ ಸ್ಕ್ವಾಡ್‌ನ ಚಟುವಟಿಕೆಗಳ ದಾಖಲಾತಿಗಾಗಿ ಪ್ರತ್ಯೇಕ ರಿಜಿಸ್ಟರ್ ಇರಬೇಕು ಮತ್ತು ಮಾಸಿಕ ವರದಿಗಳನ್ನು ಡಿಓ ಪತ್ರದ ರೂಪದಲ್ಲಿ ಸಲ್ಲಿಸಬೇಕು.



ಸಿಎಂ ಡಿಕೆ ಶಿವಕುಮಾರ್ ಭಾನುವಾರ ತಮ್ಮ ಕನಕಪುರ ಕ್ಷೇತ್ರಕ್ಕೆ ಕೃತಜ್ಞತೆ ಸಲ್ಲಿಸಲು ಭೇಟಿ ನೀಡಿದರು.

# ಕೆಪಿಸಿಸಿ ಅಧ್ಯಕ್ಷರ ಅಧಿಕಾರ ಸ್ವೀಕಾರ ಸಮಾರಂಭ: ಅದ್ದೂರಿ ಆಚರಣೆಗೆ ನಿರ್ಧಾರ



**ಬೆಂಗಳೂರು, ಜೂ.7:** ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ ನಿಯುಕ್ತಿಗೊಂಡಿರುವ ಬಿ.ಕೆ. ಹರಿಪ್ರಸಾದ್ ಅಧಿಕಾರ ಸ್ವೀಕಾರ ಸಮಾರಂಭವನ್ನು ಬೃಹತ್ ಪ್ರಮಾಣದಲ್ಲಿ ಆಯೋಜಿಸಲು ನಿರ್ಧರಿಸಲಾಗಿದ್ದು, ಈ ಕುರಿತು ಮಂಗಳವಾರ ಪೂರ್ವಭಾವಿ ಸಭೆಯನ್ನು ಆಯೋಜಿಸಲಾಗಿದೆ.

ಬೆಂಗಳೂರು ನಗರದ ಐದು ಜಿಲ್ಲಾ ಕಾಂಗ್ರೆಸ್, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು ಹಾಗೂ ಬೆಂಗಳೂರು ದಕ್ಷಿಣ ಜಿಲ್ಲಾ ಕಾಂಗ್ರೆಸ್ ಸಮಿತಿಗಳ ಅಧ್ಯಕ್ಷರು, ಹಾಲಿ ಸಂಸದರು, ಹಾಲಿ ಶಾಸಕರು, ಮಾಜಿ ಸಂಸದರು, ಮಾಜಿ ಶಾಸಕರು, 2024ರ ಲೋಕಸಭೆ ಅಭ್ಯರ್ಥಿಗಳು, 2023ರ ವಿಧಾನಸಭೆ ಅಭ್ಯರ್ಥಿಗಳು, ನಿಗಮ ಮಂಡಳಿ ಅಧ್ಯಕ್ಷರುಗಳು, ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷರು, ಮುಂಚೂಣಿ ಘಟಕ, ಸೆಲ್ ವಿಭಾಗಗಳ ಮುಖ್ಯಸ್ಥರೆಲ್ಲರನ್ನೂ ಒಳಗೊಂಡ ಪೂರ್ವಭಾವಿ ಸಭೆಯನ್ನು ಕೆಪಿಸಿಸಿ ಕಚೇರಿಯಲ್ಲಿ ಆಯೋಜಿಸಲಾಗಿದೆ.


ಸಂಸದ ಹಾಗೂ ಕೆಪಿಸಿಸಿ ಆಡಳಿತ ವಿಭಾಗದ ಕಾರ್ಯಾಧ್ಯಕ್ಷ ಜಿ.ಸಿ.ಚಂದ್ರಶೇಖರ್ ಸಭೆಗೆ ಎಲ್ಲರನ್ನೂ ಆಹ್ವಾನಿಸಿದ್ದಾರೆ. ವಿದ್ಯಾರ್ಥಿ ಸಮಯ ದಿಂದಲೂ ಕಾಂಗ್ರೆಸ್ ಕಾರ್ಯಕರ್ತರಾಗಿ, ವಿವಿಧ ರಾಜ್ಯಗಳ ಉಸ್ತುವಾರಿಗಳೂ ಆಗಿ ಅನುಭವ ಹೊಂದಿ ರುವ ಹರಿಪ್ರಸಾದ್ ಅವರು ಕೆಪಿಸಿಸಿ ಅಧ್ಯಕ್ಷರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಅಧಿಕಾರ ಸ್ವೀಕಾರ ಸಮಾರಂಭದ ಸ್ಥಳ ಹಾಗೂ ಕೇಂದ್ರ ದಿಂದ ವಿವಿಧ ನಾಯಕರನ್ನು ಆಹ್ವಾನಿಸುವ ಕುರಿತು ಚರ್ಚಿಸುವ ಸಾಧ್ಯತೆಯಿದೆ.

ಬೆಂಗಳೂರು: ಕೆಪಿಸಿಸಿ ಅಧ್ಯಕ್ಷರಾಗಿ ನೇಮಕವಾಗಿರುವ ಬಿ.ಕೆ.ಹರಿಪ್ರಸಾದ್ ಔಪಚಾರಿಕವಾಗಿ ಅಧಿಕಾರ ವಹಿಸಿಕೊಳ್ಳುವ ಮೊದಲು ಹಿರಿಯ ನಾಯಕರನ್ನು ಭೇಟಿಯಾಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಶನಿವಾರ ಹಿರಿಯ ನಾಯಕರಾದ ಎಚ್. ಕೆ.ಪಾಟೀಲ್, ರಹೀಂ ಖಾನ್, ಡಾ.ಎಚ್.ಸಿ. ಮಹದೇವಪ್ಪ, ಸಚಿವ ಈಶ್ವರ ಖಂಡ್ರೆ ಅವರನ್ನು ಭೇಟಿ ಮಾಡಿದ್ದಾರೆ. ಅದೇ ರೀತಿ ಕೆಲ ನಾಯಕರು ಹರಿಪ್ರಸಾದ್ ಅವರನ್ನು ಭೇಟಿ ಮಾಡಿ, ಅಭಿನಂದನೆ ಸಲ್ಲಿಸಿದ್ದಾರೆ.

## ಆರ್.ಗುಂಡೂರಾವ್ ಫೌಂಡೇಷನ್‌ನಿಂದ ಪ್ರತಿಭಾ ಪುರಸ್ಕಾರ

# ಪ್ರತಿಭಾನ್ವಿತರಿಗೆ ಧನಸಹಾಯದ ಚೆಕ್ ವಿತರಿಸಿದ ದಿನೇಶ್ ಗುಂಡೂರಾವ್

**ಬೆಂಗಳೂರು, ಜೂ.7:** ಆರ್. ಗುಂಡೂರಾವ್ ಫೌಂಡೇಶನ್ ವತಿಯಿಂದ ಗಾಂಧೀನಗರ ವಿಧಾನಸಭಾ ಕ್ಷೇತ್ರದ ಪ್ರತಿಭಾನ್ವಿತ ಹಾಗೂ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ವಿದ್ಯಾರ್ಥಿವೇತನ ವಿತರಣಾ ಕಾ ಠ್ರ್ರ ಕ್ರ ವ ಠ ವ ನ್ ್ನ ಹಮ್ಮಿಕೊಳ್ಳಲಾಗಿತ್ತು. ಗಾಂಧೀನಗರದ ಶಿರೂರು ಪಾರ್ಕ್ ಬಳಿಯಿರುವ ಆರ್.ಗುಂಡೂರಾವ್ ಸಭಾಂಗಣದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಮಾಜಿ ಸಚಿವರು ಹಾಗೂ ಶಾಸಕರಾದ ದಿನೇಶ್ ಗುಂಡೂರಾವ್ ಅವರು ವಿದ್ಯಾರ್ಥಿಗಳಿಗೆ ಧನ ಸಹಾಯದ ಚೆಕ್‌ಗಳನ್ನು ವಿತರಿಸಿದರು.




ಗಾಂಧಿನಗರ ವಿಧಾನಸಭಾ ಕ್ಷೇತ್ರದ ನಿವಾಸಿಗಳಾಗಿದ್ದು, 2025–26ನೇ ಸಾಲಿನ ಶೈಕ್ಷಣಿಕ ವರ್ಷದ ಎಸ್.ಎಸ್.ಎಲ್.ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಈ ವೇಳೆ ಗುರುತಿಸಿ ಅಭಿನಂದಿಸಲಾಯಿತು.

ಎಸ್.ಎಸ್.ಎಲ್.ಸಿ: ಶೇ. 90ಕ್ಕಿಂತ ಹೆಚ್ಚು ಅಂಕ ಗಳಿಸಿದ ಒಟ್ಟು 115 ವಿದ್ಯಾರ್ಥಿಗಳು. ದ್ವಿತೀಯ ಪಿಯುಸಿ: ಶೇ. 90ಕ್ಕಿಂತ ಹೆಚ್ಚು ಅಂಕ ಗಳಿಸಿದ ಒಟ್ಟು 57 ವಿದ್ಯಾರ್ಥಿಗಳು.ಸಾಧನೆ ಮಾಡಿದ ಈ ಎಲ್ಲಾ 172 ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನವಾಗಿ ತಲಾ 10,000 ರೂಪಾಯಿಗಳ ಚೆಕ್ ನೀಡಿ ಗೌರವಿಸಲಾಯಿತು. ಇದೇ ಸಂದರ್ಭದಲ್ಲಿ, ಪ್ರಸಕ್ತ 2026–27ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಎಲ್.ಕೆ.ಜಿ ಯಿಂದ ಹಿಡಿದು 10ನೇ ತರಗತಿಯವರೆಗೆ ಓದುತ್ತಿರುವ, ಕ್ಷೇತ್ರದಲ್ಲಿ ವಾಸಿಸುತ್ತಿರುವ



ಆರ್ಥಿಕವಾಗಿ ಹಿಂದುಳಿದ ಒಟ್ಟು 184 ಬಡ ವಿದ್ಯಾರ್ಥಿಗಳನ್ನು ಗುರುತಿಸಿ ಅವರಿಗೆ ಶೈಕ್ಷಣಿಕ ನೆರವು ನೀಡಲಾಯಿತು. ಈ ಎಲ್ಲಾ ಮಕ್ಕಳಿಗೆ ತಲಾ 3,000 ರೂಪಾಯಿಗಳ ಚೆಕ್ಗಳನ್ನು ವಿತರಿಸುವ ಮೂಲಕ ಅವರ ಮುಂದಿನ ವಿದ್ಯಾಭ್ಯಾಸಕ್ಕೆ ಆಸರೆಯಾಗಲಾಯಿತು.

"ಶಿಕ್ಷಣವೇ ಪ್ರತಿಯೊಬ್ಬ ಮಗುವಿನ ಭವಿಷ್ಯದ ಅಡಿಪಾಯ. ಕ್ಷೇತ್ರದ ಯಾವುದೇ ಮಗು ಆರ್ಥಿಕ ಸಂಕಷ್ಟದಿಂದಾಗಿ ಶಿಕ್ಷಣದಿಂದ ವಂಚಿತರಾಗಬಾರದು ಹಾಗೂ ಪ್ರತಿಭಾನ್ವಿತರಿಗೆ ಸೂಕ್ತ ಪ್ರೋತ್ಸಾಹ ಸಿಗಬೇಕು ಎನ್ನುವ ಉದ್ದೇಶದಿಂದ ಪ್ರತಿ ವರ್ಷವೂ ಫೌಂಡೇಶನ್ ವತಿಯಿಂದ ಈ ಸೇವಾ ಕಾರ್ಯವನ್ನು ನಿರಂತರವಾಗಿ ಮಾಡಿಕೊಂಡು ಬರಲಾಗುತ್ತಿದೆ." ಎಂದು ದಿನೇಶ್ ಗುಂಡೂರಾವ್ ಅವರು ಈ ಸಂದರ್ಭದಲ್ಲಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಸ್ಥಳೀಯ ಮುಖಂಡರು, ಶಿಕ್ಷಣ ತಜ್ಞರು, ವಿದ್ಯಾರ್ಥಿಗಳು ಹಾಗೂ ಪೋಷಕರು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು.

## ಕೆಎಸ್‌ಆರ್‌ಟಿಸಿ ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರ ಖಡಕ್ ಆದೇಶ

# 3 ವರ್ಷಕ್ಕಿಂತ ಹೆಚ್ಚುಕಾಲ ಒಂದೇ ಕಡೆ ಬೀಡುಬಿಟ್ಟಿರುವ ಸಿಬ್ಬಂದಿ ಸ್ಥಳ ಬದಲಾವಣೆ

### ವ್ಯಾಪಕ ದೂರುಗಳ ಹಿನ್ನೆಲೆಯಲ್ಲಿ ಕ್ರಮ

**ಬೆಂಗಳೂರು, ಜೂ.7:** ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಆಡಳಿತ ವ್ಯವಸ್ಥೆಗೆ ಚುರುಕು ಮುಟ್ಟಿಸಲು ಸರ್ಕಾರ ಭಾರಿ ಮಹತ್ವದ ನಿರ್ಧಾರ ಕೈಗೊಂಡಿದೆ. ನಿಗಮದ ಒಂದೇ ಕಡೆ ಅಥವಾ ಒಂದೇ ಶಾಖೆಯಲ್ಲಿ ಮೂರು ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಯಿಂದ ಗೂಟ ಹೊಡೆದು ಕುಳಿತಿರುವ ಅಧಿಕಾರಿಗಳು ಮತ್ತು ನೌಕರರಿಗೆ ತಕ್ಷಣವೇ ಸ್ಥಳ ಬದಲಾವಣೆ ಮಾಡಲು ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು ಖಡಕ್ ಆದೇಶ ಹೊರಡಿಸಿದ್ದಾರೆ.

ಸಾರಿಗೆ ನಿಗಮಗಳಲ್ಲಿ ಹಲವು ವರ್ಷಗಳಿಂದ ಒಂದೇ ಹುದ್ದೆ ಅಥವಾ ಜಾಗದಲ್ಲಿ ಭದ್ರವಾಗಿ ನೆಲೆಯೂರಿರುವ ಕೆಲವು ಸಿಬ್ಬಂದಿ, ಸಹೋದ್ಯೋಗಿ ನೌಕರರಿಗೆ ಮಾನಸಿಕವಾಗಿ ತೀವ್ರ ಕಿರುಕುಳ ನೀಡುತ್ತಿದ್ದಾರೆ ಎಂಬ ಗಂಭೀರ ಆರೋಪಗಳು ಕೇಳಿಬಂದಿದ್ದವು. ರಜೆ ಮಂಜೂರು ಮಾಡದೆ ಸತಾಯಿಸುವುದು, ಉದ್ದೇಶ ಪೂರ್ವಕವಾಗಿ ಗೈರುಹಾಜರಿ (ಆಬ್ಸೆಂಟ್) ಹಾಕಿ ವೇತನ ಕಡಿತಗೊಳಿಸುವುದು ಸೇರಿದಂತೆ ಹಲವು ರೀತಿಯ ಕಿರುಕುಳಗಳ ವಿರುದ್ಧ ನೊಂದ ನೌಕರರು ಸರ್ಕಾರಕ್ಕೆ ಸಾಲು ಸಾಲು ದೂರುಗಳನ್ನು ಸಲ್ಲಿಸಿದ್ದರು. ಈ ದೂರುಗಳನ್ನು ಗಂಭೀರವಾಗಿ ಪರಿಗಣಿಸಿರುವ ಸಾರಿಗೆ ಇಲಾಖೆ ಕಾರ್ಯದರ್ಶಿಗಳು, ಆಡಳಿತ ಹಿತದೃಷ್ಟಿ ಯಿಂದ ಈ ಕಠಿಣ ಕ್ರಮಕ್ಕೆ ಮುಂದಾ ಗಿದ್ದಾರೆ.

ಒಂದೇ ಸೂರಿ ನಡಿ ಮೂರು ವರ್ಷ ದಾಟಿದ ಸಿಬ್ಬಂದಿಯನ್ನು ತಕ್ಷಣವೇ ಬೇರೆಡೆಗೆ ವರ್ಗಾಯಿಸಲು ಕ್ರಮ ಕೈಗೊಳ್ಳುವಂತೆ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಮ್ ಪಾಷಾ ಅವರಿಗೆ ಸಾರಿಗೆ ಇಲಾಖೆ ಕಾರ್ಯದರ್ಶಿಗಳು ಸ್ಪಷ್ಟ ನಿರ್ದೇಶನ ನೀಡಿದ್ದಾರೆ.

ನಿಗಮದಲ್ಲಿ ಚಾಲ್ತಿ ಯಲ್ಲಿರುವ ನಿಯಮಗಳು ಮತ್ತು ಸುತ್ತೋಲೆಗಳ ಪ್ರಕಾರವೇ ಈ ಪ್ರಕ್ರಿಯೆ ನಡೆಯಲಿದ್ದು, ಆಡಳಿತ ಯಂತ್ರವನ್ನು ಮತ್ತಷ್ಟು ಪಾರದರ್ಶಕ ಹಾಗೂ ಚುರುಕುಗೊಳಿಸುವುದು ಇದರ ಮುಖ್ಯ ಉದ್ದೇಶವಾಗಿದೆ.

ಸಾರಿಗೆ ಇಲಾಖೆಯ ಆದೇಶದ ಬೆನ್ನಲ್ಲೇ ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು ನಿಗಮದ ಎಲ್ಲಾ ವಿಭಾಗಗಳಿಗೆ ಸೂಚನೆ ರವಾನಿಸಿದ್ದಾರೆ. ನಿಗಮದ ಎಲ್ಲಾ ಮುಖ್ಯಸ್ಥರು, ಹಿರಿಯ ಹಾಗೂ ವಿಭಾಗೀಯ ನಿಯಂತ್ರಣಾಧಿಕಾರಿಗಳು, ವ್ಯವಸ್ಥಾಪಕರು ಮತ್ತು ತರಬೇತಿ ಸಂಸ್ಥೆಗಳ ಮುಖ್ಯಸ್ಥರು ತಮ್ಮ ವ್ಯಾಪ್ತಿಯಲ್ಲಿ ದೀರ್ಘಕಾಲದಿಂದ ಇರುವ ಸಿಬ್ಬಂದಿಯನ್ನು ವರ್ಗಾವಣೆ ಮಾಡಿ, ಆ ಕುರಿತ ವರದಿಯನ್ನು ತಕ್ಷಣವೇ ಎಂ.ಡಿ ಅವರಿಗೆ ಸಲ್ಲಿಸಬೇಕಿದೆ.

ಅಧಿಕಾರಿಗಳಿಂದ ವರದಿ ಕೈ ಸೇರಿದ ಬಳಿಕ, ವ್ಯವಸ್ಥಾಪಕ ನಿರ್ದೇಶಕ ಅಕ್ರಮ್ ಪಾಷಾ ಅವರು ಕೈಗೊಂಡ ಕ್ರಮಗಳ ಸಂಪೂರ್ಣ ವರದಿಯನ್ನು ಸರ್ಕಾರಕ್ಕೆ ಹಸ್ತಾಂತರಿಸಲಿದ್ದಾರೆ.

# 3,395 ಪೊಲೀಸ್ ಪೇದೆಗಳ ನೇರ ನೇಮಕಾತಿಗೆ ಅರ್ಜಿ ಆಹ್ವಾನ

ಬೆಂಗಳೂರು, ಜೂ.7: ರಾಜ್ಯ ಪೊಲೀಸ್ ಇಲಾಖೆಯ ಮಿಕ್ಕುಳಿದ (ಉಳಿದ ಮೂಲ) ವೃಂದದಲ್ಲಿನ ವಿವಿಧ ಜಿಲ್ಲಾ, ನಗರ ಹಾಗೂ ಘಟಕಗಳಲ್ಲಿ ಖಾಲಿ ಇರುವ ಒಟ್ಟು 3,395 ಪೊಲೀಸ್ ಕಾನ್ಸ್‌ಟೇಬಲ್ (ಸಿವಿಲ್) ಹುದ್ದೆಗಳ ನೇರ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಈ ನೇಮಕಾತಿಯ ಪ್ರಮುಖ ಪ್ರಕ್ರಿಯೆಯಾದ ಸ್ಪರ್ಧಾತ್ಮಕ ಲಿಖಿತ ಪರೀಕ್ಷೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಡೆಸಲಿದ್ದು, ಆಫ್‌ಲೈನ್–ಓಎಂಆರ್ ಮಾದರಿಯಲ್ಲಿ ಪರೀಕ್ಷೆಗಳು ಜರುಗಲಿವೆ.

ಒಟ್ಟು 3,395 ಹುದ್ದೆಗಳಲ್ಲಿ ಪುರುಷ ಅಭ್ಯರ್ಥಿಗಳಿಗೆ 2266, ಮಹಿಳಾ ಅಭ್ಯರ್ಥಿಗಳಿಗೆ 755, ಸೇವಾನಿರತ ಪುರುಷರಿಗೆ 257, ಸೇವಾನಿರತ ಮಹಿಳೆಯರಿಗೆ 82 ಹಾಗೂ ತೃತೀಯ ಲಿಂಗಿ ಅಭ್ಯರ್ಥಿಗಳಿಗೆ 35 ಹುದ್ದೆಗಳನ್ನು ಕಾಯ್ದಿರಿಸಲಾಗಿದೆ. ಆಯ್ಕೆಯಾಗುವ ಅಭ್ಯರ್ಥಿಗಳಿಗೆ 37,500ರೂ. ರಿಂದ 76,100 ರೂ. ರವರೆಗಿನ ವೇತನ ಶ್ರೇಣಿ ಅನ್ವಯವಾಗಲಿದ್ದು, ರಾಷ್ಟ್ರೀಯ




ಪಿಂಚಣಿ ಯೋಜನೆ ಸೌಲಭ್ಯ ದೊರೆಯಲಿದೆ.

ಅರ್ಜಿ ಸಲ್ಲಿಸಲು ಇಚ್ಛಿಸುವ ಅಭ್ಯರ್ಥಿಗಳು ಪಿ.ಯು.ಸಿ ಅಥವಾ ಸಿ.ಬಿ.ಎಸ್.ಇ, ಐ.ಎಸ್.ಸಿ, ಎನ್.ಐ.ಓ.ಎಸ್ ಹಾಗೂ ಮೂರು ವರ್ಷಗಳ ಡಿಪ್ಲೊಮಾ ಸೇರಿದಂತೆ ಸರ್ಕಾರದ ನಿಯಮಾವಳಿಗಳನ್ವಯ ತತ್ಸಮಾನ ವಿದ್ಯಾರ್ಹತೆಯನ್ನು ಹೊಂದಿರಬೇಕು. ಜನ್ಮ ದಿನಾಂಕದ ಆಧಾರದ ಮೇಲೆ ಕನಿಷ್ಠ 18 ವರ್ಷ ವಯಸ್ಸಾಗಿರಬೇಕಾಗಿದ್ದು, ಸರ್ಕಾರವು ಒಂದು ಬಾರಿಗೆ ಅನ್ವಯವಾಗುವಂತೆ ಗರಿಷ್ಠ ವಯೋಮಿತಿಯಲ್ಲಿ 5 ವರ್ಷಗಳ ಸಡಿಲಿಕೆ ನೀಡಿದೆ. ಇದರನ್ವಯ ಸಾಮಾನ್ಯ ಅರ್ಹತೆಯ ಅಭ್ಯರ್ಥಿಗಳಿಗೆ 33 ವರ್ಷಗಳು, ಎಸ್.ಸಿ/ಎಸ್.ಟಿ ಮತ್ತು ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ 35 ವರ್ಷಗಳು ಹಾಗೂ ಬುಡಕಟ್ಟು ಅಭ್ಯರ್ಥಿಗಳಿಗೆ ಗರಿಷ್ಠ 38 ವರ್ಷಗಳ ವ ಂ ು ೋ ಮಿ ತಿ ಂ ು ನ ್ನ ನಿಗದಿಪಡಿಸಲಾಗಿದೆ.

ಅರ್ಜಿ ಸಲ್ಲಿಕೆ ಪ್ರಕ್ರಿಯೆಯು ಜೂನ್ 08, 2026 ರಿಂದ ಅಧಿಕೃತವಾಗಿ ಪ್ರಾರಂಭವಾಗಲಿದ್ದು, ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಜುಲೈ 03, 2026 ಕೊನೆಯ ದಿನಾಂಕವಾಗಿರುತ್ತದೆ. ಅಭ್ಯರ್ಥಿಗಳು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಅಧಿಕೃತ ವೆಬ್‌ಸೈಟ್ https://cetonline.karnataka.gov.in/kea/ ಲಿಂಕ್ ಮೂಲಕ ಮಾತ್ರವೇ ಅರ್ಜಿ ಸಲ್ಲಿಸಬೇಕಿದ್ದು, ಹೆಚ್ಚಿನ ಮಾಹಿತಿ ಹಾಗೂ ತಾಂತ್ರಿಕ ನೆರವಿಗಾಗಿ ಪ್ರಾಧಿಕಾರದ ಮಾಹಿತಿ ಕೇಂದ್ರದ ದೂರವಾಣಿ ಸಂಖ್ಯೆ: 080–23460460 ಅನ್ನು ಸಂಪರ್ಕಿಸಬಹುದು ಅಥವಾ ಅಧಿಕೃತ X ಖಾತೆ @KEA_KARNATAKAವೀಕ್ಷಿಸಬಹುದು.

# ಸಿಎಂ ಸದಾಶಿವನಗರದ ನಿವಾಸದ ಬಳಿ ವಾಮಾಚಾರ ಶಂಕೆ



**ಬೆಂಗಳೂರು, ಜೂ.7:** ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಸದಾಶಿವನಗರದ ನಿವಾಸದ ಕೂಗಳತೆ ದೂರದಲ್ಲೇ ಮಾಟ–ಮಂತ್ರದಂತಹ ವಾಮಾಚಾರ ಕೃತ್ಯ ನಡೆದಿರುವ ಶಂಕೆ ವ್ಯಕ್ತವಾಗಿದೆ. ಸದಾಶಿವನಗರದ ಜಿಬಿಎ ಮೈದಾನದ ಮುಂಭಾಗದ ರಸ್ತೆಯಲ್ಲಿ ಈ ಘಟನೆ ಬೆಳಕಿಗೆ ಬಂದಿದೆ. ಮುಖ್ಯಮಂತ್ರಿಗಳ ನಿವಾಸದ ಹಿಂಭಾಗದ ರಸ್ತೆಯೂ ಆಗಿರುವ ಈ ಸ್ಥಳದಲ್ಲಿ ಕಿಡಿಗೇಡಿಗಳು ತಡರಾತ್ರಿ ಈ ಕೃತ್ಯ ಎಸಗಿದ್ದಾರೆ ಎನ್ನಲಾಗಿದೆ. ರಸ್ತೆಯ ಮೇಲೆ ವೃತ್ತಾಕಾರ (ರಂಗೋಲಿ/ಗೆರೆ) ಹಾಕಿ, ಕೋಳಿಯನ್ನು ಕೊಯ್ದು, ನಿಂಬೆ ಹಣ್ಣುಗಳನ್ನು ಇಟ್ಟು ವಾಮಾಚಾರ ಮಾಡಲಾಗಿದೆ. ಅತ್ಯಂತ ಸುರಕ್ಷಿತ ಹಾಗೂ ಗಣ್ಯರು ವಾಸಿಸುವ ಪ್ರದೇಶದಲ್ಲೇ ಇಂತಹ ಸಾರ್ವಜನಿಕ ರಸ್ತೆಯಲ್ಲಿ ಮಾಟ–ಮಂತ್ರದ ಕುರುಹುಗಳು ಪತ್ತೆಯಾಗಿರುವುದು ಮಕ್ಕಳಲ್ಲಿ ಮತ್ತು ನಿವಾಸಿಗಳಲ್ಲಿ ಭಯ ಹುಟ್ಟಿಸಿದೆ. ಸದ್ಯ ಜಿಬಿಎ ಮೈದಾನದ ಈ ರಸ್ತೆಯಲ್ಲಿ ಓಡಾಡುವುದಕ್ಕೆ ಸಾರ್ವಜನಿಕರು ಹಾಗೂ ಪಾದಚಾರಿಗಳು ತೀವ್ರ ಹಿಂದೇಟು ಹಾಕುತ್ತಿದ್ದಾರೆ.

ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಧಾವಿಸಿದ ಸದಾಶಿವನಗರ ಠಾಣೆಯ ಪೊಲೀಸರು ಪರಿಶೀಲನೆ ನಡೆಸಿದ್ದಾರೆ. ವಾಮಾಚಾರ ಮಾಡ ಲಾಗಿದ್ದ ಸ್ಥಳದಲ್ಲಿದ್ದ ಕೋಳಿ ಹಾಗೂ ಇತರೆ ವಸ್ತುಗಳನ್ನು ಪೊಲೀಸರು ಅಲ್ಲಿಂದ ತೆರವುಗೊಳಿಸಿದ್ದಾರೆ. ಹತ್ತಿರದಲ್ಲೇ ಮುಖ್ಯಮಂತ್ರಿಗಳ ನಿವಾಸವಿರುವುದ 'ರಿಂದ ಈ ಪ್ರದೇಶದಲ್ಲಿ ಬಿಗಿ ಪೊಲೀಸ್ ಭದ್ರತೆ ಇರುತ್ತದೆ. ಆದಾಗ್ಯೂ ಇಂತಹ ಕೃತ್ಯ ನಡೆದಿರುವುದು ಹೇಗೆ ಎಂಬ ಪ್ರಶ್ನೆ ಮೂಡಿದ್ದು, ಸಿಸಿಟಿವಿ ದೃಶ್ಯಾವಳಿಗಳ ಆಧಾರದ ಮೇಲೆ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

# ಸೂಲಿಬೆಲೆಯಲ್ಲಿ ರೌಡಿಶೀಟರ್ ಅಟ್ಟಾಡಿಸಿ ಹತ್ಯೆ

**ಬೆಂಗಳೂರು, ಜೂ.7:** ರೌಡಿ ಶೀಟರ್ ಒಬ್ಬನನ್ನು ದುಷ್ಕರ್ಮಿಗಳು ಅಟ್ಟಾಡಿಸಿ ಬರ್ಬರವಾಗಿ ಕೊಚ್ಚಿ ಕೊಲೆ ಮಾಡಿ ಪರಾರಿಯಾಗಿರುವ ಘಟನೆ ಶನಿವಾರ ಸೂಲಿಬೆಲೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಹೊಸಕೋಟೆ ತಾಲ್ಲೂಕಿನ ಸೂಲಿಬೆಲೆ ಗ್ರಾಮದ ಜನತಾ ಕಾಲೋನಿಯ ನಿವಾಸಿ, ರೌಡಿಶೀಟರ್ ಖಲೀಂ ಉಲ್ಲಾಖಾನ್(36) ಭೀಕರವಾಗಿ ಕೊಲೆಯಾಗಿರುವ ರೌಡಿ. ಹಣ್ಣಿನ ವ್ಯಾಪಾರ ಮುಗಿಸಿಕೊಂಡು ರಾತ್ರಿ 11.30ರ ಸಂದರ್ಭದಲ್ಲಿ ದ್ವಿಚಕ್ರ ವಾಹನದಲ್ಲಿ ರೌಡಿ ಖಲೀಂ ಉಲ್ಲಾ ಖಾನ್ ಮನೆಗೆ ಹೋಗುತ್ತಿದ್ದನು. ಆತನ ಮನೆಯ ಸಮೀಪವೇ ಹೊಂಚು ಹಾಕಿ ಕುಳಿತಿದ್ದ ದುಷ್ಕರ್ಮಿಗಳು ಬೈಕ್‌ನಲ್ಲಿ ಬರುತ್ತಿದ್ದಂತೆ ಅಡ್ಡಗಟ್ಟಿ ಮಾರಕಾಸಗಳಿಂದ ದಾಳಿ ಮಾಡಿದ್ದಾರೆ. ಆಗ ತಪ್ಪಿಸಿಕೊಂಡು ಓಡಿಹೋಗುತ್ತಿದ್ದಾಗ ಅಟ್ಟಾಡಿಸಿಕೊಂಡು ಹೋಗಿ 20ಕ್ಕೂ ಹೆಚ್ಚು ಕಡೆ ಮಾರಕಾಸಗಳಿಂದ ಹಲ್ಲೆ ನಡೆಸಿ ಕೊಲೆ ಮಾಡಿ ಪರಾರಿಯಾಗಿದ್ದಾರೆ. ಸುದ್ದಿ ತಿಳಿದ ಸೂಲಿಬೆಲೆ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಪ್ರಕರಣ ದಾಖಲಿಸಿಕೊಂಡು ಕೊಲೆ ಮಾಡಿ ಪರಾರಿಯಾಗಿರುವ ದುಷ್ಕರ್ಮಿಗಳ ಬಂಧನಕ್ಕೆ ಬಲೆ



ಬೀಸಿದ್ದಾರೆ. ಹಳೇ ದ್ವೇಷದ ಹಿನ್ನೆಲೆಯಲ್ಲಿ ಈ ಕೊಲೆ ನಡೆದಿರಬಹುದೆಂದು ಪೊಲೀಸರು ಶಂಕಿಸಿದ್ದಾರೆ.

# ಎಸ್‌ಐಆರ್‌ಗೆ ತಪ್ಪು ಮಾಹಿತಿ ನೀಡಿದರೆ ಜೈಲುಶಿಕ್ಷೆ: ಡಿ.ಸಿ ಪೂವಿತಾ ಎಚ್ಚರಿಕೆ



**ರಾಯಚೂರು, ಜೂ. 7:** ಜಿಲ್ಲೆಯಲ್ಲಿ 2,46,095 ಮತದಾರರೇ ಪತ್ತೆಯಾಗಿಲ್ಲ. ಎರಡು ಬಾರಿ ಹೆಸರು ನೋಂದಣಿ ಮಾಡಿಕೊಂಡಿದ್ದರೆ ನೋಟಿಸ್ ನೀಡಲಾಗುವುದು. ಮತದಾರರ ಪರಿಷ್ಕರಣೆ ಸಂದರ್ಭದಲ್ಲಿ ತಪ್ಪು ಮಾಹಿತಿ ಒದಗಿಸಿದರೆ ಒಂದು ವರ್ಷ ಜೈಲು ಶಿಕ್ಷೆಗೆ ಒಳಗಾಗಬೇಕಾಗುತ್ತದೆ. ಆದ್ದರಿಂದ ಸರಿಯಾದ ಮಾಹಿತಿಯನ್ನೇ ನೀಡಬೇಕು ಎಂದು ಜಿಲ್ಲಾಧಿಕಾರಿ ಪೂವಿತಾ ಎಸ್. ಅವರು ಸಾರ್ವಜನಿಕರಿಗೆ ಎಚ್ಚರಿಕೆ ನೀಡಿದರು.

ತಪ್ಪು ಮಾಹಿತಿ ಒದಗಿಸಿದವರಿಗೆ ಜೈಲು ಶಿಕ್ಷೆ ಹಾಗೂ ದಂಡವನ್ನೂ ವಿಧಿಸಬಹುದಾಗಿದೆ. ಮತದಾರರು ಎಚ್ಚರಿಕೆಯಿಂದ ಅರ್ಜಿಗಳನ್ನು ಭರ್ತಿ ಮಾಡಿಕೊಡಬೇಕು ಎಂದು ಶುಕ್ರವಾರ ಮಾಧ್ಯಮಗೋಷ್ಠಿಯಲ್ಲಿಜಿಲ್ಲೆಯಲ್ಲಿ ವಿಶೇಷ ಸಮಗ್ರ ಮತದಾರರ ಪಟ್ಟಿ ಪರಿಷ್ಕರಣೆ ಈಗಾಗಲೇ ಪ್ರಾರಂಭವಾಗಿದೆ. ಜೂನ್ 30 ರಿಂದ ಜುಲೈ 29ವರೆಗೆ ಬಿಎಲ್‌ಒಗಳು ಮನೆ ಮನೆಗೆ ಭೇಟಿ ನೀಡಿ ಎನ್ಯುಮರೇಷನ್ ಅರ್ಜಿಗಳನ್ನು ನೀಡುತ್ತಿದ್ದು, 2025 ಮತದಾರರ ಪಟ್ಟಿಯಲ್ಲಿರುವವರು ಅರ್ಜಿಗಳನ್ನು ಭರ್ತಿ ಮಾಡಿ ಒಂದು ಪ್ರತಿಯನ್ನು ಕಾಯ್ದಿರಿಸಿಕೊಳ್ಳಬೇಕು. ಆನ್‌ಲೈನ್ ಮೂಲಕವೂ ಎನ್ಯುಮರೇಷನ್ ಅರ್ಜಿ ಸಲ್ಲಿಸಬಹುದಾಗಿದೆ. ಮತದಾರರ ಪಟ್ಟಿಯಲ್ಲಿರುವವ ಕುಟುಂಬದ ಯಾವುದೇ ಸದಸ್ಯರು ಮಾಹಿತಿ ನೀಡಿದರೂ ಬಿಎಲ್‌ಒಗಳು ಮಾಹಿತಿಯನ್ನು ದಾಖಲಿಸಿಕೊಳ್ಳಲಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ವಲಸೆ ಹೋದವರು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಮಾಹಿತಿ ನೀಡಬಹುದಾಗಿದೆ ಎಂದರು.

## ಬಡ, ಮಧ್ಯಮ ವರ್ಗದ ಮೇಲೆ ಕೇಂದ್ರದಿಂದ ಆರ್ಥಿಕ ಹೊರೆ

# ಅಡುಗೆ ಅನಿಲ ಏರಿಕೆಗೆ ಲಕ್ಷ್ಮೀ ಹೆಬ್ಬಾಳ್ಕರ್ ಖಂಡನೆ



**ಬೆಳಗಾವಿ, ಜೂ.7:** ಸಿಲಿಂಡರ್ ಬೆಲೆ ಮತ್ತೆ ಏರಿಕೆಯಾಗಿದ್ದು, ಕೇಂದ್ರ ಸರ್ಕಾರದ ದುಬಾರಿ ನೀತಿಯಿಂದ ಜನಸಾಮಾನ್ಯರು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಮಾಜಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದ್ದಾರೆ.

ಅಡುಗೆ ಅನಿಲ ಸಿಲಿಂಡರ್ ಬೆಲೆಯನ್ನು ಮತ್ತೆ 29 ರೂ. ಹೆಚ್ಚಿಸಿರುವ ಕೇಂದ್ರ ಸರ್ಕಾರದ ನಿರ್ಧಾರ ಖಂಡನೀಯ. ಕಳೆದ ಮೂರು ತಿಂಗಳಲ್ಲೇ ಇದು ಎರಡನೇ ಬಾರಿ ಬೆಲೆ ಏರಿಕೆಯಾಗಿದ್ದು, ಮಾರ್ಚ್ ತಿಂಗಳಲ್ಲಿ 60 ರೂ. ಹೆಚ್ಚಿಸಲಾಗಿತ್ತು. ಈಗಿನ 29 ರೂ. ಏರಿಕೆಯೊಂದಿಗೆ ಕೇವಲ ಮೂರು ತಿಂಗಳಲ್ಲಿ ಒಟ್ಟು 89 ರೂ. ಹೆಚ್ಚಳವಾಗಿದೆ ಎಂದರು.

ಒಂದು ಕಡೆ ಅಗತ್ಯ ವಸ್ತುಗಳ ಬೆಲೆ ದಿನದಿಂದ ದಿನಕ್ಕೆ ಏರುತ್ತಿದ್ದರೆ, ಮತ್ತೊಂದು ಕಡೆ ಅಡುಗೆ ಅನಿಲದ ಬೆಲೆ ಹೆಚ್ಚಿಸುವ ಮೂಲಕ ಕೇಂದ್ರದ ಬಿಜೆಪಿ ಸರ್ಕಾರ ಮಧ್ಯಮ ವರ್ಗ, ಬಡವರು ಮತ್ತು ಗೃಹಿಣಿಯರ ಮೇಲೆ ಮತ್ತಷ್ಟು ಆರ್ಥಿಕ ಹೊರೆ ಹಾಕಿದೆ ಎಂದು ಟೀಕಾಪ್ರಹಾರ ಮಾಡಿದರು.

ಅಡುಗೆ ಮನೆ ಎನ್ನುವುದು ಪ್ರತಿಯೊಂದು ಕುಟುಂಬದ ಜೀವನದ ಕೇಂದ್ರ ಬಿಂದು. ಗ್ಯಾಸ್ ಸಿಲಿಂಡರ್ ಬೆಲೆ ಏರಿಕೆಯ ನೇರ ಪರಿಣಾಮ ಮಹಿಳೆಯರು ನಿರ್ವಹಿಸುವ ಮನೆಯ ಬಜೆಟ್ ಮೇಲೆ ಬೀಳುತ್ತದೆ. ದಿನನಿತ್ಯದ ಖರ್ಚು ನಿಭಾಯಿಸಲು ಸಾಮಾನ್ಯ ಕುಟುಂಬಗಳು ಪರದಾಡುತ್ತಿರುವ ಸಂದರ್ಭದಲ್ಲಿ ಇಂತಹ ನಿರ್ಧಾರಗಳು ಜನವಿರೋಧಿ ಕ್ರಮಗಳಾಗಿವೆ ಎಂದರು.

ಈಗಾಗಲೇ ಪೆಟ್ರೋಲ್, ಡೀಸೆಲ್ ದರ ಏರಿಕೆಯಿಂದ ಜನರು ತತ್ತರಿಸಿದ್ದಾರೆ. ಕೆಲ ದಿನಗಳ ಹಿಂದೆ ಕೇಂದ್ರ ಸರ್ಕಾರ ವಾಣಿಜ್ಯ ಸಿಲಿಂಡರ್ ದರವನ್ನು ಏರಿಸಿದೆ. ಪರಿಣಾಮ ಹೋಟೆಲ್ ತಿಂಡಿ, ತಿನಿಸುಗಳು, ಟೀ-ಕಾಫಿ ದರ ಏರಿಕೆಯಾಗಿದೆ. ಈಗ ಅಡುಗೆ ಸಿಲಿಂಡರ್ ದರವನ್ನು ಭಾರೀ ಪ್ರಮಾಣದಲ್ಲಿ ಏರಿಸಲಾಗಿದ್ದು ಜನಸಾಮಾನ್ಯರ ಬದುಕು ಏನಾಗಬೇಕು ಎಂದು ಪ್ರಶ್ನೆ ಮಾಡಿದರು.

ಈ ಹಿಂದೆ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ನಿಮ್ಮ ಮಾಂಗಲ್ಯ ಕಸಿಯುತ್ತದೆ ಎಂಬ ಕೀಳು ಮಟ್ಟದ ಹೇಳಿಕೆ ನೀಡಿದ್ದ ಪ್ರಧಾನಿ ಮೋದಿಯವರು ಇಂದು ಜನರ ಬದುಕನ್ನೇ ಕಿತ್ತುಕೊಳ್ಳುತ್ತಿದ್ದಾರೆ ಎಂದು ಲಕ್ಷ್ಮೀ ಹೆಬ್ಬಾಳಕರ ಕಿಡಿಕಾರಿದರು.

ಕೇಂದ್ರ ಸರ್ಕಾರ ತಕ್ಷಣವೇ ಈ ಬೆಲೆ ಏರಿಕೆ ನಿರ್ಧಾರವನ್ನು ಹಿಂಪಡೆದು, ಸಾಮಾನ್ಯ ಕುಟುಂಬಗಳಿಗೆ ಪರಿಹಾರ ಒದಗಿಸಬೇಕು ಎಂದು ಒತ್ತಾಯಿಸಿದರು.

# ಸಂಪುಟ ವಿಸ್ತರಣೆಯಲ್ಲಿ ಲಂಬಾಣಿ ಸಮುದಾಯಕ್ಕೆ ಸಚಿವ ಸ್ಥಾನ ಕೊಡಿ: ವಿನೋದ್ ಚೌಹಾಣ್ ಆಗ್ರಹ



**ಕಲಬುರಗಿ, ಜೂ.7– :** ನೂತನ ಸಿಎಂ ಡಿ.ಕೆ ಶಿವಕುಮಾರ್ ಅವರು ಸಂಪುಟ ವಿಸ್ತರಣೆಯ ಸಂದರ್ಭದಲ್ಲಿ ಲಂಬಾಣಿ ಸಮುದಾಯಕ್ಕೂ ಸಚಿವ ಸ್ಥಾನದ ಭಾಗ್ಯ ನೀಡಬೇಕು ಎಂದು ಕಲಬುರಗಿ ಜಿಲ್ಲಾ ಬಂಜಾರಾ (ಲಂಬಾಣಿ) ಸೇವಾ ಸಂಘ ಹಾಗೂ ಕರ್ನಾಟಕ ಪ್ರದೇಶ ಬಂಜಾರಾ (ಲಂಬಾಣಿ) ಸೇವಾ ಸಂಘದ ಕಾರ್ಯದರ್ಶಿ ವಿನೋದ್ ಚೌಹಾಣ್ ಒತ್ತಾಯಿಸಿದ್ದಾರೆ.

ಸಾಮಾಜಿಕವಾಗಿ ಅತಿ ಹಿಂದುಳಿದ ಮತ್ತು ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಹಿಂದುಳಿದಿರುವ ಲಂಬಾಣಿ ಸಮುದಾಯದ ಶಾಸಕರಿಗೆ ಸಚಿವ ಸ್ಥಾನವನ್ನು ನೀಡಿ ನ್ಯಾಯ ಕಲ್ಪಿಸಬೇಕು. ವಿಧಾನಸಭಾ ಉಪ ಸಭಾಪತಿ ರುದ್ರಪ್ಪ ಲಮಾಣಿ ಅವರನ್ನು ಸಚಿವ ಸ್ಥಾನಕ್ಕೆ ಪರಿಗಣಿಸಬೇಕು ಎಂದು ಒತ್ತಾಯಿಸಿದ್ದಾರೆ.

ಸಿದ್ದರಾಮಯ್ಯ ಸಚಿವ ಸಂಪುಟದಲ್ಲಿ ರಾಜ್ಯದಲ್ಲಿ ಅತ್ಯಂತ ಗಣನೀಯ ಪ್ರಮಾಣದಲ್ಲಿರುವ ಸಮುದಾಯವನ್ನು ಸಚಿವ ಸ್ಥಾನ ನೀಡದೆ ಕಡೆಗಣಿಸಲಾಗಿದೆ. ಅದಕ್ಕಾಗಿ ಈ ಬಾರಿ ಸಚಿವ ಸಂಪುಟ ವಿಸ್ತರಣೆ ಸಂದರ್ಭದಲ್ಲಿ ಅವಕಾಶ ನೀಡಬೇಕು ಇಲ್ಲವಾದಲ್ಲಿ ಲಂಬಾಣಿ ಸಮುದಾಯ ಕಾಂಗ್ರೆಸ್ ಪಕ್ಷಕ್ಕೆ ತಕ್ಕ ಪಾಠ ಕಲಿಸಲಿದೆ ಹಾಗೂ ಬೀದಿಗಿಳಿದು ಹೋರಾಟ ಮಾಡುವುದು ನಿಶ್ಚಿತ ಎಂದುಮಾಧ್ಯಮ ಪ್ರಕಟಣೆಯಲ್ಲಿ ಎಚ್ಚರಿಕೆ ನೀಡಿದ್ದಾರೆ.

# ಶಬ್ದಕೋಶದಿಂದ ಓದುಗರಿಗೆ ವಿದ್ವತ್ ಲೋಕ ದರ್ಶನ: ಕೃಷ್ಣ ಕೊಲ್ಹಾರ ಕುಲಕರ್ಣಿ

**ಕಲಬುರಗಿ, ಜೂ. 7:** ಶಬ್ದಕೋಶಗಳು ಓದುಗರಿಗೆ ವಿದ್ವತ್ ಲೋಕಕ್ಕೆ ಕರೆದೊಯ್ಯುತ್ತವೆ ಎಂದು ವಿಜಯಪುರದ ಹಿರಿಯ ವಿದ್ವಾಂಸರಾದ ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ ಹೇಳಿದರು.

ಪಾಲಿ ಭಾಷೆ ಬಲ್ಲವರು ಕರ್ನಾಟಕದಲ್ಲಿ ಬಹಳ ಕಡಿಮೆ. ಪಾಲಿ ಭಾಷೆ ಕನ್ನಡದಲ್ಲಿ ಬಳಕೆಯಲ್ಲಿಯೂ ಇಲ್ಲ. ಇಂತಹ ಭಾಷೆ ಕುರಿತು ಮಾತನಾಡಲು ತುಂಬಾ ವಿದ್ವತ್ತು ಬೇಕು. ಮಲ್ಲೇಪುರಂ ಅವರು ಅದಕ್ಕೆ ಅರ್ಹರು. ಪಾಲಿ-ಕನ್ನಡ ಶಬ್ದಕೋಶ ಮಲ್ಲೇಪುರಂ ಅವರಂತಹ ವಿದ್ವಾಂಸರಿಂದ ಮಾತ್ರ ಸಾಧ್ಯ. ಅದನ್ನು ಅವರು ಸಮರ್ಥವಾಗಿ ಮಾಡಿದ್ದಾರೆ. ಐದು ಪಾಲಿ ಶಬ್ದಕೋಶ ಸಂಪುಟಗಳನ್ನು ಹೊರತಂದಿರುವುದು ನನಗೆ ತುಂಬಾ ಸಂತೋಷವನ್ನುಂಟು ಮಾಡಿವೆ. ಕನ್ನಡ ಸಾಹಿತ್ಯಕ್ಕೆ ಈ ಶಬ್ದಕೋಶಗಳು ಹೆಚ್ಚಿನ ಶ್ರೀಮಂತಿಕೆ ತಂದು ಕೊಡಲಿವೆ ಎಂದರು.

ಲೋಕಾರ್ಪಣೆಗೊಂಡ ಪಾಲಿ-ಕನ್ನಡ ಶಬ್ದಕೋಶಗಳ ಐದು ಸಂಪುಟಗಳ ಕುರಿತು ಪ್ರೊ.ಎಚ್.ಟಿ.ಪೋತೆಯವರು ಪರಿಚಯಾತ್ಮಕವಾಗಿ ಮಾತನಾಡುತ್ತಾ, ಕಲಬುರಗಿಯ ಪಾಲಿ ಇನ್‌ಸ್ಟಿಟ್ಯೂಟ್ ಬಹುದೊಡ್ಡ ಕನಸು ಹೊತ್ತು ಆರಂಭಗೊಂಡಿದೆ. ಅದರ ಒತ್ತಾಸೆಯಾಗಿ, ಸದಾಶಯದೊಂದಿಗೆ ಡಾ.ಮಲ್ಲಿಕಾರ್ಜುನ ಖರ್ಗೆಜಿಯವರ ಮಹಾದಾಸೆಯಿಂದ ಸಂಸ್ಥೆ ಜನ್ಮ ತಳೆದಿದೆ. ಬುದ್ಧನ ಚಿಂತನೆಗಳು, ಮೌಲ್ಯಗಳು ಜನಸಾಮಾನ್ಯರಿಗೆ ಮತ್ತು ಯುವಪೀಳಿಗೆಗೆ ತಲುಪಿಸಬೇಕಾದ ಅನಿವಾರ್ಯತೆಯಿದೆ ಎಂಬ ಕಾರಣಕ್ಕಾಗಿ ಪಾಲಿ ಅಧ್ಯಯನ ಸಂಸ್ಥೆ ಕಾರ್ಯಪ್ರವೃತ್ತಗೊಂಡಿದೆ. ಇಂತಹ ದೊಡ್ಡ ಸಂಸ್ಥೆಗೆ ಬಹುಶ್ರುತ ಭಾಷಾ ಪಂಡಿತರು, ಶಾಸ್ತ್ರ ಚೂಡಾಮಣಿಗಳು ಮತ್ತು ಅಪಾರ ವಿದ್ವತ್‌ಪೂರ್ಣ ವ್ಯಕ್ತಿತ್ವದ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ ಅವರನ್ನು ಗೌರವ ನಿರ್ದೇಶಕರಾಗಿ ನೇಮಿಸಿದ್ದಾರೆ. ಅದರ ಫಲಶ್ರುತಿಯಾಗಿಯೇ ಹಲವಾರು ಕಾರ್ಯ ಚಟುವಟಿಕೆಗಳು, ಪ್ರಕಟಣೆಗಳು ನಿರಂತರವಾಗಿ ನಡೆಯುತ್ತಿವೆ. ಇಲ್ಲಿಯವರೆಗೆ ಬುದ್ಧ ಮತ್ತು ಆತನ ಧಮ್ಮ ಕನ್ನಡ ಅನುವಾದ, ಸಂಕ್ಷಿಪ್ತ ಪಾಲಿ-ಕನ್ನಡ ನಿಘಂಟು, ಪ್ರವಾಸಿಗರು ಕಂಡ ಬೌದ್ಧ ಸಂಸ್ಕೃತಿ, ಪಾಲಿ-ಕನ್ನಡ ಶಬ್ದಕೋಶ ಐದು ಸಂಪುಟಗಳಂತಹ ಮೌಲಿಕ ಕೃತಿಗಳನ್ನು ಪ್ರಕಟಿಸುತ್ತಾ ಬಂದಿದೆ ಎಂದರು.



ಕಲಬುರಗಿ ನಗರದ ಸಿದ್ಧಾರ್ಥ ಕಾನೂನು ಪದವಿ ಮಹಾವಿದ್ಯಾಲಯದಲ್ಲಿ ಪಾಲಿ ಇನ್‌ಸ್ಟಿಟ್ಯೂಟ್ ವತಿಯಿಂದ ಹಮ್ಮಿಕೊಂಡ ಇಂಟರ್ ನ್ಯಾಶನಲ್ ಪಾಲಿ ಇನ್ಸ್ ಟಿಟ್ಯೂಟ್‌ನ ಗೌರವ ನಿರ್ದೇಶಕ ಪ್ರೊ. ಮಲ್ಲೇಪುರಂ ವೆಂಕಟೇಶ ಅವರು ಸಂಕಲಿಸಿದ ಪಾಲಿ-ಕನ್ನಡ ಶಬ್ದಕೋಶಗಳ ಐದು ಸಂಪುಟಗಳನ್ನು ಹಿರಿಯ ವಿದ್ವಾಂಸರಾದ ಡಾ.ಕೃಷ್ಣ ಕೊಲ್ಹಾರ ಕುಲಕರ್ಣಿ ಅವರು ಲೋಕಾರ್ಪಣೆ ಮಾಡಿದರು. ಪ್ರೊ.ಮಲ್ಲೇಪುರಂ ವೆಂಕಟೇಶ ಮತ್ತು ಪ್ರೊ.ಎಚ್.ಟಿ.ಪೋತೆ ಅವರಿದ್ದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಬಾಗಲಕೋಟೆ ವಿಶ್ವವಿದ್ಯಾಲಯದ ಕುಲಸಚಿವ ಪ್ರೊ.ಸೋಮಲಿಂಗ ಗೆಣ್ಣೂರು ಅವರು, ಡಾ.ಬಾಬಾಸಾಹೇಬ ಅಂಬೇಡ್ಕರ್ ಅವರು ಕೂಡ ಬುದ್ಧನ ವಿಚಾರಗಳನ್ನು ತಿಳಿದುಕೊಳ್ಳಲು ಪಾಲಿ ಭಾಷೆ, ಸಂಸ್ಕೃತ ಭಾಷೆಗಳನ್ನು ಅಧ್ಯಯನ ಮಾಡಿದರು. ಆ ಕಾರಣಕ್ಕಾಗಿಯೇ ಬುದ್ಧನ ವಿಚಾರಧಾರೆಗಳನ್ನು ಆಧುನಿಕ ಕಾಲಘಟ್ಟಕ್ಕೆ ಪುನರ್ ಜೀವನಗೊಳಿಸಿದರು. ಬುದ್ಧನ ವಿಚಾರಧಾರೆ, ಬಸವನ ಸಮಾನತೆ ತತ್ವಗಳಿಂದ ಪ್ರಭಾವಿತರಾಗಿಯೇ ಆಧುನಿಕ ಭಾರತದಲ್ಲಿ ಜನಸಾಮಾನ್ಯರಿಗೂ ಸಾಮಾಜಿಕ ನ್ಯಾಯವನ್ನು ಸಂವಿಧಾನಬದ್ಧವಾಗಿ ಒದಗಿಸಿದ್ದಾರೆಂದರು.

ಪಾಲಿ-ಕನ್ನಡ ಶಬ್ದಕೋಶಗಳ ಕರ್ತೃ ಹಾಗೂ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ ಅವರು ಮಾತನಾಡಿ, ಒಂದು ಭಾಷೆ ಸಾಹಿತ್ಯದ ಚಿಂತನೆ, ವೈಶಿಷ್ಟ್ಯತೆ, ವೈವಿಧ್ಯತೆಗಳನ್ನು ಅರಿತುಕೊಳ್ಳಬೇಕಾದರೆ ಶಬ್ದಕೋಶದ ಅಗತ್ಯತೆ ಎದ್ದು ಕಾಣುತ್ತಿತ್ತು. ಬುದ್ಧನ ಜೀವಪರ ಚಿಂತನೆ, ಮಾನವೀಯ ಮೌಲ್ಯಗಳು ಅರ್ಥೈಸಿಕೊಳ್ಳಬೇಕಾದರೆ ಪಾಲಿ ಭಾಷೆಯನ್ನು ಅಧ್ಯಯನ ಮಾಡಬೇಕಾಗುತ್ತದೆ. ಹೊಸ ಓದುಗರಿಗೆ ಪಾಲಿ ಅರ್ಥವಾಗಬೇಕಾದರೆ, ಪಾಲಿ- ಕನ್ನಡ ಶಬ್ದಕೋಶ ಸಂಪರ್ಕ ಸೇತುವೆಯಾಗಿ ಕಾರ್ಯನಿರ್ವಹಿಸಲಿದೆ. ಈ ಕಾರಣಕ್ಕೆ ಪಾಲಿ-ಕನ್ನಡ ಶಬ್ದಕೋಶ ರಚಿಸಬೇಕೆಂದು ನಿಶ್ಚಯಿಸಿಕೊಂಡು ನಿರಂತರ ಅಧ್ಯಯನ ಪ್ರವೃತ್ತನಾಗಿ ಹಲವಾರು ಶಬ್ದಕೋಶಗಳನ್ನು ಅವಲೋಕಿಸುತ್ತಾ, ಪಾಲಿ ಭಾಷೆಯ ಪದಗಳಿಗೆ ಕನ್ನಡ ಅರ್ಥವನ್ನು ನೀಡುವ ಪ್ರಯತ್ನವನ್ನು ಮಾಡಿದ್ದೇನೆ. ಈ ಶಬ್ದಕೋಶ ನಿರ್ಮಾಣದಲ್ಲಿ ಇಪ್ಪತ್ತಕ್ಕೂ ಹೆಚ್ಚು ವಿದ್ವಾಂಸರು ಕಾರ್ಯನಿರ್ವಹಿಸಿದ್ದಾರೆ. ಅವರಿಗೆ ಅಭಿನಂದನೆಗಳನ್ನು

> **ಬುದ್ಧನ ಜೀವಪರ ಚಿಂತನೆ, ಮಾನವೀಯ ಮೌಲ್ಯಗಳು ಅರ್ಥೈಸಿಕೊಳ್ಳಲು ಪಾಲಿ ಭಾಷೆಯ ಅಧ್ಯಯನ ಮಾಡಲೇಬೇಕಾಗುತ್ತದೆ.**
> **– ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ.**

ಸಲ್ಲಿಸುತ್ತೇನೆ.ಇಂತಹ ಮಹತ್ಕಾರ್ಯಕ್ಕೆ ಸಹಾಯ, ಸಹಕಾರ ನೀಡಿದವರು ಹಿರಿಯ ಮುತ್ಸದ್ದಿ ಮಲ್ಲಿಕಾರ್ಜುನ ಖರ್ಗೆಜೀಯವರು, ಪಾಲಿ ಸಂಸ್ಥೆ ಅಧ್ಯಕ್ಷ ರಾಹುಲ್ ಖರ್ಗೆ ಮತ್ತು ಸಂಸ್ಥೆ ಕಾರ್ಯದರ್ಶಿ ರಮೇಶ ಬೇಗಾರ್ ಅವರನ್ನು ನೆನೆಯಲೇಬೇಕು ಎಂದರು. ಇಂತಹ ಮಹತ್ವದ ಕೋಶಗಳನ್ನು ಎಲ್ಲರೂ ಓದಿ ಜ್ಞಾನ ಸಂಪಾದನೆ ಮಾಡಬೇಕು. ಅದಕ್ಕಾಗಿ ಸಂಪುಟಗಳ ಬೆಲೆ ಸಾಮಾನ್ಯರ ಕೈಗೆಟುಕುವಂತಿರ ಬೇಕು ಎಂದು ಮಲ್ಲಿಕಾರ್ಜುನ ಖರ್ಗೆಯವರು ಮತ್ತು ರಾಹುಲ ಖರ್ಗೆಯವರು ಕಡಿಮೆ ಬೆಲೆಗೆ ನೀಡಬೇಕೆಂದು ಸಂಸ್ಥೆಯ ಗೌರವ ನಿರ್ದೇಶಕರಾದ ಪ್ರೊ. ಮಲ್ಲೇಪುರಂ ಅವರಿಗೆ ಸಲಹೆ ನೀಡಿದ್ದಾರೆ. ಮುಂದುವರೆದು ಕಲ್ಯಾಣ ಕರ್ನಾಟಕ ಭಾಗದ ನೂರಕ್ಕೂ ಹೆಚ್ಚು ಕಾಲೇಜುಗಳಿಗೆ ಎರಡು ಸಾವಿರದ ಐದುನೂರು ಮುಖ ಬೆಲೆಯ ಐದು ಸಂಪುಟಗಳನ್ನು ಇದೇ ಸಮಾರಂಭದಲ್ಲಿ ಉಚಿತವಾಗಿ ವಿತರಿಸಲಾಯ್ತು.

# ಶಿವಂ ಕಂಪನಿ ನಂತರ ಮತ್ತೊಂದು ಸಂಸ್ಥೆಯ ಬಹುಕೋಟಿ ಹಗರಣ ಬೆಳಕಿಗೆ




**ಬೆಳಗಾವಿ, ಜೂ.7:** ಬೆಳಗಾವಿಯಲ್ಲಿ ಶಿವಾನಂದ್ ನೀಲಣ್ಣವರ್ ಅವರ ಶಿವಂ ಕಂಪನಿಯಿಂದ 4500 ಕೋಟಿ ವಂಚನೆ ಪ್ರಕರಣದ ಬೆನ್ನಲ್ಲೇ ಮತ್ತೊಂದು ಕಂಪನಿಯ ಬಹುಕೋಟಿ ಹಗರಣ ಬೆಳಕಿಗೆ ಬಂದಿದೆ. ಆದಿತ್ಯರಾಜ್ ಕ್ಯಾಪಿಟಲ್ ಕಂಪನಿಯು ಸಾವಿರಾರಾರು ಕೋಟಿ ರೂಪಾಯಿ ಗಳನ್ನು ಜನರಿಗೆ ವಂಚಿಸಿರುವ ಆರೋಪ ಕೇಳಿಬಂದಿದ್ದು, ಈ ಹಿನ್ನೆಲೆಯಲ್ಲಿ ಬೆಳಗಾವಿಯ ಕಂಪನಿ ಕಚೇರಿ, ಮಾಲೀಕ ಬಲರಾಮ್ ಮಾನೆ ನಿವಾಸದ ಮೇಲೆ ಅಧಿಕಾರಿಗಳು ದಾಳಿ ನಡೆಸಿದ್ದರು. ದಾಳಿ ಬೆನ್ನಲ್ಲೇ ತಲೆಮರೆಸಿಕೊಂಡಿದ್ದ ಬಲರಾಮ್ ಮಾನೆ ಇದೀಗ ವಿಡಿಯೋ ಹೇಳಿಕೆ ಬಿಡುಗಡೆ ಮಾಡಿದ್ದಾರೆ.

ಅಜ್ಞಾತ ಸ್ಥಳದಿಂದ ವಿಡಿಯೋ ಬಿಡುಗಡೆ ಮಾಡಿರುವ ಬಲರಾಮ್ ಮಾನೆ, ನಮ್ಮ ಸಂಸ್ಥೆ ಕಾನೂನು ಬದ್ಧವಾಗಿ ನಡೆಯುತ್ತಿರುವ ಸಂಸ್ಥೆಯಾಗಿದೆ. ನಾವು ಯಾವುದೇ ನಿಯಮಗಳನ್ನು ಗಾಳಿಗೆ ತೂರಿ ಸಂಸ್ಥೆ ನಡೆಸುತ್ತಿಲ್ಲ, ಎಲ್ಲವೂ ಕಾನೂನು ಪ್ರಕಾರವೇ ನಡೆಯುತ್ತಿದೆ. ಠೇವಣಿದಾರರು ಯಾರೂ ಧೈರ್ಯ ಕಳೆದುಕೊಳ್ಳಬಾರದು. ನಿಮ್ಮ ಬೆವರಿನ ಹಣ ನಮ್ಮ ಬಳಿ ಸುರಕ್ಷಿತವಾಗಿದೆ. ನಾವು ಪ್ರತಿಯೊಬ್ಬರಿಗೂ ಟಿಡಿಎಸ್ ಕಡಿತಗೊಳಿಸಿದ ನಂತರವೇ ಶೇರಿಂಗ್ ಅಮೌಂಟ್ ನೀಡಿದ್ದೇವೆ ಎಂದು ಹೂಡಿಕೆದಾರರಿಗೆ ಭರವಸೆ ನೀಡಿದ್ದಾರೆ.

ಈ ಪ್ರಕರಣ ಕೋರ್ಟ್ ಮೆಟ್ಟಿಲೇರಿದಾಗ ನಾವು ಖಂಡಿತವಾಗಿ ವಿಜಯ ಸಾಧಿಸುತ್ತೇವೆ. ನಾನು ನಿಮಗಾಗಿಯೇ ಹೋರಾಡುತ್ತಿದ್ದೇನೆ. ಈ ಕಾನೂನು ಸಂಘರ್ಷದಲ್ಲಿ ಗೆದ್ದು ಆದಿತ್ಯರಾಜ್ ಕಂಪನಿ ಮತ್ತೆ ಪುಟಿದೇಳಲಿದೆ. ನಾನು ಶೀಘ್ರದಲ್ಲೇ ಹಿಂತಿರುಗಿ ಬರುತ್ತೇನೆ, ನಾವೆಲ್ಲರೂ ಮತ್ತೆ ಸಿಗೋಣ ಎಂದು ತಿಳಿಸಿದ್ದಾರೆ.

ಈಗಾಗಲೇ ತಲೆಮರೆಸಿಕೊಂಡಿರುವ ಆರೋಪಿ ಬಲರಾಮ್ ಮಾನೆ ಪತ್ತೆಗಾಗಿ ಪೊಲೀಸರು ತೀವ್ರ ಶೋಧ ನಡೆಸುತ್ತಿದ್ದಾರೆ. ಈ ಬಗ್ಗೆ ಪ್ರತಿಕ್ರಿಯಿಸಿದ್ದ ಬೆಳಗಾವಿ ನಗರ ಪೊಲೀಸ್ ಆಯುಕ್ತ ಭೂಷಣ್ ಜಿ. ಬೊರಸೆ ಅವರು, "ಆರೋಪಿಯ ಬಂಧನಕ್ಕಾಗಿ ಈಗಾಗಲೇ ವಿಶೇಷ ಪೊಲೀಸ್ ತಂಡಗಳನ್ನು ರಚಿಸಲಾಗಿದ್ದು, ಶೀಘ್ರದಲ್ಲಿಯೇ ಬಲರಾಮ್ ಮಾನೆಯನ್ನು ಬಂಧಿಸಲಾಗುವುದು ಎಂದು ಹೇಳಿದ್ದಾರೆ.

ಈ ನಡುವೆ ಬಲರಾಮ್ ಮಾನೆ ವಿಡಿಯೋ ಬಿಡುಗಡೆ ಮಾಡಿ ಹೇಳಿಕೆ ನೀಡಿದ್ದಾರೆ.



ಬೆಂಗಳೂರಿನ ಲೋಕಭವನದಲ್ಲಿ ಭಾನುವಾರ ಕರ್ನಾಟಕದ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋತ್ ಅವರನ್ನು ಕೇರಳ ರಾಜ್ಯದ ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಭೇಟಿಯಾಗಿ ಪರಸ್ಪರ ಹಿತಾಸಕ್ತಿಯ ವಿಷಯಗಳ ಕುರಿತು ಅರ್ಥಪೂರ್ಣ ಚರ್ಚೆ ನಡೆಸಿದರು.

# ಮುನಿರಾಜುಗೆ ವಾಷಿಂಗ್ಟನ್ ಡಿಜಿಟಲ್ ವಿ.ವಿ. ಗೌರವ ಡಾಕ್ಟರೇಟ್ ಪ್ರದಾನ




**ನವದೆಹಲಿ, ಜೂ.7:** ನವದೆಹಲಿಯ ಹಾಲಿಡೆ ಇನ್ ಹೋಟೆಲ್ (ಡಿಸ್ಟ್ರಿಕ್ಟ್ ಸೆಂಟರ್, 13ಎ, ಮಯೂರ್ ಪ್ಲೇಸ್, ಮಯೂರ್ ವಿಹಾರ್, ನವದೆಹಲಿ, ದೆಹಲಿ – 110091) ನಲ್ಲಿ ಜೂ.6ರ ಶನಿವಾರ ನಡೆದ ಸಮಾರಂಭದಲ್ಲಿ 10ಗಂಟೆಯಿಂದ ಮಧ್ಯಾಹ್ನ 3 ಗಂಟೆವರೆಗೆ ನಡೆಯುವ ಸಮಾರಂಭದಲ್ಲಿ ಆರ್. ಮುನಿರಾಜು ಅವರಿಗೆ ಅಮೇರಿಕದ ವಾಷಿಂಗ್ಟನ್ ಡಿಜಿಟಲ್ ಯೂನಿವರ್ಸಿಟಿಯಿಂದ ನೀಡುವ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು. ಇತರರಿಗೆ ಪ್ರೇರಣೆ ನೀಡುವ, ಸಮಾಜದ ಪ್ರಗತಿಗೆ ಕೊಡುಗೆ ನೀಡುವ ಮತ್ತು ನಾಯಕತ್ವ ಹಾಗೂ ಸೇವೆಯ ಅತ್ಯುನ್ನತ ಮೌಲ್ಯಗಳನ್ನು ಎತ್ತಿಹಿಡಿಯುವ ಕಾರ್ಯಕ್ಕಾಗಿ ಮುನಿರಾಜು ಅವರಿಗೆ ಈ ಗೌರವ ಸಂದಿದೆ. ಸಮಾರಂಭದಲ್ಲಿ ಯೂನಿವರ್ಸಿಟಿಯ ಅಧಿಕಾರಿಗಳು ಭಾಗವಹಿಸಿದ್ದರು.

## ಮಹಾಲಿಂಗಪುರ ಪುರಸಭೆ ಮಹಿಳಾ ಸದಸ್ಯೆಯರ ಎಳೆದಾಡಿದ ಪ್ರಕರಣ:

# ಇಂದು ಶಾಸಕ ಲಕ್ಷ್ಮಣ ಸವದಿ ಸೇರಿ ಇತರ 31 ಮಂದಿ ವಿಚಾರಣೆ

**ಮಹಾಲಿಂಗಪುರ, ಜೂ.7:** 2020 ನವೆಂಬರ್ 9ರಂದು ನಡೆದ ಪುರಸಭೆಯ ಅಧ್ಯಕ್ಷ ಚುನಾವಣೆಯ ಸ್ನೇಹಲ್ ಶಿವಾನಂದ ಅಂಗಡಿ ಅಧ್ಯಕ್ಷರಾಗಿ ಆಯ್ಕೆ ವೇಳೆ ಶಾಸಕ ಸಿದ್ದು ಸವದಿ, ಬಿಜೆಪಿ ಸದಸ್ಯರು, ಮುಖಂಡರು ಸೇರಿ ಮೂವರು ಮಹಿಳಾ ಸದಸ್ಯೆಯರ ಎಳೆದಾಟದ ಗಲಾಟೆ ಪ್ರಕರಣ ದೇಶ-ವಿದೇಶದ ಗಮನ ಸೆಳೆದಿತ್ತು. ಅಂದು ಸದಸ್ಯೆ ಚಾಂದನಿ ನಾಗೇಶ ನಾಯಕ ಸ್ಥಳೀಯ ಠಾಣೆಯಲ್ಲಿ ಶಾಸಕ ಸವದಿ ಸೇರಿ 31 ಜನರ ವಿರುದ್ಧ ಪ್ರಕರಣ ದಾಖಲಿಸಿದ್ದರು. ಸದರಿ ಪ್ರಕರಣವು ಬನಹಟ್ಟಿ ಜೆಎಂಎಫ್‌ಸಿ ಕೋರ್ಟ್‌ನಲ್ಲಿದೆ.

ಬೆಂಗಳೂರು ಸಿಐಡಿ ವಿಚಾರಣೆಗಳ ವಿಭಾಗದ ಪೊಲೀಸ್ ಉಪಾಧೀಕ್ಷರಾದ ಪ್ರಭಾವತಿ ಪಾಂಡುರಂಗ ನೇತೃತ್ವದ ತಂಡವು 2025ರ ಏಪ್ರಿಲ್‌ನಲ್ಲಿ ಪ್ರಕರಣದ ಮರು ತನಿಖೆ ನಡೆಸಿತ್ತು. ಪ್ರಕರಣದ ವಿಚಾರಣೆ ಈಗ ಬೆಂಗಳೂರು ಸಿಟಿ ಉತ್ತರದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿ ನಡೆಯಲಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ತೇರದಾಳ ಮತಕ್ಷೇತ್ರದ ಶಾಸಕ ಸಿದ್ದು ಸವದಿ, ಶೇಖರ ಅಂಗಡಿ, ಶ್ರೀಶೈಲ ಅಂಗಡಿ, ಅಶೋಕ ಅಂಗಡಿ, ಪ್ರಹ್ಲಾದ ಸಣ್ಣಕ್ಕಿ, ಸರಸ್ವತಿ ರಾಮೋಜಿ, ರವಿ ಜವಳಗಿ, ರಾಜು ಚಮಕೇರಿ, ಶಿವಪ್ಪ ದೇಸಾಯಿ, ರಾಜೇಂದ್ರ ಅಂಬಲಿ, ವಿಶ್ವನಾಥ ನಾಗರಾಳೆ, ಮಹಾಲಿಂಗಪ್ಪ ಕುಳ್ಳೊಳ್ಳಿ, ಮಹಾಂತೇಶ ಹಿಟ್ಟಿನಮಠ, ಬಸವರಾಜ ಹಿಟ್ಟಿನಮಠ, ಬಸವರಾಜ ಪಾಟೀಲ, ಚನ್ನಪ್ಪ ಪಟ್ಟಣಶೆಟ್ಟಿ, ಅರ್ಜುನ ಮೋಪಗಾರ, ಮಹಾಲಿಂಗಪ್ಪ ಸನದಿ, ಸ್ನೇಹಲ್ ಅಂಗಡಿ, ಲಕ್ಷ್ಮೀ ಮುದ್ದಾಪೂರ, ಬಸವರಾಜ ಯರಗಟ್ಟಿ ಸೇರಿದಂತೆ ಬಿಜೆಪಿ ಪಕ್ಷದ ಮುಖಂಡರು, ಪುರಸಭೆ ಮಾಜಿ ಸದಸ್ಯರು ಸೇರಿ 21 ಜನರಿಗೆ ಬೆಂಗಳೂರು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಜೂನ್ 8 ರಂದು ವಿಚಾರಣೆಗೆ ಹಾಜರಾಗಲು ಸಮನ್ಸ್ ಜಾರಿ ಮಾಡಿದ್ದಾರೆ.

ಪ್ರಕರಣದ ಕುರಿತು 2021 ಜುಲೈ 2 ರಂದು ಸಿಐಡಿ ವಿಚಾರಣೆಗಳ ವಿಭಾಗದ ಅಂದಿನ ಪೊಲೀಸ್ ಉಪಾಧೀಕ್ಷರಾದ ಸತ್ಯವತಿ ಎಸ್.ನೇತೃತ್ವ 5 ಜನ ಅಧಿಕಾರಿಗಳ ತಂಡವು ಪಟ್ಟಣಕ್ಕೆ ಆಗಮಿಸಿ 6 ದಿನಗಳ ಕಾಲ ಪುರಸಭೆ ಸದಸ್ಯರು, ಶಾಸಕ ಸಿದ್ದು ಸವದಿ ಅವರ ವಿಚಾರಣೆ ನಡೆಸಿತ್ತು. ಆಗ ಶಾಸಕರು ಸೇರಿದಂತೆ ಎಲ್ಲರೂ ಜಾಮೀನು ಪಡೆದಿದ್ದರು. ನಂತರ ವಿಚಾರಣೆ ನಡೆಸಿದ ಸತ್ಯವತಿ ಅವರ ವರ್ಗಾವಣೆ, ಅವರ ಜಾಗಕ್ಕೆ ಬಂದ ಬೇರೆ ಅಧಿಕಾರಿಗಳಿಂದ 2022?23 ರಲ್ಲಿ 2ನೇ ಬಾರಿ ವಿಚಾರಣೆ ನಡೆದಿತ್ತು. ಬಿಜೆಪಿ ಸರ್ಕಾರದ ಅವಧಿ(2023 ಜನವರಿ)ಯಲ್ಲಿ ಸಿಐಡಿ ಅಧಿಕಾರಿಗಳು ಬಿ ರೀಪೋರ್ಟ್ ಹಾಕಿ ಪ್ರಕರಣ ವಜಾಗೊಳಿಸಿದ್ದರು.



ಗಲಾಟೆಗೆ ಸಂಬಂಧಿಸಿದ ಎಲ್ಲಾ ಅಗತ್ಯ ದಾಖಲೆಗಳಿವೆ. ಸಿಆಯ್ಡಿ ಅಧಿಕಾರಿಗಳು ಸಮಗ್ರ ತನಿಖೆ ನಡೆಸಿದ್ದರೂ ಸಹ ದೂರದಾರರು ನೀಡಿದ ಸಾಕ್ಷಾಧಾರಗಳನ್ನು ಪರಿಗಣಿಸದೆ ತಮ್ಮ ಪ್ರಕರಣಕ್ಕೆ ಬಿ ರೀಪೋರ್ಟ್ ಹಾಕಿದ್ದನ್ನು ಪ್ರಶ್ನಿಸಿ ಪುರಸಭೆ ಸದಸ್ಯೆ ಚಾಂದನಿ ನಾಯಕ ಮತ್ತೆ ನ್ಯಾಯಾಲಯದ ಮೊರೆ ಹೋದ ಕಾರಣ ಬನಹಟ್ಟಿ ಜೆಎಂಎಫ್ಸಿ ಕೋರ್ಟ ದೂರುದಾರರ ಸಾಕ್ಷಿಗಳನ್ನು ಎತ್ತಿಹಿಡಿದು, ಸಿಐಡಿ ಅಧಿಕಾರಿಗಳು ಹಾಕಿರುವ ಬಿ ರೀಪೋರ್ಟ್ ವಜಾಗೊಳಿಸಿ, ಸಿಆರ್‌ಪಿಸಿ ಸೆಕ್ಷನ್ 153(3) ಅಡಿಯಲ್ಲಿ ನೀಡಲಾದ ಅಧಿಕಾರಗಳನ್ನು ಚಲಾಯಿಸಿ ಪ್ರಕರಣದ ಹೆಚ್ಚಿನ ಮರು ತನಿಖೆ ನಡೆಸಿ, ಸಮಗ್ರ ವರದಿ ನೀಡಬೇಕೆಂದು ಸಿಐಡಿ ತನಿಖಾಧಿಕಾರಿಗಳಿಗೆ ಆದೇಶಿಸಿತ್ತು.ಬನಹಟ್ಟಿ ಕೋರ್ಟ ಆದೇಶದ ಹಿನ್ನಲೆ ಸಿಐಡಿ ಅಧಿಕಾರಿಗಳು 2025ರಲ್ಲಿ ಎರಡು ಬಾರಿ ಮಹಾಲಿಂಗಪುರಕ್ಕೆ ಆಗಮಿಸಿ ಪ್ರಕರಣದ ಸಂಪೂರ್ಣ ಮರು ತನಿಖೆ ನಡೆಸಿ, 29 ಏಪ್ರೀಲ್ 2026 ರಂದು ನ್ಯಾಯಾಲಯಕ್ಕೆ ಎರಡು ಸಾವಿರ ಪುಟಗಳ ಚಾರ್ಜಿಟ್ ಸಲ್ಲಿಸಿದ್ದಾರೆ. ಸಿಐಡಿ ತಂಡದಿಂದ 3 ಬಾರಿ ವಿಚಾರಣೆ ನಡೆದ ನಂತರ ಪ್ರಕರಣವು ಜನಪ್ರತಿನಿಧಿಗಳ ನ್ಯಾಯಾಲಯದ ಮುಂದೆ ಬಂದಿದೆ.

ಗಲಾಟೆಯಲ್ಲಿ ಅಧ್ಯಕ್ಷರಾದ ಸ್ನೇಹಲ್ ಅಂಗಡಿ 16 ತಿಂಗಳ ಅಧಿಕಾರ ಮುಗಿಸಿಕೊಂಡು (2022ರ ಮಾರ್ಚ) 4 ವರ್ಷಗಳ ಹಿಂದೆಯೇ ಮನೆಗೆ ಹೋಗಿದ್ದಾರೆ. ನಂತರ ಬಿಜೆಪಿಯ ಬಸವರಾಜ ಹಿಟ್ಟಿನಮಠ, ಕಾಂಗ್ರೆಸ್ನ ಯಲ್ಲನಗೌಡ ಪಾಟೀಲ ತಲಾ 15 ತಿಂಗಳು ಪುರಸಭೆ ಅಧ್ಯಕ್ಷರಾದರು. ಅಲ್ಲದೇ 2025 ನವೆಂಬರ್ 8ಕ್ಕೆ ಪುರಸಭೆ ಸದಸ್ಯರ 5 ವರ್ಷಗಳ ಅಧಿಕಾರವಧಿ ಮುಗಿದು 8 ತಿಂಗಳು ಕಳೆದಿದೆ. ಇದೇ 2026ರ ನವೆಂಬರ್?ಡಿಸೆಂಬರ್‌ನಲ್ಲಿ ಪುರಸಭೆಗೆ ಮತ್ತೆ ಚುನಾವಣೆ ಎದುರಾಗಲಿದೆ. ಅಷ್ಟರೊಳಗೆ ಈ ಪ್ರಕರಣ ಮುಗಿಯುವದೋ ಇಲ್ಲವೋ! ಎಂಬುವದೇ ಸದ್ಯದ ಯಕ್ಷ ಪ್ರಶ್ನೆ.

## ತಾಯಿ ಮೇಲೆ ಮಾರಣಾಂತಿಕ ಹಲ್ಲೆ

# ಆನ್‌ಲೈನ್ ಗೇಮ್ ಆಡದಂತೆ ಬುದ್ಧಿವಾದ ಹೇಳಿದ ತಂದೆ, ಅಕ್ಕನನ್ನೇ ಕೊಂದ ಪುತ್ರ

**ಗಂಗಾವತಿ, ಜೂ.7:** ವಿದ್ಯಾರ್ಥಿಯೊಬ್ಬನಿಗೆ ಮೊಬೈಲ್ ನಲ್ಲಿ ಆನ್ ಲೈನ್ ಗೇಮ್ ಆಡದಂತೆ ಬುದ್ದಿವಾದ ಹೇಳಿದ್ದಕ್ಕೆ ತಂದೆ ಹಾಗೂ ಅಕ್ಕನನ್ನೇ ಚಾಕುವಿನಿಂದ ಚುಚ್ಚಿ ಕೊಲೆ ಮಾಡಿ ತಾಯಿಯ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿರುವ ಅಮಾನುಷ ಘಟನೆ ಗಂಗಾವತಿ ತಾಲೂಕಿನ ಅಯೋಧ್ಯೆ ಗ್ರಾಮದಲ್ಲಿ ನಿನ್ನೆ ರಾತ್ರಿ ನಡೆದಿದೆ. ಅಯೋಧ್ಯೆ ಗ್ರಾಮದ ಪ್ರಗತಿ (19) ಹಾಗೂ ವೆಂಕಟನಾಯ್ಡು (45) ಕೊಲೆಯಾದವರು.

ಗಾಯಗೊಂಡಿರುವ ತಾಯಿ ಸೌಜನ್ಯ (40) ಅವರನ್ನು ಬಳ್ಳಾರಿ ಬಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದ್ದು,ಅವರ ಸ್ಥಿತಿ ಚಿಂತಾಜನಕವಾಗಿದೆ. ಅಯೋಧ್ಯೆ ಗ್ರಾಮದ ಸರಕಾರಿ ಶಾಲೆಯ ಸಮೀಪದ ಮನೆಯೊಂದರಲ್ಲಿ ಕೃತ್ಯ ನಡೆಸಿದ ಮಗ ಸಾಯಿ ನಾಯ್ಡು ಆತ್ಮಹತ್ಯೆ ಯತ್ನಿಸಿದ್ದು,ಅಸ್ವಸ್ಥಗೊಂಡ ಆತನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ವಿದ್ಯಾನಿಕೇತನ ಕಾಲೇಜಿ ದ್ವಿತೀಯ ಪಿಯುಸಿ ಓದುತ್ತಿರುವ ಸಾಯಿ ನಾಯ್ಡು (18) ಯಾವಾಗಲೂ ಮೊಬೈಲ್ ನಲ್ಲಿ ಆನ್ ಲೈನ್ ಗೇಮ್ ಆಡುತ್ತಿದ್ದ ಎಂದು ತಿಳಿದು ಬಂದಿದೆ.

ನಿನ್ನೆ ರಾತ್ರಿ ಅಕ್ಕ ಪ್ರಗತಿ (20) ಆನ್‌ಲೈನ್ ಗೇಮಿಂಗ್ ಆಡದಂತೆ ಬುದ್ಧಿ ಮಾತು ಹೇಳಿದ್ದಾರೆ. ಇಬ್ಬರ ಮಧ್ಯೆ ತೀವ್ರ ಜಗಳವಾಗಿದ್ದು ಸಾಯಿ ನಾಯ್ಡು ಚಾಕುವಿನಿಂದ ಅಕ್ಕನಿಗೆ ಇರಿದಿದ್ದಾನೆ. ಜಗಳ ಬಿಡಿಸಲು ಬಂದ ತಂದೆ ಯಂಕಣ್ಣ ನಾಯ್ಡು ತಾಯಿ ಸೌಜನ್ಯ ಮೇಲೂ ಸಾಯಿ ನಾಯ್ಡು ಚಾಕುವಿನಿಂದ ಇರಿದು ಗಾಯಗೊಳಿಸಿದ್ದಾನೆ.

ಚಿಕಿತ್ಸೆ ಫಲಕಾರಿ ಯಾಗದೇ ಯಂಕಣ್ಣ (48) ಮೃತ ಪಟ್ಟಿದ್ದು ತಾಯಿ ಸೌಜನ್ಯ ಹಾಗೂ ಆರೋಪಿ ಸಾಯಿ ನಾಯ್ಡುಗೆ ಬಳ್ಳಾರಿ ವಿಮ್ಸ್‌ನಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.ಸ್ಥಳಕ್ಕೆ ಗಂಗಾವತಿ ಪೊಲೀಸರು ಆಗಮಿಸಿ ಪರಿಶೀಲನೆ ನಡೆಸಿದ್ದಾರೆ. ಮಗನೇ ಕೊಲೆ ಮಾಡಿರುವುದಾಗಿ ಮೃತ ವೆಂಕಟನಾಯ್ಡು ತಂದೆ ತಾತಾರಾವ್ ದೂರು ನೀಡಿದ್ದಾರೆ.

# ಹಳೇ ಲಾಕರ್ ಭಾರ ಎತ್ತಲಾಗದೇ 6 ಲಕ್ಷ ಬಿಟ್ಟು ಹೋದ ಕಳ್ಳರು

**ಕಲಬುರಗಿ, ಜೂ. 7:** ಜಿಲ್ಲೆಯ ಆಳಂದ ಎಪಿಎಂಸಿ ಆವರಣದ ಸಂಕೀರ್ಣದಲ್ಲಿ ಸ್ಥಳಾಂತರಗೊಂಡ ಅಂಚೆ ಇಲಾಖೆ ಕಚೇರಿಗೆ ರಾತ್ರಿ ನುಗ್ಗಿದ್ದ ಕಳ್ಳರು, ಅಲ್ಲಿನ ಲಾಕರ್ ದೋಚುವ ವಿಫಲಯತ್ನ ನಡೆಸಿದ್ದಾರೆ. ಅಂಚೆ ಇಲಾಖೆ ಕಚೇರಿಯಲ್ಲಿದ್ದ ಕಬ್ಬಿಣದ ಹಳೆಯ ಲಾಕರ್‌ನಲ್ಲಿ 6 ಲಕ್ಷ ಹಣ ಇತ್ತು. ಈ ಹಣವನ್ನು ದೋಚಿಕೊಂಡು ಹೋಗಲು ಕಳ್ಳರು ಕಚೇರಿ ಬಾಗಿಲು ಬೀಗ ಮುರಿದು ಒಳಗೆ ನುಸುಳಿದ್ದರು. ಕಚೇರಿಯಲ್ಲಿ ವಿವಿಧೆಡೆ ಹುಡುಕಿದರೂ ಅವರ ಕೈಗೆ ಏನೂ ಸಿಗಲಿಲ್ಲ. ಕೊನೆಗೆ ಅಲ್ಲಿದ್ದ ಕಬ್ಬಿಣದ ಲಾಕರ್ ಒಡೆಯುವ ಪ್ರಯತ್ನ ಮಾಡಿದ್ದರು.

ಲಾಕರ್ ಹಳೆ ಕಾಲದ ಅತ್ಯಮತ ಭಾರ ಮತ್ತು ಗಟ್ಟಿಮುಟ್ಟಾಗಿದ್ದು, ಕಳ್ಳರಿಂದ ಅದನ್ನು ಒಡೆಯುವ



ಪ್ರಯತ್ನ ಸಾಧ್ಯವಾಗಿಲ್ಲ. ಕೊನೆಗೆ ಲಾಕರ್ ಹೊತ್ತುಕೊಂಡು ಹೋಗುವ ಇರಾದೆಯಿಂದ ಕಚೇರಿಯ ಹೊರಗೆ ತಂದಿದ್ದಾರೆ. ಹೆಚ್ಚು ಭಾರವಾದ ಲಾಕರ್ ದೋಚಿಕೊಂಡು ಪರಾರಿಯಾಗಲು ಅವರಿಂದ ಅಸಾಧ್ಯವಾಗಿದ್ದರಿಂದ ಅದನ್ನು ಅಲ್ಲಿಯೇ ಬಿಟ್ಟು ಪರಾರಿಯಾಗಿದ್ದಾರೆ.

ಈ ಹಣವನ್ನು ದೋಚಿಕೊಂಡು ಹೋಗಲು ಕಳ್ಳರು ಕಚೇರಿ ಬಾಗಿಲು ಬೀಗ ಮುರಿದು ಒಳಗೆ ನುಸುಳಿದ್ದರು. ಕಚೇರಿಯಲ್ಲಿ ವಿವಿಧೆಡೆ ಹುಡುಕಿದರೂ ಅವರ ಕೈಗೆ ಏನೂ ಸಿಗಲಿಲ್ಲ. ಕೊನೆಗೆ ಅಲ್ಲಿದ್ದ ಕಬ್ಬಿಣದ ಲಾಕರ್ ಒಡೆಯುವ ವಿಲ ಪ್ರಯತ್ನ ಮಾಡಿದ್ದರು.

ಲಾಕರ್ ಹಳೆ ಕಾಲದ್ದು ಹಾಗೂ ಗಟ್ಟಿಮುಟ್ಟಾಗಿದ್ದರಿಂದ ಅವರ ಪ್ರಯತ್ನ ಸಾಧ್ಯವಾಗಿಲ್ಲ. ಕೊನೆಗೆ ಲಾಕರ್ ಹೊತ್ತುಕೊಂಡು ಹೋಗುವ ಇರಾದೆಯಿಂದ ಕಚೇರಿಯ ಹೊರಗೆ ಬಂದಿದ್ದಾರೆ. ಹೆಚ್ಚು ಭಾರವಾದ ಲಾಕರ್ ದೋಚಿಕೊಂಡು ಪರಾರಿಯಾಗಲು ಅವರಿಂದ ಅಸಾಧ್ಯವಾಗಿದ್ದರಿಂದ ಅದನ್ನು ಅಲ್ಲಿಯೇ ಬಿಟ್ಟು ಪರಾರಿಯಾಗಿದ್ದಾರೆ.

ಸಿಬ್ಬಂದಿ ಬೆಳಿಗ್ಗೆ ಕಚೇರಿ ತೆರೆದಾಗ ಕಳುವು ಯತ್ನ ಘಟನೆ ಕಂಡು ಬಂದಿದ್ದು ಆಳಂದ ಪೊಲೀಸರಿಗೆ ದೂರು ನೀಡಲಾಗಿದೆ ಎಂದು ಅಂಚೆ ಇಲಾಖೆ ಅಧಿಕಾರಿ ಎನ್. ಕೆ. ಪಠಾಣ ತಿಳಿಸಿದರು.

## ಗೃಹಲಕ್ಷ್ಮೀ ಪಟ್ಟಿಯಿಂದ 9251 ಹೆಸರು ಕಡಿತ

# ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೃತಪಟ್ಟ ಫಲಾನುಭವಿಗಳ ಪತ್ತೆ ಕಾರ್ಯ ಪ್ರಗತಿ




**ಮಂಗಳೂರು, ಜೂ.7:** ರಾಜ್ಯ ಸರ್ಕಾರದ ಪಂಚ ಗ್ಯಾರಂಟಿಗಳಲ್ಲಿ ಒಂದಾಗಿರುವ 'ಗೃಹಲಕ್ಷ್ಮಿ' ಯೋಜನೆಯ ಫಲಾನುಭವಿಗಳಲ್ಲಿ ಮೃತಪಟ್ಟವರನ್ನು ಗುರುತಿಸುವ ಕಾರ್ಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆಯುತ್ತಿದ್ದು, ಈವರೆಗೆ 9,251 ಮಂದಿಯ ಹೆಸರು ಕಡಿತಗೊಂಡಿದೆ.

ಗೃಹಲಕ್ಷ್ಮಿ ಯೋಜನೆಯಡಿ ಪ್ರತಿ ಕುಟುಂಬದ ಯಜಮಾನಿಗೆ ಪ್ರತಿ ತಿಂಗಳು 2 ಸಾವಿರ ರೂ.ಗಳನ್ನು ಸರ್ಕಾರ ಪಾವತಿಸುತ್ತದೆ. ಯೋಜನೆ ಆರಂಭವಾದ 2023ರ ಆಗಸ್ಟ್‌ನಿಂದ ಜಿಲ್ಲೆಯಲ್ಲಿ 3.82 ಲಕ್ಷ ಮಹಿಳೆಯರು ಹೆಸರು ನೋಂದಾಯಿಸಿಕೊಂಡಿದ್ದರು. ಅವರಲ್ಲಿ ಅನೇಕರು ಮೃತಪಟ್ಟಿದ್ದು, ಅವರ ಖಾತೆಗೂ ಹಣ ಸಂದಾಯ ವಾಗುತ್ತಿತ್ತು. ಇದನ್ನು ತಡೆಯುವ ಉದ್ದೇಶದಿಂದ, ಯೋಜನೆ ಅನುಷ್ಠಾನದ ಹೊಣೆ ನಿರ್ವಹಿಸುತ್ತಿರುವ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮೃತ ಫಲಾನುಭವಿಗಳ ಪತ್ತೆ ಕಾರ್ಯ ನಡೆಸುತ್ತಿದೆ.

'ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳಾಗಲು ಅರ್ಹತೆ ಯಿದ್ದರೂ ಬ್ಯಾಂಕ್ ಖಾತೆಗೆ ಆಧಾರ್ ಸಂಖ್ಯೆ ಸೀಡಿಂಗ್ ಆಗದವರನ್ನು ಗುರುತಿಸಿ, ಅವರನ್ನು ಯೋಜನೆ ವ್ಯಾಪ್ತಿಗೆ ತರಲಾಗಿದ್ದು, ಪ್ರಸ್ತುತ 293 ಮಂದಿಯ ಅರ್ಜಿಯ ಮ್ಯಾಪಿಂಗ್ ಕಾರ್ಯ ನಡೆಯುತ್ತಿದೆ. ಯೋಜನೆಯ ಆರಂಭದಲ್ಲೇ ಆದಾಯ ತೆರಿಗೆ ಮತ್ತು ಜಿಎಸ್‌ಟಿ ಪಾವತಿಸುತ್ತಿರುವ ಸುಮಾರು 9,200 ಮಂದಿಯ ಅರ್ಜಿ ತಿರಸ್ಕೃತಗೊಂಡಿದೆ. ಯೋಜನೆಯ ಫಲಾನುಭವಿ ಮಹಿಳೆಯರು ಮೃತಪಟ್ಟರೆ, ಅವರ ವಿಳಾಸ ಪತ್ತೆ ಮಾಡಿ, ದಾಖಲೆ ಸಂಗ್ರಹಿಸುವುದು ದೊಡ್ಡ ಸವಾಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

# ಜೋಳದ ರೊಟ್ಟಿ ಬಗ್ಗೆ ನರೇಂದ್ರ ಮೋದಿ ಮನ್ ಕಿ ಬಾತ್‌ನಲ್ಲಿ ಪ್ರಸ್ತಾಪ

**ಕಲಬುರಗಿ, ಜೂ. 7:** ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಮನ್ ಕೀ ಬಾತ್ ಕಾರ್ಯಕ್ರಮದಲ್ಲಿ ಕಲಬುರಗಿ ಬಿಳಿ ಜೋಳದ ರೊಟ್ಟಿ ಹಾಗೂ ಈ ರೊಟ್ಟಿ ತಯಾರಿಸುವ ಮಹಿಳೆಯರ ಉದ್ಯಮ ಶೀಲತೆಯನ್ನು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ. ಕಲಬುರಗಿಯ ಜೋಳದ ರೊಟ್ಟಿ ಈಗ ಕೇವಲ ಕರ್ನಾಟಕದ ಹಳ್ಳಿಗಳಿಗೆ ಮಾತ್ರ ಸೀಮಿತವಾಗಿರದೆ, ಜಾಗತಿಕ ಮಟ್ಟದಲ್ಲಿ ಭಾರಿ ಜನಪ್ರಿಯತೆಗಳಿಸಿದೆ. ವಿದೇಶಿಯರೂ ಕೂಡ ರೊಟ್ಟಿ ಆರ್ಡರ್ ಮಾಡಿ ಕಲಬುರಗಿ ರೊಟ್ಟಿ ತರಿಸಿಕೊಳ್ಳುತ್ತಿದ್ದಾರೆ.

ಭಾರತ ದೇಶವು ವೈವಿಧ್ಯಮಯವಾಗಿದ್ದು, ಇಲ್ಲಿನ ಪ್ರತಿಯೊಂದು ರಾಜ್ಯವೂ ತನ್ನದೇ ಆದ ವಿಶಿಷ್ಟ ಸಂಸ್ಕೃತಿ ಆಹಾರ ಪದ್ಧತಿ ಹಾಗೂ ಅಡುಗೆಯ ರುಚಿಯನ್ನು ಹೊಂದಿದೆ. ಅದರಲ್ಲೂ ಪ್ರತಿಯೊಂದು ರಾಜ್ಯದ ಅಡುಗೆಯೂ ತನ್ನದೇ ಆದ ಸಾಂಪ್ರದಾಯಿಕ ಮಸಾಲೆಗಳ ಜೊತೆಗೆ ಅಗಾಧ ಪರಿಮಳಗಳನ್ನೂ ಹೊಂದಿದೆ ಹಾಗೂ ತಯಾರಿಕೆಯ ವಿಧಾನಗಳಿಂದ ಪ್ರಪಂಚದಾದ್ಯಂತ ಪ್ರಸಿದ್ಧವಾಗಿವೆ ಎಂದು ಹೇಳಲು ಹೆಮ್ಮೆ ಎನಿಸುತ್ತದೆ ಎಂದು ಪ್ರಧಾನಿಯವರು ಹೇಳಿದರು.

ಕಲಬುರಗಿಯ ಬಿಳಿ ಜೋಳದ ರೊಟ್ಟಿ ಬಗ್ಗೆ ಹಾಡಿಹೊಗಳಿದ ಪ್ರಧಾನಿ, ಈಗ ಜೋಳದರೊಟ್ಟಿ ಗ್ರಾಮೀಣ ಮಹಿಳೆಯರ ಸ್ವಾವಲಂಬನೆ ಹಾಗೂ ಉದ್ಯಮಶೀಲತೆಯನ್ನು ತೆರೆದುಕೊಳ್ಳುವಂತೆ ಮಾಡಿರುವುದನ್ನು ಪ್ರಸ್ಥಪಸಿಸಿದ್ದಲ್ಲದೇ, ವಿದೇಶ ಗಳಲ್ಲಿ ಕಲಬುರಗಿ ರೊಟ್ಟಿ ಹೇಗೆ ಜನಪ್ರಿಯತೆ ಪಡೆದಿದೆ ಮತ್ತು ಕಲಬುರಗಿಯ ರೊಟ್ಟಿ ಉದ್ಯಮವು ಅನೇಕರಿಗೆ ಉದ್ಯೋಗ ಕಲ್ಪಿಸಿರುವುದನ್ನು ಶ್ಲಾಘಿಷಿದರು.

ಉತ್ತರ ಕರ್ನಾಟಕದ ಸಾಂಪ್ರದಾಯಿಕ ಆಹಾರವಾದ ಜೋಳದ ರೊಟ್ಟಿಯು ಆರೋಗ್ಯಕ್ಕೆ ಅತ್ಯುತ್ತಮ ಪೌಷ್ಠಿಕಾಂಶವನ್ನು ಒದಗಿಸುವುದಲ್ಲದೆ ಸಾವಿರಾರು ಮಹಿಳೆಯರಿಗೆ ಉದ್ಯೋಗವನ್ನೂ ಒದಗಿಸುತ್ತಿರುವುದು ಅತ್ಯಂತ ಹೆಮ್ಮೆಯ ಸಂಗತಿಯಾಗಿದೆ. ಮೊದಲು ಕೇವಲ ಮನೆಯ ಆಹಾರವಾಗಿದ್ದ ರೊಟ್ಟಿ ಈಗ ಜಾಗತಿಕ ಜನಪ್ರೀಯತೆ ಪಡೆದುಕೊಂಡಿದೆ ಎಂದರು.

ಕಲಬುರಗಿಯ ಜೋಳದ ರೊಟ್ಟಿ ಹಳ್ಳಿಗಳಿಂದ ದೊಡ್ಡ ನಗರಗಳ ಊಟದ ಮೇಜುಗಳನ್ನು ತಲುಪಿರುವುದು ಮಾತ್ರವಲ್ಲದೆ, ಜಾಗತಿಕ ಮಟ್ಟದಲ್ಲಿ ಜನಪ್ರಿಯತೆ ಗಳಿಸಿದೆ. ಈ ಜೋಳದ ರೊಟ್ಟಿಯನ್ನು ತಯಾರಿಸುವ ವಿಧಾನವನ್ನೂ ಕೂಡ ಪ್ರಧಾನಿಯವರು ವಿವರಿಸಿ, ಜನರಲ್ಲಿ ಆಸಕ್ತಿ ಕೆರಳಿಸುವಂತೆ ಮಾಡಿದರು.

ಬಿಳಿಜೋಳದರೊಟ್ಟಿ ಕರ್ನಾಟಕದ ಕಲಬುರಗಿ ಪ್ರದೇಶದ ಸಾಂಪ್ರದಾಯಿಕ ರೊಟ್ಟಿಯಾಗಿದೆ. ಇದನ್ನು ಪ್ರಾಥಮಿಕವಾಗಿ ಉತ್ತರ ಕರ್ನಾಟಕದ ಪ್ರಮುಖ ಧಾನ್ಯವಾದ ಜೋಳ ಈ ಭಾಗದಲ್ಲಿ ದೊಡ್ಡ ಪ್ರಮಾಣದಲ್ಲಿ ಬೆಳೆಯಲಾಗುತ್ತದೆ. ಆರೋಗ್ಯಪೂರ್ಣವಾದ ಜೋಳದರೊಟ್ಟಿ ಸಕ್ಕರೆ ಕಾಯಿಲೆ ಮತ್ತು ಇತರ ರೋಗಿಗಳಿಗೂ ನೀಡುವುದರಿಂದ ಇದು ಎಷ್ಟು ಆರೋಗ್ಯಪೂರ್ಣ ಆಹಾರ ಎಂಬುದನ್ನು ಗಮನಿಸಬಹುದು ಎಂದು ರೊಟ್ಟಿಯ ಆರೋಗ್ಯದ ಮಹತ್ವ ಕೂಡ ವಿವರಿಸಿದ್ದಾರೆ.

ಜೋಳದರೊಟ್ಟಿಯನ್ನು ಸಾಮಾನ್ಯವಾಗಿ ಸ್ಟಫ್ಡ್ ಬದನೆಕಾಯಿ ಕರಿ, ಕಡಲೆಕಾಯಿ ಗ್ರೇವಿ ಅಥವಾ ಬೆಳ್ಳುಳ್ಳಿ, ಎಳ್ಳು ಮತ್ತು ಕಡಲೆಕಾಯಿಗಳಿಂದ ಮಾಡಿದ ಮಸಾಲೆಯುಕ್ತ ಚಟ್ನಿ-ಮೊಸರಿನೊಂದಿಗೆ ಸೇವಿಸುವುದು ರೂಢಿ. ಈ ಕುರಿತು ಅಧಿಕೃತ ವೆಬ್‌ಸೈಟ್ ಜೋಳವನ್ನು "ರಾಗಿಗಳ ರಾಜ" ಎಂದು ಉಲ್ಲೇಖಿಸುತ್ತದೆ ಮತ್ತು ಇದು ಹೆಚ್ಚು ಪೌಷ್ಟಿಕ ಮತ್ತು ಬಹುಮುಖ ಧಾನ್ಯವಾಗಿದ್ದು ಈ ಪ್ರದೇಶದ ಪ್ರಧಾನ ಆಹಾರವಾಗಿದೆ. ಇದು ಹಲವಾರು ಆರೋಗ್ಯ ಪ್ರಯೋಜನಗಳನ್ನು ನೀಡುವ ಅಗತ್ಯ ಪೋಷಕಾಂಶಗಳಿಂದ ತುಂಬಿದೆ.

ತೂಕ ನಿರ್ವಹಣೆ ಮತ್ತು ಮಧುಮೇಹ ನಿಯಂತ್ರಿಸುವುದರಿಂದ ಹಿಡಿದು ಹೃದಯ ಕಾಯಿಲೆಗಳ ಅಪಾಯವನ್ನು ಕಡಿಮೆ ಮಾಡುವುದು ಮತ್ತು ಉರಿ ಯೂತ ನಿವಾರಕ ಮತ್ತು ಕ್ಯಾನ್ಸರ್-ಹೋರಾಟದ ಗುಣಗಳನ್ನು ಒದಗಿಸುವವರೆಗೆ, ಜೋಳವು ನಿಜವಾಗಿಯೂ ಸೂಪರ್ ಫುಡ್ ಆಗಿದೆ ಎಂದು ಪ್ರಧಾನಿಯವರು ಜೋಳದ ರೊಟ್ಟಿಯ ಕುರಿತು ಮುಕ್ತ ಕಂಠದಿಂದ ಪ್ರಶಂಶಿಸಿದ್ದಾರೆ.

ಇದು ಪ್ರೋಟೀನ್, ಫೈಬರ್, ಖನಿಜಗಳು ಮತ್ತು ವಿಟಮಿನ್‌ಗಳಲ್ಲಿ ಸಮೃದ್ಧವಾಗಿದೆ, ಅಲ್ಲದೇಇದು ಎಲ್ಲಾ ವಯೋಮಾನದವರಿಗೆ ಸೂಕ್ತವಾಗಿದೆ ಮತ್ತು ಆರೋಗ್ಯಕರ, ಪೌಷ್ಟಿಕ ಆಯ್ಕೆಗಳನ್ನು ಬಯಸುವವರಿಗೆ ಪರಿಪೂರ್ಣ



ಆಯ್ಕೆ ಯಾಗಿದೆ.

"Sorghum and health: An overview of potential protective health effects" ಎಂಬ ಶೀರ್ಷಿಕೆಯ ಅಧ್ಯಯನವು, ಸೋರ್ಗಮ್ ಉತ್ಪನ್ನಗಳ ಸೇವನೆಯನ್ನು ಒಳಗೊಂಡ ಸಂಶೋಧನೆಯು ದೀರ್ಘಕಾಲದ ಕಾಯಿಲೆಗೆ ಸಂಬಂಧಿಸಿದ ಚಯಾಪಚಯ ಸೂಚಕಗಳನ್ನು ಸುಧಾರಿಸುವಲ್ಲಿ ಭರವಸೆಯನ್ನು ತೋರಿಸಿದೆ ಎಂದು ಹೇಳುತ್ತದೆ.

ಇವುಗಳಲ್ಲಿ ರಕ್ತದಲ್ಲಿನ ಗ್ಲೂಕೋಸ್ ಮಟ್ಟಗಳು, ಆಕ್ಸಿಡೇಟಿವ್ ಒತ್ತಡದ ಗುರುತುಗಳು ಮತ್ತು ಹಸಿವು ನಿಯಂತ್ರಣಕ್ಕೆ ಸಂಬಂಧಿಸಿದ ತೀವ್ರವಾದ ಅತ್ಯಾಧಿಕ ಸಂವೇದ ನೆಗಳು ಸೇರಿವೆ. ಉತ್ಕರ್ಷಣ ನಿರೋಧಕ ಮತ್ತು ಉರಿಯೂತದ ಪರಿಣಾ ಮಗಳನ್ನು ಒಳಗೊಂಡಂತೆ ಪ್ರಯೋಜನಕಾರಿ ಕೋಶ-ಮಧ್ಯಸ್ಥಿಕೆಯ ಪ್ರತಿರಕ್ಷಣಾ ಪ್ರತಿಕ್ರಿಯೆ ಗಳಿಗೆ ಪ್ರಾಯೋಗಿಕ ಪುರಾವೆಗಳಿವೆ ಎಂದೂ ಹೇಳಿದ್ದಾರೆ.



ಮುಂಗಾರು ಮಳೆಯಾಗುತ್ತಿದ್ದಂತೆ, ಬೆಳಗಾವಿ ಬಳಿಯ ಮುಂಚಂಡಿ ಗ್ರಾಮದಲ್ಲಿ ಭಾನುವಾರ ಕೃಷಿ ಚಟುವಟಿಕೆಗಳು ಪ್ರಾರಂಭವಾದವು.

## ಟಿಟಿಡಿಗೆ 20 ಲಕ್ಷ ರೂ. ದೇಣಿಗೆ ನೀಡಿದ ಎಂಕೆ ಬಿಲ್ಡರ್ಸ್‌ನ ವ್ಯವಸ್ಥಾಪಕ ನಿರ್ದೇಶಕ ರಾಮಕೃಷ್ಣ



**ತಿರುಮಲ, ಜೂ. 07.** ವಿಶಾಖಪಟ್ಟಣದಲ್ಲಿರುವ ಎಂಕೆ ಬಿಲ್ಡರ್ಸ್‌ನ ವ್ಯವಸ್ಥಾಪಕ ನಿರ್ದೇಶಕ ರಾಮಕೃಷ್ಣ ಅವರು ಭಾನುವಾರ ಬೆಳಿಗ್ಗೆ ಟಿಟಿಡಿಯ ಶ್ರೀ ವೆಂಕಟೇಶ್ವರ ಪ್ರಾಣದಾನ ಟ್ರಸ್ಟ್‌ಗೆ 10 ಲಕ್ಷ ರೂ. ಮತ್ತು ಶ್ರೀ ವೆಂಕಟೇಶ್ವರ ಅನ್ನ ಪ್ರಸಾದ ಟ್ರಸ್ಟ್‌ಗೆ 10 ಲಕ್ಷ ರೂ. ದೇಣಿಗೆ ನೀಡಿದರು.

ಈ ನಿಟ್ಟಿನಲ್ಲಿ, ದಾನಿ ತಿರುಮಲ ಶ್ರೀವಾರಿ ದೇವಸ್ಥಾನದ ರಂಗನಾಯಕ ಕುಲ ಮಂಟಪದಲ್ಲಿ ಟಿಟಿಡಿ ಇಒ ಮುದ್ದದ ರವಿಚಂದ್ರ ಅವರಿಗೆ ದೇಣಿಗೆ ಡಿಡಿಗಳನ್ನು ಹಸ್ತಾಂತರಿಸಿದರು.

ಈ ಸಂದರ್ಭದಲ್ಲಿ ರಾಜ್ಯಸಭಾ ಸದಸ್ಯ ವೇಮಿರೆಡ್ಡಿ, ಪ್ರಭಾಕರ್ ರೆಡ್ಡಿ ಮತ್ತು ಟಿಟಿಡಿ ಮಂಡಳಿ ಸದಸ್ಯೆ ವೇಮಿರೆಡ್ಡಿ ಪ್ರಶಾಂತಿ ರೆಡ್ಡಿ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಪ್ರಧಾನಿಯಾಗಿ 12 ವರ್ಷ ಪೂರೈಸಿದ ಮೋದಿ

### ಗಿಡನೆಡುವ ಅಭಿಯಾನಕ್ಕೆ ಮುಖಂಡ ಎಚ್.ರವೀಂದ್ರ ಚಾಲನೆ



**ವಿಜಯನಗರ ವಿಧಾನಸಭಾ ಕ್ಷೇತ್ರ ಶ್ರೀಕೃಷ್ಣದೇವರಾಯ ವಾರ್ಡ್‌ನಲ್ಲಿ ಏರ್ಪಡಿಸಿದ್ದ ಸ್ವಾಮಿವಿವೇಕಾನಂದರ ಪುತ್ತಳಿ ಸ್ವಚ್ಛತಾ ಮತ್ತು ಗಿಡ ನೆಡುವ ಅಭಿಯಾನದಲ್ಲಿ ಬಿಜೆಪಿ ಮುಖಂಡ ಹೆಚ್. ರವೀಂದ್ರ, ಬಿಜೆಪಿ ವಿಜಯನಗರ ಮಂಡಲ ಅಧ್ಯಕ್ಷ ವಿ. ರಾಮಾಂಜನಿ, ಪ್ರಧಾನ ಕಾರ್ಯದರ್ಶಿ ಆನಂದ್‌ಗೌಡ ಎ. ಜಿ, ರವಿರಾಜ್, ಅಭಿ, ಹರೀಶ್, ಮಧುಸೂದನ್, ತೇಜಸ್, ಗೋಲ್ಡ್ ಮಹೇಶ್, ರಮೇಶ್, ಸಿದ್ದರಾಜು, ಮುತ್ತತ್ತಿ ಶ್ರೀನಿವಾಸ್, ಗೋಲ್ಡ್ ಮಹೇಶ, ಮಂಡಲದ ಪದಾಧಿಕಾರಿಗಳು, ಮುಖಂಡರು, ಮಹಿಳಾ ಮುಖಂಡರು, ಕಾರ್ಯಕರ್ತರುಭಾಗಿಯಾಗಿದ್ದರು**

**ಬೆಂಗಳೂರು:** ನರೇಂದ್ರ ಮೋದಿ ಪ್ರಧಾನ ಮಂತ್ರಿಯಾಗಿ 12 ವರ್ಷ ಪೂರೈಸಿದ ಹಿನ್ನಲೆಯಲ್ಲಿ "ವಿಶ್ವಾಸ, ಅಭಿವೃದ್ಧಿ ಮತ್ತು ಜನಕಲ್ಯಾಣದ ಅಭಿಯಾನದಡಿ ಸ್ವಾಮಿ ವಿವೇಕಾನಂದರ ಪುತ್ತಳಿ ಸ್ವಚ್ಛತಾ ಮತ್ತು ಗಿಡ ನೆಡುವ ಅಭಿಯಾನವನ್ನು ವಿಜಯನಗರ ವಿಧಾನಸಭಾ ಕ್ಷೇತ್ರದ ಶ್ರೀ ಕೃಷ್ಣದೇವರಾಯ ವಾರ್ಡ್, ಶ್ರೀ ಸ್ವಾಮಿ ವಿವೇಕಾನಂದರ ಉದ್ಯಾನವನದಲ್ಲಿ ಏರ್ಪಡಿಸಲಾಯಿತು.

ಈ ಸಂದರ್ಭದಲ್ಲಿ ವಿಜಯನಗರ ವಿಧಾನಸಭಾ ಕ್ಷೇತ್ರದ ಬಿಜೆಪಿ ಜನಪ್ರಿಯ ನಾಯಕ ಹೆಚ್. ರವೀಂದ್ರ, ವಿಜಯನಗರ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ರವಿರಾಜ್, ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಅಭಿ, ಬಾಪೂಜಿ ನಗರ ವಾರ್ಡ್ ಅಧ್ಯಕ್ಷ ಹರೀಶ್, ಓಬಿಸಿ ಉಪಾಧ್ಯಕ್ಷ ಮಧುಸೂದನ್, ಸೋಶಿಯಲ್ ಮೀಡಿಯಾ ಸಂಚಾಲಕ ತೇಜಸ್, ಅಗ್ರಹಾರ ವಾರ್ಡ್ ಪ್ರಧಾನ ಕಾರ್ಯದರ್ಶಿ ಗೋಲ್ಡ್ ಮಹೇಶ್, ಬಿಜೆಪಿ ಮುಖಂಡ ರಮೇಶ್, ಬಿಜೆಪಿ ವಿಜಯನಗರ ಮಂಡಲ ಅಧ್ಯಕ್ಷ ವಿ. ರಾಮಾಂಜನಿ, ದಕ್ಷಿಣ ಜಿಲ್ಲಾ ಎಸ್ ಟಿ ಮೋರ್ಚಾ ಅಧ್ಯಕ್ಷ ಸಿದ್ದರಾಜು, ಅಗ್ರಹಾರ ಸಂಚಾಲಕ ಮುತ್ತತ್ತಿ ಶ್ರೀನಿವಾಸ್, ಪ್ರಧಾನ ಕಾರ್ಯದರ್ಶಿ ಆನಂದ್‌ಗೌಡ ಎ.ಜಿ, ಗೋಲ್ಡ್ ಮಹೇಶ, ವಿಜಯ ನಗರ ಮಂಡಲದ ಪದಾಧಿಕಾರಿಗಳು, ಮುಖಂಡರು, ಮಹಿಳಾ ಮುಖಂಡರು, ಕಾರ್ಯಕರ್ತರು ಈ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು

## ಹಸಿರು ಹೊದಿಕೆಯಿಂದ

### ಕಂಗೊಳಿಸುತ್ತಿರುವ ಪರ್ವತ ಸಾಲು

**ಚಿಕ್ಕಮಗಳೂರು, ಜೂ.7:** ಜಿಲ್ಲೆಯಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಿದ್ದರೂ ಪರ್ವತ ಸಾಲುಗಳು, ಗಿರಿ ಶಿಖರಗಳು ಹಸಿರ ಹೊದಿಕೆಯಿಂದ ಕಂಗೊಳಿಸುತ್ತಿವೆ. ಮೋಡಗಳ ನಡುವೆ ದರ್ಶನ ನೀಡುತ್ತಿರುವ ಗಿರಿ ಶಿಖರಗಳು ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿವೆ.

ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಿದ್ದು, ಜೂನ್ ಆರಂಭದಲ್ಲೂ ಮಳೆ ಇನ್ನೂ ಬಿರುಸು ಪಡೆದಿಲ್ಲ.ಆಗಾಗ ಸುರಿದ ಮಳೆಯಿಂದ ಜಿಲ್ಲೆಯ ಪ್ರವಾಸಿ ತಾಣಗಳ ವೈಭವ ನೂರ್ಮಡಿ ಯಾಗಿದೆ. ಮುಳ್ಳಯ್ಯನಗಿರಿ, ಬಾಬಾ ಬುಡನ್‌ಗಿರಿ, ಗಾಳಿಕೆರೆ ಸೇರಿ ಚಂದ್ರದ್ರೋಣ ಪರ್ವತ ಶ್ರೇಣಿ, ಕುದುರೆಮುಖ, ಚಾರ್ಮಾಡಿ ಪರ್ವತ ಸಾಲುಗಳು ಹಸಿರು ಹೊದ್ದು ಕಂಗೊಳಿಸುತ್ತಿವೆ. ಜೋರು ಮಳೆ ಇಲ್ಲದಿದ್ದರೂ ಮೋಡದ ವಾತಾವರಣದಿಂದ ಆಹ್ಲಾದಕರ ವಾತಾವರಣ ನಿರ್ಮಾಣ ವಾಗಿದೆ. ಮೋಡಗಳ ನಡುವೆ ತೆರೆದುಕೊಳ್ಳುವ ಗಿರಿ-ಶಿಖರಗಳನ್ನು ಕಣ್ತುಂಬಿಕೊಳ್ಳಲು ಬರುವ ಪ್ರವಾಸಿಗರ ಸಂಖ್ಯೆ ಹೆಚ್ಚಾಗುತ್ತಿದೆ.

ಮೂಡಿಗೆರೆ ತಾಲ್ಲೂಕಿನ ದೇವರಮನೆಯ ವೀಕ್ಷಣಾ ಸ್ಥಳವಂತೂ ತನ್ನ ಸೌಂದರ್ಯ ಹೆಚ್ಚಿಸಿಕೊಂಡಿದೆ. ಗಿರಿಯ ಮೇಲ್ಭಾಗದಲ್ಲಿ ನಿಂತು ಕೆಳಭಾಗದ ಶೋಲಾ ಕಾಡುಗಳ ನಡುವೆ ಕಂದರಗಳನ್ನು ನೋಡುವುದು ಪ್ರವಾಸಿಗರಿಗೆ ಇನ್ನಿಲ್ಲದ ಖುಷಿ. ವೀಕ್ಷಣಾ ಸ್ಥಳದ ಬುಡಕ್ಕೆ ವಾಹನಗಳು ಕೂಡ ಹೋಗುವುದು ಪ್ರವಾಸಿಗರಿಗೆ ಈ ಸ್ಥಳ ತಲುಪುವುದು ಕೊಂಚ ಸುಲಭ ಎನಿಸಿದೆ. ಆಗೊಮ್ಮೆ ಈಗೊಮ್ಮೆ ಬರುವ ಮಳೆಯ ನಡುವೆ ಮೋಡಗಳು ಸರಿದು ಹಸಿರ ಕಾನನ ತೆರೆದುಕೊಳ್ಳುವುದು ಜನರನ್ನು ಸೂಜಿಗಲ್ಲಿನಂತೆ ಆಕರ್ಷಿಸುತ್ತಿದೆ.



ಟಿಟಿಡಿ ಯೋಗ-ಆರೋಗ್ಯಾನಂದ ಕಾರ್ಯಕ್ರಮವನ್ನು ಅದ್ದೂರಿಯಾಗಿ ಪ್ರಾರಂಭ

## ಆರೋಗ್ಯ-ಯೋಗ ಆಧ್ಯಾತ್ಮಿಕತೆಗೆ ಸೇತುವೆ: ಯೋಗದಿಂದ ಸಮತೋಲನ, ಶಾಂತಿ, ಆತ್ಮವಿಶ್ವಾಸ ಸಾಧ್ಯ: ಮುದ್ದದ ರವಿಚಂದ್ರ



ಜೂನ್ 21 ರಂದು ಅಂತರ ರಾಷ್ಟ್ರೀಯ ಯೋಗ ದಿನಾಚರಣೆಗೆ ಟಿಟಿಡಿ ವ್ಯಾಪಕ ವ್ಯವಸ್ಥೆಗಳ ಆಯೋಜನೆ

ತಿರುಮಲ ಜೂ 07. ಯೋಗಾಭ್ಯಾಸದ ಮೂಲಕ ವ್ಯಕ್ತಿಯ ಜೀವನದಲ್ಲಿ ಸಮತೋಲನ, ಶಾಂತಿ ಮತ್ತು ಆತ್ಮವಿಶ್ವಾಸವನ್ನು ಹೆಚ್ಚಿಸಬಹುದು ಎಂದು ಟಿಟಿಡಿ ಇಒ ಮುದ್ದದ ರವಿಚಂದ್ರ ಹೇಳಿದರು. ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಸಂದರ್ಭದಲ್ಲಿ (ಜೂನ್ 21), ಟಿಟಿಡಿ ಆಯೋಜಿಸಿರುವ 'ಯೋಗ-ಟಿಟಿಡಿ ಆರೋಗ್ಯಾನಂದ' ಕಾರ್ಯಕ್ರಮವನ್ನು ಭಾನುವಾರ ತಿರುಪತಿಯ ಮಹಾತಿ ಕಲಾಕ್ಷೇತ್ರದಲ್ಲಿ ಅದ್ದೂರಿಯಾಗಿ ಪ್ರಾರಂಭಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಇಓ, ಜೂನ್ 7 ರಿಂದ 21 ರವರೆಗೆ ನಿಯಮಿತವಾಗಿ ಯೋಗಾಭ್ಯಾಸದಲ್ಲಿ ಭಾಗವಹಿಸುವಂತೆ ಎಲ್ಲಾ ಟಿಟಿಡಿ ಉದ್ಯೋಗಿಗಳಿಗೆ ಸಲಹೆ ನೀಡಿದರು. ಯೋಗಾಭ್ಯಾಸವು ನೌಕರರು ಮತ್ತು ಅವರ ಕುಟುಂಬ ಸದಸ್ಯರ ಆರೋಗ್ಯದ ಮೇಲೆ ಸಕಾರಾತ್ಮಕ ಪರಿಣಾಮ ಬೀರುತ್ತದೆ ಎಂದು ಅವರು ಹೇಳಿದರು. ಯೋಗವು ಮೊದಲಿಗೆ ಕಷ್ಟಕರವೆಂದು ತೋರುತ್ತದೆಯಾದರೂ, ನಿರಂತರ ಅಭ್ಯಾಸದ ಮೂಲಕ ದೇಹ ಮತ್ತು ಮನಸ್ಸಿನ ಮೇಲೆ ಸಂಪೂರ್ಣ ನಿಯಂತ್ರಣವನ್ನು ಸಾಧಿಸಬಹುದು ಎಂದು ಹೇಳಲಾಗುತ್ತದೆ. ಯೋಗವು ದೈಹಿಕ ಶಕ್ತಿ, ಮಾನಸಿಕ ಬೆಳವಣಿಗೆ ಮತ್ತು ಆಂತರಿಕ ಅರಿವನ್ನು ಹೆಚ್ಚಿಸುತ್ತದೆ ಎಂದು ಅವರು ವಿವರಿಸಿದರು.

ಯೋಗವು ಮಾನಸಿಕ ಒತ್ತಡಕ್ಕೆ ಉತ್ತಮ ಪರಿಹಾರವಾಗಿದೆ ಎಂದು ಹೆಚ್ಚುವರಿ ಇಒ ಸಿಎಚ್. ವೆಂಕಯ್ಯ ಚೌಧರಿ ಅವರು ತಿಳಿಸಿದರು.

ಇಂದಿನ ವೇಗದ ಜೀವನಶೈಲಿಯಲ್ಲಿ ಹೆಚ್ಚುತ್ತಿರುವ ಮಾನಸಿಕ ಒತ್ತಡ ಮತ್ತು ವೃತ್ತಿಪರ ಸವಾಲುಗಳನ್ನು ಎದುರಿಸಲು ಯೋಗಾಭ್ಯಾಸ ಅತ್ಯಗತ್ಯ ಎಂದು ಹೆಚ್ಚುವರಿ ಇಓ ಸಿಎಚ್. ವೆಂಕಯ್ಯ ಚೌಧರಿ ಹೇಳಿದರು. ದೈಹಿಕ ಶಕ್ತಿಯ ಜೊತೆಗೆ, ಯೋಗವು ಮಾನಸಿಕ ಶಾಂತಿ, ಏಕಾಗ್ರತೆ ಮತ್ತು ಭಾವನಾತ್ಮಕ ನಿಯಂತ್ರಣವನ್ನು ಸಹ ನೀಡುತ್ತದೆ ಎಂದು ಅವರು ಹೇಳಿದರು.

ಭಯ, ಆತಂಕ ಮತ್ತು ಉತ್ಸಾಹದಂತಹ ನಕಾರಾತ್ಮಕ ಭಾವನೆಗಳನ್ನು ನಿವಾರಿಸಲು ಮತ್ತು ಮಾನಸಿಕ ಶಕ್ತಿಯನ್ನು ಹೆಚ್ಚಿಸಲು ಯೋಗವು ಅದ್ಭುತ ಸಾಧನವಾಗಿದೆ ಎಂದು ಅವರು ಹೇಳಿದರು. ಸ್ವಾಮಿ ವಿವೇಕಾನಂದ ಮತ್ತು ಗೌತಮ ಬುದ್ಧರಂತಹ ಮಹಾನ್ ವ್ಯಕ್ತಿಗಳು ಸಹ ಯೋಗದ ಮಹತ್ವವನ್ನು ಜಗತ್ತಿಗೆ ಸಾರಿದ್ದಾರೆ ಎಂದು ಅವರು ನೆನಪಿಸಿದರು.

**ಯೋಗವು ಆಧ್ಯಾತ್ಮಿಕತೆಗೆ ಸೇತುವೆ:** ಜೆಇಒ ಡಾ. ಎ. ಶರತ್:-ಟಿಟಿಡಿ ಜೆಇಒ ಡಾ. ಎ.ಶರತ್ ಅವರು ಯೋಗವು ಕೇವಲ ಆರೋಗ್ಯ ಅಭ್ಯಾಸವಲ್ಲ, ಆಧ್ಯಾತ್ಮಿಕ ಬೆಳವಣಿಗೆಗೆ ಮಾರ್ಗದರ್ಶಿಯಾಗಿದೆ ಎಂದು ಹೇಳಿದರು. ಜೂ.20 ರವರೆಗೆ ಟಿಟಿಡಿ ಇಒ ಅವರ ಸೂಚನೆಯಂತೆ ಯೋಗದ ಪ್ರಮಾಣಿತ ವಿಧಾನಗಳ ಪ್ರಕಾರ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ ಎಂದು ಅವರು ಹೇಳಿದರು.

ಪ್ರತಿದಿನ ಬೆಳಿಗ್ಗೆ ನಡೆಯುವ ಯೋಗಾಭ್ಯಾಸದಲ್ಲಿ ಪ್ರತಿಯೊಬ್ಬ ಉದ್ಯೋಗಿಯೂ ಭಾಗವಹಿಸುವಂತೆ ಕೇಳಿಕೊಳ್ಳಲಾಗಿದೆ. ಯೋಗ ದಿನವನ್ನು ಆಚರಿಸಲು ಜೂನ್ 18, 19 ಮತ್ತು 20 ರಂದು ಉದ್ಯೋಗಿಗಳಿಗೆ ಯೋಗ ಸ್ಪರ್ಧೆಗಳನ್ನು ಆಯೋಜಿಸಲಾಗುವುದು ಎಂದು ಅವರು ಬಹಿರಂಗಪಡಿಸಿದರು.

## ಜೀವಸಂಕುಲ ರಕ್ಷಣೆಯ ರೂವಾರಿಗಳಾಗಿ: ಪ್ರೊ.ವಿದ್ಯಾಸಾಗರ

**ಕಲಬುರಗಿ, ಜೂ.7:** ವಿದ್ಯಾರ್ಥಿ ಗಳು ಪರಿಸರ ಮತ್ತು ಜೀವ ಸಂಕುಲ ಸಂರಕ್ಷಣೆಯ ರೂವಾರಿಗಳಾಗಬೇಕು. ಜೀವವೈವಿಧ್ಯತೆ ದಿನ ಕೇವಲ ಆಚರಣೆಗೆ ಸೀಮಿತವಾಗದೆ ವರ್ಷ ವಿಡೀ ಪರಿಸರ ರಕ್ಷಣೆ ಮತ್ತು ಜೀವಿಗಳ ಸಂರಕ್ಷಣೆಯಲ್ಲಿ ಕ್ರಿಯಾ ಶೀಲತೆ ತೋರಬೇಕು ಎಂದು ಕಲಬುರಗಿ ವಿಶ್ವವಿದ್ಯಾಲಯದ ಸಸ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಹಾಗೂ ಪ್ರಾಣಿಶಾಸ್ತ್ರ ವಿಭಾಗದ ಸಂಯೋಜಕ ಪ್ರೊ.ಎಂ.ವಿದ್ಯಾಸಾಗರ ಎಂದು ಹೇಳಿದರು.

ಕಲಬುರಗಿ ವಿಶ್ವವಿದ್ಯಾಲಯದ ಪ್ರಾಣಿಶಾಸ ವಿಭಾಗ ಮತ್ತು ಪ್ರಾಣಿಶಾಸ ಸಂದ ಸಹಯೋಗದಲ್ಲಿ ನಡೆದ ಅಂತಾರಾಷ್ಟ್ರೀಯ ಜೀವವೈವಿಧ್ಯತೆ ದಿನಾಚರಣೆ ಸಮಾರಂಭಕ್ಕೆ ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿ ಮಾತನಾಡಿ, ಜೀವವೈವಿಧ್ಯತೆಯಲ್ಲಿ ಆಸಕ್ತಿದಾಯಕ ವಿಸ್ಮಯಗಳಿವೆ. ಅವುಗಳ ಕುರಿತು ವೈಜ್ಞಾನಿಕ ಚಿಂತನೆ ಮೂಲಕ ದೂರದೃಷ್ಟಿ ಮನಸ್ಥಿತಿ ಬೆಳೆಸಿಕೊಳ್ಳಬೇಕು. ಮುಂದಿನ ದಿನಗಳಲ್ಲಿ ಕೀಟಗಳು ಮಾನವನ ಆಹಾರ ಪದ್ಧತಿಯ ಮುಖ್ಯ ಭಾಗವಾಗಬಹುದು. ಮಾನವ



ಕಲ್ಯಾಣಕ್ಕಾಗಿ ಆರೋಗ್ಯದಾಯಕ ಪರಿಸರ ಮತ್ತು ಜೀವ ವೈವಿಧ್ಯ ಪೋಷಿಸಬೇಕು ಎಂದರು.

ಪ್ರಾಣಿಶಾಸ್ತ್ರ ವಿಭಾಗದ ಉಪಾಧ್ಯಕ್ಷ ಹಾಗೂ ಪ್ರಾಧ್ಯಾಪಕ ಡಾ.ಶಶಿಕಾಂತ ಮಜಗಿ ಪ್ರಾಸ್ತಾವಿಕ ಮಾತನಾಡಿ, ಆಕ್ಟಿಂಗ್ ಲೋಕಲೀ ಫಾರ್ ಗ್ಲೋಬಲ್ ಇಂಪ್ಯಾಕ್ಟ್ ಜೀವವೈವಿಧ್ಯ ದಿನಾಚರಣೆ ಘೋಷವಾಕ್ಯವಾಗಿದೆ. ಜೀವ ವಿಜ್ಞಾನ ಜಗತ್ತು ವೈವಿಧ್ಯತೆಯಿಂದ ಕೂಡಿದೆ. ಜೀವಿಗಳ ವಂಶವಾಹಿ ಮತ್ತು ಪರಿಸರದಲ್ಲಿ ಪ್ರಾಣಿ, ಪಕ್ಷಿ, ಸಸ್ಯ ಮತ್ತು ಸೂಕ್ಷ್ಮಜೀವಿಗಳು ಸೊಗಸಾದ ಜಗತ್ತು ಸೃಷ್ಟಿಸಿವೆ. ಎಲ್ಲಾ ಜೀವರಾಶಿಗಳಲ್ಲಿ ವೈವಿಧ್ಯತೆ ಕಾಣದಿದ್ದರೆ ಭೂಮಿ ಸುಂದರ ಮತ್ತು ವಿಸ್ಮಯಗಳ ಆಗರವಾಗಿರುತ್ತಿರಲಿಲ್ಲ. ಜೈವಿಕ ವಿಜ್ಞಾನ ಶಾಸ್ತ್ರದಲ್ಲಿನ ಸಂಶೋಧನೆ ಗಳಿಂದ ಸುಮಾರು 1.6 ರಿಂದ 1.8 ದಶಲಕ್ಷ ಜೀವಿಗಳನ್ನು ಮಾತ್ರ ಗುರುತಿಸಲು ಸಾಧ್ಯವಾಗಿದೆ. ಇನ್ನು 45 ರಿಂದ 50 ದಶಲಕ್ಷ ಸಸ್ಯಗಳು, ಪ್ರಾಣಿಗಳು ಮತ್ತು ಸೂಕ್ಷ್ಮಜೀವಿಗಳು ಇವೆ ಎಂದು ಇತ್ತೀಚಿನ ಶೋಧನೆಗಳಿಂದ ಕಂಡು ಬಂದಿದೆ ಎಂದು ಅಂದಾಜಿಸಲಾಗಿದೆ. ಅವುಗಳ ವಿಶೇಷ, ವೈವಿಧ್ಯ ಗ್ರಹಿಸುವ ಮೂಲಕ ನಾವೀನ್ಯ ಸಂಶೋಧನೆಗೆ ವಿದ್ಯಾರ್ಥಿಗಳು ಆಸಕ್ತಿ ಬೆಳೆಸಿಕೊಳ್ಳಬೇಕು ಎಂದರು. ಪ್ರಾಣಿಶಾಸ್ತ್ರ ವಿಭಾಗದ ಅತಿಥಿ ಉಪನ್ಯಾಸಕಿ ಡಾ.ಸಂಧ್ಯಾ ದಿವಾಕರ ವೈವಿಧ್ಯತೆ ಕುರಿತು ಮಾತನಾಡಿದರು.

## ಬ್ಯಾಂಕ್ ಆಫ್ ಬರೋಡಾ ಕಲಬುರಗಿ ಪ್ರಾದೇಶಿಕ ಕಚೇರಿ ಮುಖ್ಯಸ್ಥ ಅಮಿತ್ ಶೆಟ್ಟಿಗೆ ಅಭಿನಂದನೆ

**ಕಲಬುರಗಿ, ಜೂ.7–** ಬ್ಯಾಂಕ್ ಆಫ್ ಬರೋಡಾದ ಕಲಬುರಗಿ ಪ್ರಾದೇಶಿಕ ಕಚೇರಿಯ ನೂತನ ಮುಖ್ಯಸ್ಥರಾಗಿ ಇತ್ತೀಚೆಗೆ ಅಧಿಕಾರ ವಹಿಸಿದ ಸಹಾಯಕ ಜನರಲ್ ಮ್ಯಾನೇಜರ್ ಅಮಿತ್ ಸಿ ಶೆಟ್ಟಿ ಅವರಿಗೆ ಕಲಬುರಗಿ ಜಿಲ್ಲಾ ಹೋಟೆಲ್ ಅಸೋಸಿಯೇಷನ್ ವತಿಯಿಂದ ಹಾರ್ದಿಕವಾಗಿ ಸ್ವಾಗತಿಸಿ ಅಭಿನಂದಿಸ ಲಾಯಿತು.

ಕಲ್ಯಾಣ ಕರ್ನಾಟಕದ ಕಲಬುರಗಿ, ಯಾದಗಿರಿ, ಕೊಪ್ಪಳ, ಬೀದರ, ರಾಯಚೂರು, ವಿಜಯಪುರ ಮತ್ತು ಬಾಗಲಕೋಟೆ ಸೇರಿದಂತೆ ಏಳು ಜಿಲ್ಲೆಗಳ ವ್ಯಾಪ್ತಿಯನ್ನು ಒಳಗೊಂಡು ಒಟ್ಟು 50 ಶಾಖೆಗಳನ್ನು ಹೊಂದಿದೆ. ಪ್ರಾದೇಶಿಕ ಕಚೇರಿಯ ನೂತನ ಮುಖ್ಯಸ್ಥರಾಗಿ ಅಧಿಕಾರ ಸ್ವೀಕರಿಸಿದ ಅಮಿತ್ ಶೆಟ್ಟಿ ಅವರು ಈ ಹಿಂದೆ ಮುಂಬೈ ಮೆಟ್ರೋ ಉತ್ತರ ಮತ್ತು ಪಶ್ಚಿಮ ಪ್ರಾದೇಶಿಕ ಕಚೇರಿಗಳ ಉಪ ಪ್ರಾದೇಶಿಕ ಮುಖ್ಯಸ್ಥರಾಗಿ ಕೂಡ ಸೇವೆ ಸಲ್ಲಿಸಿದ್ದರು.

ಬ್ಯಾಂಕಿಂಗ್ ಕ್ಷೇತ್ರದಲ್ಲಿ 18 ವರ್ಷಗಳ ಅನುಭವ ಹೊಂದಿದ



ಅವರು ಶಾಖಾ ಬ್ಯಾಂಕಿಂಗ್, ಚಿಲ್ಲರೆ ಸಾಲ, ಕೃಷಿ ಸಾಲ, ಎಂಎಸ್‌ಎಂಇ ಸಾಲ ಮೇಲ್ವಿಚಾರಣೆ ವಸು ಲಾತಿ ಮತ್ತು ಗ್ರಾಹಕ ಸೇವೆ ಹೀಗೆ ವಿವಿಧ ಕ್ಷೇತ್ರಗಳಲ್ಲಿ ಅಪಾರ ಅನುಭವ ಹೊಂದಿದ್ದಾರೆ. ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಕೊಲ್ಲೂರು ಸಮೀಪದ ವಂಡ್ಸೆ ಗ್ರಾಮದ ಅಮಿತ್ ಶೆಟ್ಟಿ ಅವರ ಕಲಬುರಗಿಯ ಸೇವೆ ಗ್ರಾಹಕ ಸ್ನೇಹಿಯಾಗಿ ಈ ಭಾಗದ ಉದ್ಯಮ, ಕೈಗಾರಿಕೆ, ಕೃಷಿ ಅಭಿವೃದ್ಧಿಗೆ ಹೆಚ್ಚಿನ ನೆರವು ಸಿಗಲಿ ಎಂದು ಆಕಾಶವಾಣಿ ಕಾರ್ಯಕ್ರಮ ಮುಖ್ಯಸ್ಥರಾದ ಡಾ. ಸದಾನಂದ ಪೆರ್ಲ ಸನ್ಮಾನ ನೆರವೇರಿಸಿ ಶುಭಾಶಯ ಕೋರಿದರು.

ಬ್ಯಾಂಕ್ ಆಫ್ ಬರೋಡಾ ಉದ್ಯಮಿಗಳಿಗೆ ಹೋಟೆಲ್ ಉದ್ಯಮಕ್ಕೆ ಅದರಲ್ಲೂ ಮುಖ್ಯವಾಗಿ ಸಣ್ಣ ಉದ್ಯಮಿಗಳಿಗೆ ಹೆಚ್ಚಿನ ಆರ್ಥಿಕ ನೆರವು ಸಿಗುವಂತೆ ಕಾರ್ಯೋನ್ಮುಖರಾಗುವಂತೆ ಕಲಬುರಗಿ ಜಿಲ್ಲಾ ಹೋಟೆಲ್ ಅಸೋಸಿಯೇಷನ್ ಅಧ್ಯಕ್ಷರಾದ ನರಸಿಂಹ ಮೆಂಡನ್ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಉತ್ತಮ ಕೆಲಸ ಮಾಡಿ ಅನೇಕ ಪ್ರಶಸ್ತಿ ಮತ್ತು ಸಾಧನೆಗಳಿಗೆ ಕಾರಣರಾದ ಶೆಟ್ಟಿ ಕಲ್ಯಾಣ ಕರ್ನಾಟಕಕ್ಕೂ ಹೆಚ್ಚಿನ ಕೊಡುಗೆ ನೀಡುವಂತಾಗಲಿ ಎಂದು ಹೋಟೆಲ್ ಅಸೋಸಿಯೇಷನ್ ಸದಸ್ಯರಾದ ಸುನಿಲ್ ಶೆಟ್ಟಿ ಅಭಿಪ್ರಾಯ ಪಟ್ಟರು.

## ವಿಶ್ವ ಪರಿಸರ ದಿನದ ಅಂಗವಾಗಿ ವಿಶೇಷ ಕಾರ್ಯಕ್ರಮ

### ಟೆಕ್ಸಿರಿ ಸೊಲ್ಯೂಶನ್ಸ್ ವತಿಯಿಂದ ನಿಡೋಣಿಯಲ್ಲಿ ವೃಕ್ಷಾರೋಪಣಾ ಕಾರ್ಯಕ್ರಮ

**ವಿಜಯಪುರ, ಜೂ.7–** ವಿಶ್ವ ಪರಿಸರ ದಿನದ ಅಂಗವಾಗಿ ಟೆಕ್ಸಿರಿ ಸೊಲ್ಯೂಶನ್ಸ್ ವತಿಯಿಂದ ನಿಡೋಣಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ವೃಕ್ಷಾರೋಪಣಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಪರಿಸರ ಸಂರಕ್ಷಣೆ ಹಾಗೂ ಹಸಿರು ಪರಿಸರ ನಿರ್ಮಾಣದ ಉದ್ದೇಶದಿಂದ ಆಯೋಜಿಸಲಾದ ಈ ಕಾರ್ಯಕ್ರಮದಲ್ಲಿ ಟೆಕ್ಸಿರಿ ಸೊಲ್ಯೂಶನ್ಸ್‌ನ ನಿರ್ದೇಶಕರು ಆದ ಶ್ರೀ ಮುತ್ತಣ್ಣ ಹಾಗು ಶ್ರೀಮತಿ ಆಶಾ ಸರಶೆಟ್ಟಿ ಮತ್ತು ಸಿಬ್ಬಂದಿಗಳು ಉತ್ಸಾಹದಿಂದ ಭಾಗವಹಿಸಿ ವಿವಿಧ ಜಾತಿಯ ಸಸಿಗಳನ್ನು ನೆಟ್ಟರು. ಮರಗಳನ್ನು ಬೆಳೆಸುವುದು ಹಾಗೂ ಪರಿಸರದ ಸಮತೋಲನ ಕಾಪಾಡುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯ ಎಂಬ ಅಭಿಪ್ರಾಯ ಈ ಕಾರ್ಯಕ್ರಮದಲ್ಲಿ ವ್ಯಕ್ತವಾಯಿತು.

ಬಬಲೇಶ್ವರ ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿ ಜುಬೇರ್ ಎಸ್.





ಪಠಾಣ್, ಕೀಟಶಾಸ್ತ್ರಜ್ಞರು ಮತ್ತು ನಿಡೋಣಿ ಗ್ರಾಮ ಪಂಚಾಯಿತಿ ಆಡಳಿತಾಧಿಕಾರಿ ಗಳಾದ ಶಿವರಾಜ್ ಗಣಾಚಾರಿ, ಅರ್ಜುಣಗಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹಾಗೂ ಬಬಲೇಶ್ವರ ತಾಲ್ಲೂಕು ಪಂಚಾಯಿತಿ ಸಹಾಯಕ ನಿರ್ದೇಶಕರಾದ ಭಾರತಿ ಹಿರೇಮಠ, ನಿಡೋಣಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಬಿ. ಎಚ್. ಮುಜಾವರ್, ನಿವೃತ್ತ ಯೋಧರ ಸಂಘದ ಅಧ್ಯಕ್ಷ ಸಂಪತ್ ಕುಮಾರ್ ಮುಚ್ಚಂಡಿ ಅವರು ಭಾಗವಹಿಸಿ ವೃಕ್ಷಾರೋಪಣೆಯ ಮಹತ್ವದ ಕುರಿತು ಮಾತನಾಡಿದರು. ಪರಿಸರ ಸಂರಕ್ಷಣೆಗಾಗಿ ಪ್ರತಿಯೊಬ್ಬರೂ ಕನಿಷ್ಠ ಒಂದು ಮರವನ್ನು ನೆಟ್ಟು ಅದರ ಪೋಷಣೆ ಮಾಡಬೇಕು ಎಂದು ಕರೆ ನೀಡಲಾಯಿತು.

ಕಾರ್ಯಕ್ರಮದ ನೇತೃತ್ವ ಹಾಗೂ ಸಮನ್ವಯವನ್ನು ವೀರೇಶ ಬಿರಾದಾರ ವಹಿಸಿಕೊಂಡಿದ್ದರು. ಟೆಕ್ಸಿರಿ ಸೊಲ್ಯೂಶನ್ಸ್‌ನ ಸಿಬ್ಬಂದಿಗಳಾದ ಸಂತೋಷ್ ಅಂಗಡಿ, ಸಚಿನ್ ರಾಯ್ಕರ್, ವಿಶ್ವನಾಥ್, ವಿಜಯ್, ಸೌರಭ್, ನವೀನ್, ಚೇತನ್, ಓಂಪ್ರಕಾಶ್, ವಾಸವಿ, ಶ್ರೀಲತಾ, ಶಿವಾನಿ, ಅಂಜಲಿ, ವೀಣಾ,ಪೂಜಾ, ಗೊಲ್ಲಾಳ ಹಾಗೂ ಸ್ಥಳೀಯರು ಭಾಗವಹಿಸಿ ವೃಕ್ಷಾರೋಪಣೆ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಪರಿಸರ ಸಂರಕ್ಷಣೆಯ ಮಹತ್ವವನ್ನು ಅರಿತು ಸಸಿಗಳನ್ನು ನೆಡುವುದರ ಜೊತೆಗೆ ಅವುಗಳ ಪೋಷಣೆ ಮತ್ತು ಸಂರಕ್ಷಣೆಯ ಜವಾಬ್ದಾರಿಯನ್ನು ವಹಿಸಿಕೊಳ್ಳುವ ಸಂಕಲ್ಪ ಮಾಡಿದರು.

ಟೆಕ್ಸಿರಿ ಸೊಲ್ಯೂಶನ್ಸ್ ಸಿಬ್ಬಂದಿಗಳ ಈ ಸಮಾಜಮುಖಿ ಕಾರ್ಯಕ್ಕೆ ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿದರು.

# ಗಲ್ಫ್ ಉದ್ವಿಗ್ನತೆ: ಇರಾನ್‌ನ ಡ್ರೋನ್ ಹೊಡೆದುರುಳಿಸಿದ ಅಮೆರಿಕ



ಟೆಹ್ರಾನ್/ ವಾಷಿಂಗ್ಟನ್, ಜೂನ್ 7: ಪಾಕಿಸ್ತಾನದ ಆಂತರಿಕ ಸಚಿವ ಮೊಹ್ಸಿನ್ ನಖ್ವಿ ಹೊಸ ಸುತ್ತಿನ ರಾಜತಾಂತ್ರಿಕ ಮಾತುಕತೆಗಾಗಿ ಟೆಹ್ರಾನ್‌ಗೆ ಭೇಟಿ ನೀಡುತ್ತಿರುವ ಮಧ್ಯೆ, ಪರ್ಷಿಯನ್ ಕೊಲ್ಲಿಯಲ್ಲಿ ಉದ್ವಿಗ್ನತೆ ಮತ್ತಷ್ಟು ಹೆಚ್ಚಾಗಿದೆ, ಏಕೆಂದರೆ ಯುಎಸ್ ಮಿಲಿಟರಿ ಇಂದು ಎರಡು ಇರಾನಿನ ಡ್ರೋನ್‌ಗಳನ್ನು ಹೊಡೆದುರುಳಿಸಿದೆ. ಹಾರ್ಮುಜ್ ಜಲಸಂಧಿಯಲ್ಲಿ ಡ್ರೋನ್ಗಳು ಅಂತರರಾಷ್ಟ್ರೀಯ ಸಮುದ್ರ ಸಂಚಾರಕ್ಕೆ ಬೆದರಿಕೆ ಹಾಕುತ್ತಿದ್ದವು ಎಂದು ಹೇಳಲಾಗಿದೆ. ಅದೇ ಜಲಮಾರ್ಗದ ಕಡೆಗೆ ಹಾರಿಸಲಾದ ನಾಲ್ಕು ಇತರ ಇರಾನಿನ ದಾಳಿ ಡ್ರೋನ್ಗಳನ್ನು ಅಮೆರಿಕ ಪಡೆಗಳು ಹೊಡೆದುರುಳಿಸಿದ ಒಂದು ದಿನದ ನಂತರ ಇದು ಸಂಭವಿಸಿದೆ. "ಇಂದು ಮುಂಜಾನೆ, ಮಧ್ಯಪ್ರಾಚ್ಯದಲ್ಲಿ ಯುಎಸ್ ಪಡೆಗಳು ಹಾರ್ಮುಜ್ ಜಲಸಂಧಿಯಲ್ಲಿ ಅಂತರರಾಷ್ಟ್ರೀಯ ಸಮುದ್ರ ಸಂಚಾರಕ್ಕೆ ಬೆದರಿಕೆ ಹಾಕುವ ಎರಡು ಇರಾನಿನ ಏಕಮುಖ ದಾಳಿ ಡ್ರೋನ್‌ಗಳನ್ನು ಹೊಡೆದುರುಳಿಸಿದವು. ಇರಾನಿನ ಆಕ್ರಮಣದ ವಿರುದ್ಧ ರಕ್ಷಿಸುವುದನ್ನು ಮುಂದುವರಿಸಲು ಅಮೆರಿಕದ ಪಡೆಗಳು ಭಂಗಿಯಲ್ಲಿವೆ ಮತ್ತು ಸಿದ್ಧವಾಗಿವೆ" ಎಂದು ಸೆಂಟ್ಕಾಮ್ ಹೇಳಿದೆ. ಘನೀಕರಿಸಿದ ಇರಾನಿನ $24 ಬಿಲಿಯನ್ ಆಸ್ತಿಗಳ ಕುರಿತು ಮಾತುಕತೆಗಳು ಸ್ಥಗಿತಗೊಂಡಿವೆ.

ಖಜಾನೆ ಕಾರ್ಯದರ್ಶಿ ಸ್ಕಾಟ್ ಬೆಸೆಂಟ್ ಅವರ ಚಿಂತನೆಯೊಂದಿಗೆ ಪರಿಚಿತವಾಗಿರುವ ಮೂಲವೊಂದರ ಪ್ರಕಾರ, ಇರಾನಿನ ದಾಳಿಯಿಂದ ಪ್ರಭಾವಿತವಾದ ಗಲ್ಫ್ ದೇಶಗಳಲ್ಲಿ ಮೂಲಸೌಕರ್ಯ ಪುನರ್ನಿರ್ಮಾಣಕ್ಕಾಗಿ ಇರಾನಿನ ಸ್ವತ್ತುಗಳನ್ನು ಬಳಸಲು ಅಮೆರಿಕ ಪರಿಗಣಿಸುತ್ತಿದೆ. ತಿಳಿವಳಿಕೆ ಒಪ್ಪಂದದ ಮೊದಲ ಹಂತ ತಲುಪಿದ ಕೂಡಲೇ ಶತಕೋಟಿ ಡಾಲರ್‌ಗಳಷ್ಟು ಹೆಪ್ಪುಗಟ್ಟಿದ ನಿಧಿಗೆ ಪ್ರವೇಶವನ್ನು ಟೆಹ್ರಾನ್ ಬಯಸುತ್ತಿದೆ, ಆದರೆ ವಾಷಿಂಗ್ಟನ್ ಯಾವುದೇ ಆರ್ಥಿಕ ಪರಿಹಾರವು ಇರಾನ್ ತನ್ನ ಹೆಚ್ಚು ಸಮೃದ್ಧ ಯುರೇನಿಯಂನ ದಾಸ್ತಾನನ್ನು ತ್ಯಜಿಸುವುದು ಸೇರಿದಂತೆ ತನ್ನ ಬದ್ಧತೆಗಳನ್ನು ಪೂರೈಸುವುದರೊಂದಿಗೆ ಸಂಬಂಧ ಹೊಂದಿರಬೇಕು ಎಂದು ಒತ್ತಾಯಿಸುತ್ತದೆ. ಏಪ್ರಿಲ್‌ನಲ್ಲಿ ಕದನ ವಿರಾಮಕ್ಕೆ ಒಪ್ಪಿಕೊಂಡಾಗಿನಿಂದ ಅಮೆರಿಕ ಮತ್ತು ಇರಾನ್ ಬಿಕ್ಕಟ್ಟಿನಲ್ಲಿ ಸಿಲುಕಿಕೊಂಡಿವೆ. ಸಾವಿರಾರು ಜನರನ್ನು ಬಲಿತೆಗೆದುಕೊಂಡ ಮತ್ತು ಜಾಗತಿಕ ಇಂಧನ ಕೊರತೆಗೆ ಕಾರಣವಾದ ತಿಂಗಳುಗಳ ಕಾಲ ನಡೆದ ಯುದ್ಧವನ್ನು ಕೊನೆಗೊಳಿಸಲು ಅವರು ಒಪ್ಪಂದವನ್ನು ತಲುಪಲು ಸಾಧ್ಯವಾಗಿಲ್ಲ. ಕದನ ವಿರಾಮದ ಹೊರತಾಗಿಯೂ ಅಮೆರಿಕ ಮತ್ತು ಇರಾನಿನ ಪಡೆಗಳ ನಡುವೆ ಬಹು ಗುಂಡಿನ ಚಕಮಕಿಗಳು ನಡೆದಿವೆ, ಶುಕ್ರವಾರದ ಇತ್ತೀಚಿನ ಘಟನೆ ಸೇರಿದಂತೆ, ಯುಎಸ್ ಪಡೆಗಳು ರಾಡಾರ್ ತಾಣಗಳು, ಗೋರುಕ್ ಮತ್ತು ಕೆಶ್ಮ್ ದ್ವೀಪದಲ್ಲಿ ಡ್ರೋನ್ ಕಮಾಂಡ್–ಮತ್ತು–ನಿಯಂತ್ರಣ ಸೌಲಭ್ಯಗಳನ್ನು ಹೊಡೆದುರುಳಿಸಿ ಕುವೈತ್ ಮತ್ತು ಬಹ್ರೇನ್ ಮೇಲೆ ಪ್ರತೀಕಾರದ ಇರಾನಿನ ದಾಳಿಗಳನ್ನು ನಡೆಸಿತು.

ಯಾವುದೇ ಹಣಕಾಸಿನ ಸಹಾಯವನ್ನು ಹೇಗೆ ರಚಿಸಬೇಕು ಎಂಬುದರ ಕುರಿತು ಎರಡೂ ಕಡೆಯವರು ವಿಭಜನೆಯಾಗಿದ್ದಾರೆ, ಮಾನವೀಯ–ಬಳಕೆ ನಿಧಿಗಳು ಮತ್ತು ಮೂರನೇ ವ್ಯಕ್ತಿಯ ಆಸ್ತಿ ಬಿಡುಗಡೆಯಿಂದ ಹಿಡಿದು ಗಲ್ಫ್ ಬೆಂಬಲಿತ ಪುನರ್ನಿರ್ಮಾಣ ನಿಧಿಯವರೆಗಿನ ಪ್ರಸ್ತಾಪಗಳೊಂದಿಗೆ. ಇರಾನಿನ ಕಚ್ಚಾ ತೈಲ ರಫ್ತಿನ ಮೇಲಿನ ನಿರ್ಬಂಧಗಳ ವಿನಾಯಿತಿ, ಹಾರ್ಮುಜ್ ಜಲಸಂಧಿಯಲ್ಲಿ ಕಡಲ ಭದ್ರತೆ ಮತ್ತು ಶಾಶ್ವತ ಒಪ್ಪಂದವನ್ನು ಬೆಂಬಲಿಸಲು ಅಗತ್ಯವಿರುವ ವಿಶಾಲ ಪ್ರಾದೇಶಿಕ ಭದ್ರತಾ ವ್ಯವಸ್ಥೆಗಳು ಇತರ ಬಗೆಹರಿಯದ ಸಮಸ್ಯೆಗಳಾಗಿವೆ.

## ಹಾರ್ಮುಜ್ ಜಲಸಂಧಿ ಬಿಕ್ಕಟ್ಟಿನ ಮಧ್ಯೆ ತೈಲ ಉತ್ಪಾದನೆ ಹೆಚ್ಚಿಸಲು ಒಪೆಕ್ ಅನುಮೋದನೆ



**ಲಂಡನ್, ಜೂ.7:** ಸತತ ನಾಲ್ಕನೇ ತಿಂಗಳೂ ತೈಲ ಉತ್ಪಾದನೆ ಗುರಿ ಹೆಚ್ಚಿಸಲು ಒಪೆಕ್ ಒಕ್ಕೂಟದ ಪ್ರಮುಖ ಏಳು ಸದಸ್ಯ ರಾಷ್ಟ್ರಗಳಾದ ಸೌದಿ ಅರೇಬಿಯಾ, ರಷ್ಯಾ, ಇರಾಕ್, ಕುವೈತ್, ಕಝಾಕಸ್ತಾನ್, ಅಲ್ಜೀರಿಯಾ ಮತ್ತು ಒಮಾನ್ ಭಾನುವಾರದಂದು ಒಪ್ಪಿಕೊಂಡಿವೆ ಎಂದು ಒಕ್ಕೂಟದ ಹೇಳಿಕೆ ತಿಳಿಸಿದೆ. ಪ್ರಸ್ತುತ ನಡೆಯುತ್ತಿರುವ ಅಮೆರಿಕ–ಇರಾನ್ ಯುದ್ಧವು ಹಲವಾರು ಸದಸ್ಯ ರಾಷ್ಟ್ರಗಳ ಉತ್ಪಾದನಾ ಸಾಮರ್ಥ್ಯವನ್ನು ನಿರ್ಬಂಧಿಸುತ್ತಿರುವ ನಡುವೆಯೂ ಈ ನಿರ್ಧಾರ ಕೈಗೊಳ್ಳಲಾಗಿದೆ.

ಈ ಹಿಂದೆ ಏಪ್ರಿಲ್ ಮತ್ತು ನವೆಂಬರ್ 2023 ರಲ್ಲಿ ಸ್ವಯಂಪ್ರೇರಿತ ಹೆಚ್ಚುವರಿ ಉತ್ಪಾದನಾ ಕಡಿತವನ್ನು ಘೋಷಿಸಿದ್ದ ಈ ರಾಷ್ಟ್ರಗಳು, ಜಾಗತಿಕ ತೈಲ ಮಾರುಕಟ್ಟೆಯ ಪರಿಸ್ಥಿತಿ ಮತ್ತು ಮುನ್ನೋಟವನ್ನು ಪರಿಶೀಲಿಸಲು ವರ್ಚುವಲ್ (ದೃಶ್ಯ ಶ್ರವಣ) ಸಭೆಯನ್ನು ನಡೆಸಿದವು. ಈ ವೇಳೆ ತೈಲ ಉತ್ಪಾದನೆಯನ್ನು ಹೊಂದಾಣಿಕೆ ಮಾಡಲು ಮತ್ತು ಜಾಗತಿಕ ಮಾರುಕಟ್ಟೆಯ ಸ್ಥಿರತೆಯನ್ನು ಕಾಯ್ದುಕೊಳ್ಳುವ ತಮ್ಮ ಬದ್ಧತೆಯನ್ನು ಪುನರುಚ್ಚರಿಸಲು ಒಪ್ಪಿಕೊಂಡವು.

ಜಂಟಿ ಹೇಳಿಕೆಯಲ್ಲಿ, ಒಕ್ಕೂಟವು ಏಪ್ರಿಲ್ 2023 ರಲ್ಲಿ ಘೋಷಿಸಲಾಗಿದ್ದ ಸ್ವಯಂಪ್ರೇರಿತ ಕಡಿತದಿಂದ ದಿನಕ್ಕೆ 188,000 ಬ್ಯಾರಲ್‌ಗಳಷ್ಟು ಉತ್ಪಾದನಾ ಹೊಂದಾಣಿಕೆಯನ್ನು ಜಾರಿಗೊಳಿಸಲಿದೆ ಎಂದು ತಿಳಿಸಿದೆ. ಈ ಹೊಂದಾಣಿಕೆಯು ಜುಲೈ 2026 ರಿಂದ ಜಾರಿಗೆ ಬರಲು ನಿರ್ಧರಿಸಲಾಗಿದೆ ಎಂದು ಹೇಳಿಕೆ ತಿಳಿಸಿದೆ.

ಬದಲಾಗುತ್ತಿರುವ ಮಾರುಕಟ್ಟೆಯ ಪರಿಸ್ಥಿತಿಗಳನ್ನು ಅವಲಂಬಿಸಿ, ಈ ಸ್ವಯಂಪ್ರೇರಿತ ಕಡಿತಗಳನ್ನು ಭವಿಷ್ಯದಲ್ಲಿ ಭಾಗಶಃ ಅಥವಾ ಸಂಪೂರ್ಣವಾಗಿ ಹಿಂಪಡೆಯಬಹುದು ಎಂದು ಅವರು ತಿಳಿಸಿದ್ದಾರೆ. ಜಾಗತಿಕ ಪೂರೈಕೆ ಮತ್ತು ಬೇಡಿಕೆಯ ಪ್ರವೃತ್ತಿಗಳನ್ನು ನಿಕಟವಾಗಿ ಮೇಲ್ವಿಚಾರಣೆ ಮಾಡುವುದನ್ನು ಮುಂದುವರಿಸುವುದಾಗಿ ಒಕ್ಕೂಟವು ಒತ್ತಿಹೇಳಿದೆ. ಅಲ್ಲದೆ, ನವೆಂಬರ್ 2023 ರಲ್ಲಿ ಪರಿಚಯಿಸಲಾದ ನಿಯಮಗಳು ಸೇರಿದಂತೆ ಉತ್ಪಾದನಾ ಹೊಂದಾಣಿಕೆಗಳ ಹೆಚ್ಚಳ, ತಡೆಹಿಡಿಯುವಿಕೆ ಅಥವಾ ಹಿಮ್ಮುಖಗೊಳಿಸುವಿಕೆಗೆ ಅವಕಾಶ ನೀಡುವ ಎಚ್ಚರಿಕೆಯ ಮತ್ತು ಹೊಂದಿಕೊಳ್ಳುವ ವಿಧಾನವನ್ನು ಕಾಪಾಡಿಕೊಳ್ಳಲಾಗುವುದು ಎಂದು ಅದು ಸೇರಿಸಿದೆ.

ಈ ಕ್ರಮವು ಭಾಗವಹಿಸುವ ಸದಸ್ಯ ರಾಷ್ಟ್ರಗಳು ಈ ಹಿಂದೆ ಮಾಡಿದ್ದ ಅತಿಯಾದ ಉತ್ಪಾದನೆಯನ್ನು ಸರಿದೂಗಿಸಲು ಸಹಾಯ ಮಾಡುತ್ತದೆ ಎಂದು ಈ ದೇಶಗಳು ಹೇಳಿವೆ. ಅವರು ಸಹಕಾರದ ಘೋಷಣೆಗೆ ತಮ್ಮ ಸಂಪೂರ್ಣ ಬದ್ಧತೆಯನ್ನು ಪುನರುಚ್ಚರಿಸಿದ್ದಾರೆ ಮತ್ತು ನಿಯಮಗಳ ಪಾಲನೆಯನ್ನು ಜಂಟಿ ಸಚಿವ ಮಟ್ಟದ ಉಸ್ತುವಾರಿ ಸಮಿತಿ ಮೇಲ್ವಿಚಾರಣೆ ಮಾಡುವುದನ್ನು ಮುಂದುವರಿಸುತ್ತದೆ ಎಂದು ತಿಳಿಸಿದ್ದಾರೆ.

ಜನವರಿ 2024ರಿಂದ ಆಗಿರುವ ಯಾವುದೇ ಹೆಚ್ಚುವರಿ ಉತ್ಪಾದನೆಯನ್ನು ಸಂಪೂರ್ಣವಾಗಿ ಸರಿದೂಗಿಸಲಾಗುವುದು ಮತ್ತು ಈ ಪರಿಹಾರದ ಅವಧಿಯನ್ನು ಡಿಸೆಂಬರ್ 2026 ರ ಕೊನೆಯವರೆಗೆ ವಿಸ್ತರಿಸಲಾಗಿದೆ ಎಂದು ಅವರು ಖಚಿತಪಡಿಸಿದ್ದಾರೆ.

ಮಾರುಕಟ್ಟೆ ಪರಿಸ್ಥಿತಿಗಳು, ನಿಯಮ ಪಾಲನೆಯ ಮಟ್ಟಗಳು ಮತ್ತು ಪರಿಹಾರ ಕಾರ್ಯವಿಧಾನಗಳನ್ನು ಪರಿಶೀಲಿಸಲು ಪ್ರತಿ ತಿಂಗಳು ಸಭೆಗಳನ್ನು ನಡೆಸಲು ಒಕ್ಕೂಟವು ಒಪ್ಪಿಕೊಂಡಿದ್ದು, ಮುಂದಿನ ಸಭೆಯನ್ನು 5 ಜುಲೈ 2026 ಕ್ಕೆ ನಿಗದಿಪಡಿಸಲಾಗಿದೆ.

ಜಾಗತಿಕ ಇಂಧನ ಮಾರುಕಟ್ಟೆಗಳು ಅಸ್ಥಿರತೆಯ ಅವಧಿಗೆ ಸಾಕ್ಷಿಯಾಗುತ್ತಿರುವ ಬೆನ್ನಲ್ಲೇ, ಯುನೈಟೆಡ್ ಅರಬ್ ಎಮಿರೇಟ್ಸ್ ಆರು ದಶಕಗಳ ಸದಸ್ಯತ್ವದ ನಂತರ ಪೆಟ್ರೋಲಿಯಂ ರಫ್ತು ದೇಶಗಳ ಸಂಸ್ಥೆಯಿಂದ ಹೊರನಡೆದಿರುವುದು ಈ ಒಕ್ಕೂಟದ ಮೇಲಿನ ಒತ್ತಡವನ್ನು ಮತ್ತಷ್ಟು ಹೆಚ್ಚಿಸಿದೆ.

## ದಕ್ಷಿಣ ಕೊರಿಯಾದ ಹಾನ್ ಸಿಯೊಂಗ್ ಸೂಕ್ ಮುಂದಿನ ಪ್ರಧಾನಿ: ಅಧ್ಯಕ್ಷರಿಂದ ನೇಮಕ



**ಸಿಯೋಲ್, ಜೂನ್ 7:** ದಕ್ಷಿಣ ಕೊರಿಯಾದ ಅಧ್ಯಕ್ಷ ಲೀ ಜೇ ಮ್ಯುಂಗ್ ಭಾನುವಾರ ಹಾನ್ ಸಿಯೊಂಗ್–ಸೂಕ್ ಅವರನ್ನು ಪ್ರಧಾನಿಯಾಗಿ ನಾಮನಿರ್ದೇಶನ ಮಾಡಿದ್ದಾರೆ ಎಂದು ಅಧ್ಯಕ್ಷೀಯ ಕಚೇರಿ ಪ್ರಕಟಿಸಿದೆ. ದಕ್ಷಿಣ ಕೊರಿಯಾದ ಇಂಟರ್ನೆಟ್ ದೈತ್ಯ ನೇವರ್‌ನ ಮಾಜಿ ಮುಖ್ಯ ಕಾರ್ಯನಿರ್ವಾಹಕ ಹಾನ್, ಲೀ ಅವರ ಆಡಳಿತ ಪ್ರಾರಂಭವಾದಾಗಿನಿಂದ SMEಗಳು ಮತ್ತು ಸ್ಟಾರ್ಟ್‌ಅಪ್‌ಗಳ ಸಚಿವೆಯಾಗಿ ಸೇವೆ ಸಲ್ಲಿಸಿದ್ದಾರೆ. ಅವರು ತಂತ್ರಜ್ಞಾನ ವಲಯ ಮತ್ತು ಡಿಜಿಟಲ್ ನಾವೀನ್ಯತೆಯಲ್ಲಿನ ಅನುಭವಕ್ಕಾಗಿ ವ್ಯಾಪಕವಾಗಿ ಹೆಸರುವಾಸಿಯಾಗಿದ್ದಾರೆ. "ಐಟಿ ಕಂಪನಿಯ ಮುಖ್ಯಸ್ಥೆಯಾಗಿ ಮತ್ತು ಸಣ್ಣ ಮತ್ತು ಮಧ್ಯಮ ಉದ್ಯಮಗಳ ಸಚಿವೆಯಾಗಿ ಅವರ ಅನುಭವದ ಆಧಾರದ ಮೇಲೆ, ಅವರು ಐಐ (ಕೃತಕ ಬುದ್ಧಿಮತ್ತೆ) ಗೆ ದೊಡ್ಡ ಪ್ರಮಾಣದ ಪರಿವರ್ತನೆಯನ್ನು ನಿರ್ವಹಿಸಲು ಅತ್ಯಂತ ಸೂಕ್ತ ಅಭ್ಯರ್ಥಿಯಾಗಿದ್ದಾರೆ, ಇದು ನಮ್ಮ ಯುಗದ ಪ್ರಮುಖ ಕಾರ್ಯವಾಗಿದೆ, ಇದು ಹಿನ್ನಡೆಗಳಿಲ್ಲದೆ, ಮತ್ತು ಕೆಲವು ನಾಗರಿಕರಿಗೆ ಮಾತ್ರವಲ್ಲದೆ ಇಡೀ ಕೊರಿಯಾ ಗಣರಾಜ್ಯಕ್ಕೆ ಬೆಳವಣಿಗೆಯನ್ನು ಖಚಿತಪಡಿಸುತ್ತದೆ" ಎಂದು ಕಾಂಗ್ ಹೇಳಿದರು. ಹಾನ್ ಈ ಹಿಂದೆ ದಕ್ಷಿಣ ಕೊರಿಯಾದ ಅತಿದೊಡ್ಡ ಇಂಟರ್ನೆಟ್ ಪೋರ್ಟಲ್ ನೇವರ್ ಮುನ್ನಡೆಸಿದ್ದರು ಮತ್ತು ಅವರ ವೃತ್ತಿಜೀವನದ ಬಹುಪಾಲು ಸಮಯವನ್ನು ಇಂಟರ್ನೆಟ್ ಉದ್ಯಮದಲ್ಲಿ ಕಳೆದಿದ್ದಾರೆ.

ರಾಷ್ಟ್ರೀಯ ಅಸೆಂಬ್ಲಿಯಲ್ಲಿ ಅವರ ಉಮೇದುವಾರಿಕೆಗೆ ಅನುಮೋದನೆ ದೊರೆತರೆ, ಹಾನ್ ಅವರು ಲೀ ಜೇ–ಮ್ಯುಂಗ್ ಆಡಳಿತದಲ್ಲಿ ಮೊದಲ ಮಹಿಳಾ ಪ್ರಧಾನಿಯಾಗಲಿದ್ದಾರೆ ಮತ್ತು 2006–2007ರಲ್ಲಿ ಸರ್ಕಾರವನ್ನು ಮುನ್ನಡೆಸಿದ್ದ ಹಾನ್ ಮ್ಯುಂಗ್–ಸೂಕ್ ನಂತರ ದಕ್ಷಿಣ ಕೊರಿಯಾದ ಇತಿಹಾಸದಲ್ಲಿ ಈ ಹುದ್ದೆಯನ್ನು ಅಲಂಕರಿಸಿದ ಎರಡನೇ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾಗಲಿದ್ದಾರೆ. ಮಾಧ್ಯಮ ವರದಿಗಳ ಪ್ರಕಾರ, ದಕ್ಷಿಣ ಕೊರಿಯಾದ ಪ್ರಸ್ತುತ ಪ್ರಧಾನಿ ಕಿಮ್ ಮಿನ್–ಸಿಯೋಕ್ ಒಂದು ವರ್ಷದ ಅಧಿಕಾರಾವಧಿಯ ನಂತರ ರಾಜೀನಾಮೆ ನೀಡುತ್ತಿದ್ದಾರೆ.

ಆಗಸ್ಟ್ ಅಥವಾ ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ಆಂತರಿಕ ಚುನಾವಣೆಯಲ್ಲಿ ಕಿಮ್ ಆಡಳಿತಾರೂಢ ಡೆಮಾಕ್ರಟಿಕ್ ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ಯೋಜಿಸಿದ್ದಾರೆ ಎಂದು ದಕ್ಷಿಣ ಕೊರಿಯಾದ ಮಾಧ್ಯಮಗಳು ತಿಳಿಸಿವೆ. ಅವರ ರಾಜೀನಾಮೆ ಮತ್ತು ಪರಿವರ್ತನಾ ಪ್ರಕ್ರಿಯೆಯ ಕುರಿತು ಹೆಚ್ಚಿನ ವಿವರಗಳನ್ನು ಇನ್ನೂ ಅಧಿಕೃತವಾಗಿ ಘೋಷಿಸಲಾಗಿಲ್ಲ.

## ಸ್ಯಾಫ್ ಚಾಂಪಿಯನ್‌ಶಿಪ್ ಗೆದ್ದ ಭಾರತೀಯ ಮಹಿಳಾ ಫುಟ್‌ಬಾಲ್ ತಂಡ: ಪ್ರಧಾನಿ ಅಭಿನಂದನೆ




**ನವದೆಹಲಿ, ಜೂ.7:** 2026ರ ದಕ್ಷಿಣ ಏಷ್ಯಾ ಫುಟ್‌ಬಾಲ್ ಫೆಡರೇಶನ್ ಮಹಿಳಾ ಚಾಂಪಿಯನ್‌ಶಿಪ್ ಗೆದ್ದ ಭಾರತೀಯ ಮಹಿಳಾ ಫುಟ್‌ಬಾಲ್ ತಂಡಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಅಭಿನಂದನೆ ಸಲ್ಲಿಸಿದ್ದಾರೆ. ಟೂರ್ನಿಯುದ್ದಕ್ಕೂ ಅತ್ಯುತ್ತಮ ಪ್ರದರ್ಶನ ನೀಡಿದ ಆಟಗಾರ್ತಿಯರನ್ನು ಶ್ಲಾಘಿಸಿರುವ ಅವರು, ಈ ಯಶಸ್ಸು ಮತ್ತಷ್ಟು ಯುವಕರು ಕ್ರೀಡೆಯಲ್ಲಿ ತೊಡಗಿಸಿಕೊಳ್ಳಲು ಪ್ರೇರಣೆಯಾಗಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದ್ದಾರೆ.


ಈ ಬಗ್ಗೆ ತಮ್ಮ ಎಕ್ಸ್‌ನಲ್ಲಿ ಮಾಹಿತಿ ಹಂಚಿಕೊಂಡಿರುವ ಪ್ರಧಾನಿ ಮೋದಿ, ಪ್ರಾದೇಶಿಕ ಚಾಂಪಿಯನ್‌ಶಿಪ್‌ನಲ್ಲಿ ಭಾರತ ಸಾಧಿಸಿದ ಈ ಗೆಲುವು ದೇಶದ ಮಹಿಳಾ ಫುಟ್‌ಬಾಲ್ ಇತಿಹಾಸದಲ್ಲಿ ಮತ್ತೊಂದು ಪ್ರಮುಖ ಮೈಲಿಗಲ್ಲಾಗಿದೆ ಮತ್ತು ದಕ್ಷಿಣ ಏಷ್ಯಾದ ಫುಟ್‌ಬಾಲ್‌ನಲ್ಲಿ ತಂಡದ ಪ್ರಾಬಲ್ಯವನ್ನು ಮತ್ತೊಮ್ಮೆ ಸಾಬೀತುಪಡಿಸಿದೆ. ತಳಮಟ್ಟದ ಅಭಿವೃದ್ಧಿ ಕಾರ್ಯಕ್ರಮಗಳು, ಸುಧಾರಿತ ಮೂಲಸೌಕರ್ಯಗಳು ಮತ್ತು ದೇಶೀಯ ಹಾಗೂ ಅಂತರರಾಷ್ಟ್ರೀಯ ಸ್ಪರ್ಧೆಗಳಲ್ಲಿ ಹೆಚ್ಚಿನ ಭಾಗವಹಿಸುವಿಕೆಯ ಮೂಲಕ ಮಹಿಳಾ ಕ್ರೀಡೆಯನ್ನು ಬಲಪಡಿಸುವ ಪ್ರಯತ್ನಗಳು ನಡೆಯುತ್ತಿರುವ ಬೆನ್ನಲ್ಲೇ ಈ ಗೆಲುವು ಬಂದಿದೆ.

ಪ್ರಧಾನಮಂತ್ರಿಯವರ ಮಾತುಗಳು ತಂಡದ ಯಶಸ್ಸಿನ ವ್ಯಾಪಕ ಪರಿಣಾಮವನ್ನು ಕೇವಲ ಫುಟ್‌ಬಾಲ್ ಮೈದಾನಕ್ಕೆ ಮಾತ್ರ ಸೀಮಿತಗೊಳಿಸದೆ, ಹೊಸ ಪೀಳಿಗೆಯ ಆಟಗಾರರನ್ನು ಪ್ರೇರೇಪಿಸುವ ಅದರ ಸಾಮರ್ಥ್ಯವನ್ನು ಒತ್ತಿಹೇಳಿವೆ. ಕ್ರೀಡಾ ಆಡಳಿತಗಾರರು ಮತ್ತು ಫುಟ್‌ಬಾಲ್ ತಜ್ಞರು ದೇಶಾದ್ಯಂತ ಯುವ ಕ್ರೀಡಾಪಟುಗಳನ್ನು ಆಕರ್ಷಿಸಲು ಮತ್ತು ಕ್ರೀಡೆಯ ಜನಪ್ರಿಯತೆಯನ್ನು ವಿಸ್ತರಿಸಲು ಇಂತಹ ಅಂತರರಾಷ್ಟ್ರೀಯ ಸಾಧನೆಗಳ ಪ್ರಾಮುಖ್ಯತೆಯನ್ನು ಪದೇ ಪದೇ ಪ್ರಸ್ತಾಪಿಸಿದ್ದಾರೆ.

ಭಾರತೀಯ ಮಹಿಳಾ ತಂಡವು ಸ್ಯಾಫ್ ಮಹಿಳಾ ಚಾಂಪಿಯನ್‌ಶಿಪ್ ಇತಿಹಾಸದಲ್ಲೇ ಅತ್ಯಂತ ಯಶಸ್ವಿ ತಂಡಗಳಲ್ಲಿ ಒಂದಾಗಿದ್ದು, ಪ್ರಾದೇಶಿಕ ಟೂರ್ನಿಯಲ್ಲಿ ನಿರಂತರವಾಗಿ ಉನ್ನತ ಮಟ್ಟದ ಪ್ರದರ್ಶನ ನೀಡುತ್ತಾ ಬಂದಿದೆ. ಅವರ ಈ ಇತ್ತೀಚಿನ ಪ್ರಶಸ್ತಿಯು ತಂಡದ ಪ್ರಭಾವಶಾಲಿ ದಾಖಲೆಗೆ ಮತ್ತೊಂದು ಗರಿಯನ್ನು ಸೇರಿಸಿದೆ ಮತ್ತು ದಕ್ಷಿಣ ಏಷ್ಯಾದಲ್ಲಿ ಮಹಿಳಾ ಫುಟ್‌ಬಾಲ್‌ನಲ್ಲಿ ಭಾರತದ ಮುಂದುವರಿದ ಶಕ್ತಿಯನ್ನು ಎತ್ತಿ ತೋರಿಸುತ್ತದೆ. ಚಾಂಪಿಯನ್‌ಶಿಪ್‌ನ ಈ ವಿಜಯವನ್ನು ಇಡೀ ಕ್ರೀಡಾ ಸಮುದಾಯವು ಸಂಭ್ರಮಿಸಿದ್ದು, ಆಟಗಾರರು, ತರಬೇತುದಾರರು ಮತ್ತು ಅಭಿಮಾನಿಗಳು ತಂಡದ ದೃಢಸಂಕಲ್ಪ, ಕೌಶಲ್ಯ ಮತ್ತು ಸಾಂಘಿಕ ಆಟವನ್ನು ಶ್ಲಾಘಿಸಿದ್ದಾರೆ. ಈ ಗೆಲುವು ಮಹಿಳಾ ಫುಟ್‌ಬಾಲ್ ಅನ್ನು ಉತ್ತೇಜಿಸುವ ಮತ್ತು ಭಾರತದಾದ್ಯಂತ ಮಹತ್ವಾಕಾಂಕ್ಷಿ ಫುಟ್‌ಬಾಲ್ ಆಟಗಾರರಿಗೆ ಹೆಚ್ಚಿನ ಅವಕಾಶಗಳನ್ನು ಸೃಷ್ಟಿಸುವ ನಿರಂತರ ಪ್ರಯತ್ನಗಳಿಗೆ ಹೆಚ್ಚಿನ ಉತ್ತೇಜನ ನೀಡುವ ನಿರೀಕ್ಷೆಯಿದೆ.

ಸ್ಯಾಫ್ ಮಹಿಳಾ ಚಾಂಪಿಯನ್‌ಶಿಪ್ ಟ್ರೋಫಿಯನ್ನು ಮತ್ತೊಮ್ಮೆ ತನ್ನದಾಗಿಸಿಕೊಂಡಿರುವ ಭಾರತ ತಂಡವು, ಈಗ ದೇಶದ ಬೆಳೆಯುತ್ತಿರುವ ಫುಟ್‌ಬಾಲ್ ಸಮುದಾಯದ ಭರವಸೆಗಳು ಮತ್ತು ದೇಶಾದ್ಯಂತದ ಲಕ್ಷಾಂತರ ಬೆಂಬಲಿಗರ ಪ್ರೋತ್ಸಾಹವನ್ನು ಹೊತ್ತು ತನ್ನ ಮುಂದಿನ ಅಂತರರಾಷ್ಟ್ರೀಯ ಪಂದ್ಯಗಳತ್ತ ಗಮನ ಹರಿಸಿದೆ.

## ಓಲ್ಡ್ ವೆಸ್ಟ್ ಎಂಡ್ ಫೆಸ್ಟಿವಲ್ ಮೇಲೆ ಗುಂಡಿನ ದಾಳಿ: 12 ಮಂದಿಗೆ ಗಾಯ




**ಟೋಲೆಡೊ, ಜೂ.7:** ಅಮೆರಿಕದ ಓಹಿಯೊ ರಾಜ್ಯದ ಟೋಲೆಡೊ ನಗರದಲ್ಲಿ ನಡೆದ ಸಮುದಾಯ ಉತ್ಸವದ ಬಳಿ ನಡೆದ ಗುಂಡಿನ ದಾಳಿಯಲ್ಲಿ ಕನಿಷ್ಠ 12 ಮಂದಿ ಗಾಯಗೊಂಡಿದ್ದಾರೆ. ಗುಂಡಿನ ದಾಳಿ ನಡೆದ ನಂತರ ಜನರು ಆತಂಕದಿಂದ ಸುರಕ್ಷಿತ ಸ್ಥಳಗಳತ್ತ ಓಡಿಹೋಗಿದ್ದು, ಶಂಕಿತ ದಾಳಿಕೋರರಿಗೆ ಶೋಧ ಕಾರ್ಯ ಮುಂದುವರಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಗಾಯಗೊಂಡವರಲ್ಲಿ ಇಬ್ಬರ ಸ್ಥಿತಿ ಗಂಭೀರವಾಗಿದೆ ಎಂದು ಟೋಲೆಡೊ ಪೊಲೀಸ್ ಇಲಾಖೆಯ ಉಪ ಪೊಲೀಸ್ ಮುಖ್ಯಸ್ಥ ಜೋ ಹೆಫರ್ನನ್ ತಿಳಿಸಿದ್ದಾರೆ. ಕನಿಷ್ಠ ಇಬ್ಬರು ಪರಸ್ಪರ ಗುರಿಯಾಗಿಸಿಕೊಂಡು ಗುಂಡಿನ ದಾಳಿ ನಡೆಸಿದಂತೆ ಕಂಡುಬರುತ್ತಿದೆ ಎಂದು ಅವರು ಹೇಳಿದರು.

ಟೋಲೆಡೊ ಪೊಲೀಸ್ ಇಲಾಖೆ ತಿಳಿಸಿದಂತೆ, ಈ ಘಟನೆ ನಗರದ ಐತಿಹಾಸಿಕ ಪ್ರದೇಶದಲ್ಲಿ ಪ್ರತಿವರ್ಷ ನಡೆಯುವ ಓಲ್ಡ್ ವೆಸ್ಟ್ ಎಂಡ್ ಫೆಸ್ಟಿವಲ್ ಸಮೀಪ ಸಂಭವಿಸಿದೆ. ಈ ಉತ್ಸವದಲ್ಲಿ ಲೈವ್ ಮ್ಯೂಸಿಕ್ ಕಾರ್ಯಕ್ರಮಗಳು ಮತ್ತು ಐತಿಹಾಸಿಕ ಮನೆಗಳ ವೀಕ್ಷಣೆ ಪ್ರಮುಖ ಆಕರ್ಷಣೆಯಾಗಿರುತ್ತವೆ. ಈ ದಾಳಿಗೆ ಹೊಣೆಗಾರ ರಾಗಿರುವವರಿಗಾಗಿ ಸಕ್ರಿಯ ಶೋಧ ಕಾರ್ಯ ನಡೆಯುತ್ತಿದೆ ಎಂದು ಇಲಾಖೆ ತಿಳಿಸಿದೆ.

ಟೋಲೆಡೊದಲ್ಲಿ ನಡೆದ ಘಟನೆಯ ಬಗ್ಗೆ ನನಗೆ ತೀವ್ರ ಕಳವಳವಾಗಿದೆ. ಬೇಸಿಗೆ ಉತ್ಸವಗಳು ಕುಟುಂಬಗಳು ಯಾವುದೇ ಹಿಂಸೆಯ ಭಯವಿಲ್ಲದೆ ಒಟ್ಟಾಗಿ ಸಮಯ ಕಳೆಯುವ ಸುರಕ್ಷಿತ ಸ್ಥಳಗಳಾಗಿರಬೇಕು ಎಂದು ಓಹಿಯೊ ರಾಜ್ಯಪಾಲ ಒಜಇಜ ಆಜಘುಟಿಜ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾದ ಹಲವು ವೀಡಿಯೊಗಳಲ್ಲಿ ಗುಂಡಿನ ಸದ್ದು ಕೇಳಿಬರುತ್ತಿದ್ದಂತೆ ಜನರು ಓಡುತ್ತಿರುವುದು ಹಾಗೂ ತುರ್ತುಸೇವಾ ಸಿಬ್ಬಂದಿ ಗಾಯಾಳುಗಳಿಗೆ ಚಿಕಿತ್ಸೆ ನೀಡುತ್ತಿರುವುದು ಕಾಣಿಸಿಕೊಂಡಿದೆ.

ಕೆವಿನ್ ಬೆರಿ ಎಂಬವರು ತಮ್ಮ ಸ್ನೇಹಿತರೊಂದಿಗೆ ಪ್ರದೇಶದ ಸಸ್ಯೋದ್ಯಾನದಲ್ಲಿ ಕುಳಿತು ಲೈವ್ ಮ್ಯೂಸಿಕ್ ಆಲಿಸುತ್ತಿದ್ದಾಗ ಕೆಲವು ಗುಂಡಿನ ಸದ್ದುಗಳನ್ನು ಕೇಳಿದ್ದಾಗಿ ಹೇಳಿದ್ದಾರೆ. ಗಾಯಗೊಂಡವರು ಸಸ್ಯೋದ್ಯಾನದ ಸುತ್ತಮುತ್ತ ವಿವಿಧ ಕಡೆಗಳಲ್ಲಿ ಚದುರಿಕೊಂಡಿದ್ದರು ಎಂದು ಅವರು ಹೇಳಿದರು.

ಓಲ್ಡ್ ವೆಸ್ಟ್ ಎಂಡ್ ಫೆಸ್ಟಿವಲ್ ಟೋಲೆಡೊ ನಗರದ ಐತಿಹಾಸಿಕ ಪ್ರದೇಶದಲ್ಲಿ ಎರಡು ದಿನಗಳ ಕಾಲ ನಡೆಯುವ ಸಂಭ್ರಮಾಚರಣೆಯಾಗಿದ್ದು, ಇದರಲ್ಲಿ ಲೈವ್ ಮ್ಯೂಸಿಕ್, ಆಹಾರ ಮಳಿಗೆಗಳು, ಮನೆಗಳ ವೀಕ್ಷಣೆ ಹಾಗೂ ಖರೀದಿ ಅವಕಾಶಗಳು ಸೇರಿವೆ.ಈ ಉತ್ಸವವನ್ನು ಟೋಲೆಡೊ ನಗರದ ಬೇಸಿಗೆ ಉತ್ಸವಗಳ ಆರಂಭದ ಸಂಕೇತ ಎಂದು ಬೆರಿ ವಿವರಿಸಿದ್ದಾರೆ.

## ಅಮೆರಿಕಾದಲ್ಲಿ ಭಾರತೀಯ ಮೂಲದ ಯುವಕನ ಹತ್ಯೆ



**ಹೈದರಾಬಾದ್, ಜೂ.7:** ಪಿಜ್ಜಾ ಡೆಲಿವರಿ ಮಾಡಲು ತೆರಳಿದ್ದ ಭಾರತೀಯ ಮೂಲದ ಯುವಕನೊಬ್ಬನನ್ನು ಗುಂಡಿಟ್ಟು ಹತ್ಯೆ ಮಾಡಿರುವ ಘಟನೆ ಅಮೆರಿಕದ ಫಿಲಡೆಲ್ಫಿಯಾದಲ್ಲಿ ನಡೆದಿದೆ. ವಾರಾಂತ್ಯದಲ್ಲಿ ಅರೆಕಾಲಿಕ ಪಿಜ್ಜಾ ಡೆಲಿವರಿ ಕೆಲಸ ಮಾಡುತ್ತಿದ್ದ ತೆಲಂಗಾಣ ಮೂಲದ 28 ವರ್ಷದ ಭಾರತೀಯ ಅನ್ಶುಲ್ ಕುಂಚ ಹತ್ಯೆಯಾದ ಯುವಕನಾಗಿದ್ದಾನೆ.

ಶನಿವಾರ ರಾತ್ರಿ ಅಂಶುಲ್‌ಗೆ ನಿರ್ಜನ ಪ್ರದೇಶವೊಂದಕ್ಕೆ ಪಿಜ್ಜಾ ತಲುಪಿಸುವ ಆರ್ಡರ್ ಬಂದಿತ್ತು. ಆ ವಿಳಾಸಕ್ಕೆ ತೆರಳಿದಾಗ ದುಷ್ಕರ್ಮಿಯೊಬ್ಬ ಏಕಾಏಕಿ ಗುಂಡಿನ ದಾಳಿ ನಡೆಸಿದ್ದು, ಅನ್ಶುಲ್ ಅವರ ತಲೆಗೆ ಹಲವು ಬಾರಿ ಗುಂಡು ಹಾರಿಸಿ ಪರಾರಿಯಾಗಿದ್ದಾನೆ ಎಂದು ವರದಿಯಾಗಿದೆ.

ಘಟನೆಯ ನಂತರ ಅನ್ಶುಲ್ ಅವರ ಬಳಿಯಿಂದ ಯಾವುದೇ ವಸ್ತುಗಳನ್ನು ಕಳವು ಮಾಡಲಾಗಿಲ್ಲ. ಇದರಿಂದ ದರೋಡೆ ಉದ್ದೇಶವಲ್ಲದೆ, ಪೂರ್ವಯೋಜಿತ ಹತ್ಯೆಯಾಗಿರಬಹುದು ಎಂಬ ಅನುಮಾನಗಳು ವ್ಯಕ್ತವಾಗಿವೆ.

ಘಟನೆ ನಡೆದ ಸಮಯದಲ್ಲಿ ಬ್ಯಾಕ್‌ಪ್ಯಾಕ್ ಧರಿಸಿದ್ದ ಇಬ್ಬರು ಮುಸುಕುಧಾರಿ ವ್ಯಕ್ತಿಗಳು ಆ ಪ್ರದೇಶದಲ್ಲಿ ಕಾಣಿಸಿಕೊಂಡಿದ್ದರು ಎಂದು ಅಂಶುಲ್ ಕುಟುಂಬದವರು ತಿಳಿಸಿದ್ದಾರೆ. ಮೃತನ ಸಹೋದರಿ ತನ್ವಿ ಕುಂಚಾ ಮಾತನಾಡಿ, ನನ್ನ ಸಹೋದರನನ್ನು ಕೊಲ್ಲುವ ಉದ್ದೇಶದಿಂದಲೇ ಈ ನಕಲಿ ಪಿಜ್ಜಾ ಆರ್ಡರ್ ನೀಡಲಾಗಿತ್ತು.

ಅಲ್ಲಿ ಯಾರೂ ಇರಲಿಲ್ಲ. ಅದು ಕೇವಲ ಟ್ರ್ಯಾಪ್ ಆಗಿತ್ತು. ಅವರ ಉದ್ದೇಶ ಏನಿತ್ತು ಎಂಬುದು ನಮಗೆ ತಿಳಿದಿಲ್ಲ. ಆದರೆ, ನನ್ನ ಸಹೋದರನ ಜೀವವನ್ನು ಕಸಿದುಕೊಂಡಿದ್ದಾರೆ ಎಂದು ಆರೋಪಿಸಿದ್ದಾರೆ.

## ಲಾಂಗ್‌ಜಂಪ್‌ನಲ್ಲಿ ಚಿನ್ನ ಗೆದ್ದ ಶೈಲಿಸಿಂಗ್




**ತೈಪೇ, ಜೂ.7:** ನ್ಯೂ ತೈಪೇ ಸಿಟಿ ಅಥ್ಲೆಟಿಕ್ಸ್ ಓಪನ್ 2026 ರಲ್ಲಿ ಶೈಲಿಸಿಂಗ್ ಅವರು ಮಹಿಳೆಯರ ಲಾಂಗ್ ಜಂಪ್ (ಉದ್ದ ಜಿಗಿತ) ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದಾರೆ. ಇದರೊಂದಿಗೆ ಭಾರತೀಯ ಅಥ್ಲೀಟ್‌ಗಳು ವಾರಾಂತ್ಯದಲ್ಲಿ ಒಟ್ಟು ನಾಲ್ಕು ಪದಕಗಳೊಂದಿಗೆ ಅಭಿಯಾನವನ್ನು ಮುಗಿಸಿದ್ದಾರೆ.

ಚೈನೀಸ್ ತೈಪೇಯ ಬಾನ್ಕಿಯಾವೊ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಸ್ಪರ್ಧೆಯಲ್ಲಿ ಶೈಲಿಸಿಂಗ್ ಅವರು 6.24 ಮೀಟರ್ ದೂರ ಜಿಗಿಯುವ ಮೂಲಕ ವಿಯೆಟ್ನಾಂನ ಟ್ರಾನ್ ತಿ ಲೋನ್ (6.23 ಮೀ) ಮತ್ತು ಆಸ್ಟ್ರೇಲಿಯಾದ ಜೊಯಿ ಚೆಸ್ಟರ್ (6.13 ಮೀ) ಅವರನ್ನು ಹಿಂದಿಕ್ಕಿ ಪ್ರಥಮ ಸ್ಥಾನ ಪಡೆದರು.

ಶೈಲಿಸಿಂಗ್ ಅವರ ಈ ಆವೃತ್ತಿಯ ಅತ್ಯುತ್ತಮ ಪ್ರದರ್ಶನವು (6.58 ಮೀ) ಕಳೆದ ತಿಂಗಳು ನಡೆದ ಫೆಡರೇಶನ್ ಕಪ್‌ನಲ್ಲಿ ದಾಖಲಾಗಿತ್ತು. ಇನ್ನು ಅವರ ವೈಯಕ್ತಿಕ ಅತ್ಯುತ್ತಮ ಪ್ರದರ್ಶನ 6.76 ಮೀಟರ್ ಆಗಿದ್ದು, ಇದನ್ನು ಅವರು 2023 ರಲ್ಲಿ ಸಾಧಿಸಿದ್ದರು. ಈ ಸಾಧನೆಯು ಭಾರತದ ಅಂಡರ್–20 (ಗ20) ರಾಷ್ಟ್ರೀಯ ದಾಖಲೆಯೂ ಆಗಿದೆ. ಇನ್ನು ಹಿರಿಯ ಮಹಿಳೆಯರ ಲಾಂಗ್ ಜಂಪ್‌ನಲ್ಲಿ 6.83 ಮೀಟರ್‌ಗಳ ರಾಷ್ಟ್ರೀಯ ದಾಖಲೆಯು ಅಂಜು ಬಾಬಿ ಜಾರ್ಜ್ ಅವರ ಹೆಸರಿನಲ್ಲಿದೆ. ಎಸ್‌ಎಸ್ ಸ್ನೇಹಾ, ರಿಯೊ 2016 ರ ಒಲಿಂಪಿಯನ್ ಶ್ರಬಾನಿ ನಂದಾ, ಸುದೇಷ್ಣಾ ಶಿವಂಕರ್ ಮತ್ತು ತಮನ್ನಾ ಅವರನ್ನೊಳಗೊಂಡ ಭಾರತದ ಮಹಿಳೆಯರ 4ಥ100 ಮೀಟರ್ ರಿಲೇ ತಂಡವು ಅತ್ಯುತ್ತಮ ಪ್ರದರ್ಶನ ನೀಡಿದ್ದು, 44.07 ಸೆಕೆಂಡುಗಳಲ್ಲಿ ಗುರಿ ತಲುಪುವ ಮೂಲಕ ಕೂಟದ ದಾಖಲೆಯನ್ನು ಸರಿಗಟ್ಟಿ ಚಿನ್ನದ ಪದಕ ಗೆದ್ದುಕೊಂಡಿದೆ. olympics.com ವರದಿಯ ಪ್ರಕಾರ ಥೈಲ್ಯಾಂಡ್ ತಂಡವು 44.68 ಸೆಕೆಂಡುಗಳೊಂದಿಗೆ ಎರಡನೇ ಸ್ಥಾನ ಪಡೆಯಿತು.

ಶನಿವಾರ ನಡೆದ ಪುರುಷರ 110 ಮೀಟರ್ ಹರ್ಡಲ್ಸ್ (ಅಡೆತಡೆ ಓಟ) ಸ್ಪರ್ಧೆಯಲ್ಲಿ ತೇಜಸ್ ಶಿರ್ಸೆ ಬೆಳ್ಳಿ ಪದಕ ಗೆದ್ದಿದ್ದಾರೆ. ಫೈನಲ್‌ನಲ್ಲಿ ಶಿರ್ಸೆ 13.58 ಸೆಕೆಂಡುಗಳಲ್ಲಿ ಗುರಿ ತಲುಪುವ ಮೂಲಕ ಕೇವಲ 0.01 ಸೆಕೆಂಡುಗಳ ವ್ಯತ್ಯಾಸದಲ್ಲಿ ಚಿನ್ನದ ಪದಕವನ್ನು ಕೈತಪ್ಪಿಸಿಕೊಂಡರು. ಚೈನೀಸ್ ತೈಪೇಯ ಸೀ ಯುವಾನ್–ಕೈ 13.57 ಸೆಕೆಂಡುಗಳಲ್ಲಿ ಓಟ ಮುಗಿಸಿ ಚಿನ್ನ ಗೆದ್ದರೆ, ಮಲೇಷ್ಯಾದ ಮೊಹಮ್ಮದ್ ಅರ್ಮಿನ್ ಜಫ್ರಿಲ್ ಅಬ್ದುಲ್ ಲತೀಫ್ 13.87 ಸೆಕೆಂಡುಗಳೊಂದಿಗೆ ಕಂಚಿನ ಪದಕ ಪಡೆದರು.

ಶಿರ್ಸೆ ಅವರ ಈ ಸೀಸನ್‌ನ ಅತ್ಯುತ್ತಮ ಸಮಯ (13.43 ಸೆಕೆಂಡ್) ಕಳೆದ ತಿಂಗಳು ಚೆನ್ನೈನಲ್ಲಿ ನಡೆದ ಇಂಡಿಯನ್ ಓಪನ್ ಅಥ್ಲೆಟಿಕ್ಸ್ ಸರಣಿಯಲ್ಲಿ ದಾಖಲಾಗಿತ್ತು. ಈ ಸ್ಪರ್ಧೆಯಲ್ಲಿ ಭಾರತದ ರಾಷ್ಟ್ರೀಯ ದಾಖಲೆಯು 13.41 ಸೆಕೆಂಡುಗಳಾಗಿದ್ದು, ಇದನ್ನು ಸಹ ಶಿರ್ಸೆ ಅವರೇ 2024 ರಲ್ಲಿ ಸ್ಥಾಪಿಸಿದ್ದರು.

ಭಾನುವಾರದಂದು ನಡೆದ ಪುರುಷರ 200 ಮೀಟರ್ ಓಟದ ಸ್ಪರ್ಧೆಯಲ್ಲಿ ಭಾರತದ ಸ್ಪ್ರಿಂಟರ್ ಅನಿಮೇಶ್ ಕುಜುರ್ 20.47 ಸೆಕೆಂಡುಗಳಲ್ಲಿ ಗುರಿ ತಲುಪಿ ಬೆಳ್ಳಿ ಪದಕ ಗೆಲ್ಲುವ ಮೂಲಕ ಭಾರತದ ಅಭಿಯಾನಕ್ಕೆ ಮುಕ್ತಾಯ ಹಾಡಿದರು.

ಏಷ್ಯನ್ ಗೇಮ್ಸ್ ಬೆಳ್ಳಿ ಪದಕ ವಿಜೇತ, ಥೈಲ್ಯಾಂಡ್‌ನ ಪುರಿಪೋಲ್ ಬೂನ್ಸನ್ 20.03 ಸೆಕೆಂಡುಗಳಲ್ಲಿ ಓಟ ಮುಗಿಸಿ ಚಿನ್ನ ಗೆದ್ದರೆ, ಗೆ ವುಯಾನ್ಮಿಂಗ್ 20.65 ಸೆಕೆಂಡುಗಳೊಂದಿಗೆ ಮೂರನೇ ಸ್ಥಾನ ಪಡೆದರು. ಅನಿಮೇಶ್ ಅವರು ಪುರುಷರ 200 ಮೀಟರ್ ಓಟದಲ್ಲಿ 20.32 ಸೆಕೆಂಡುಗಳ ಭಾರತೀಯ ರಾಷ್ಟ್ರೀಯ ದಾಖಲೆಯನ್ನು ಹೊಂದಿದ್ದು, ಇದನ್ನು ಅವರು 2025 ರ ಏಷ್ಯನ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಸಾಧಿಸಿದ್ದರು.

ನ್ಯೂ ತೈಪೇ ಸಿಟಿ ಅಥ್ಲೆಟಿಕ್ಸ್ ಓಪನ್ ಕೂಟವನ್ನು 2026 ರ ಸೀಸನ್‌ನಿಂದ 'ವರ್ಲ್ಡ್ ಅಥ್ಲೆಟಿಕ್ಸ್ ಕಾಂಟಿನೆಂಟಲ್ ಟೂರ್ ಸಿಲ್ವರ್–ಲೆವೆಲ್' ಕೂಟವಾಗಿ ಮೇಲ್ದರ್ಜೆಗೆ ಏರಿಸಲಾಗಿದೆ. ಇದಕ್ಕೂ ಮುನ್ನ ಇದನ್ನು ಬ್ರಾನ್ಜ್–ಲೆವೆಲ್ (ಕಂಚಿನ ಮಟ್ಟದ) ಸ್ಪರ್ಧೆಯಾಗಿ ವರ್ಗೀಕರಿಸಲಾಗಿತ್ತು.